ಹೊಸ ದಿಗಂತ

ADMISSIONS
OPEN FOR
PU COLLEGE

ALVA'S
CENTRAL SCHOOL
100% RESULTS
MARKS THAT MADE HISTORY, MINDS THAT MADE ALVA'S PROUD
ALVA'S PU-COLLEGE

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	4	1	3	0	2	-0.772
ಕೆಕೆಆರ್	5	0	4	1	1	-1.383

ಪಂಜಾಬ್‌ಗೆ 197 ರನ್‌ಗಳ ಗುರಿ | ನಮನ್ ಅರ್ಧಶತಕ | ಅರ್ಶದೀಪ್‌ಗೆ 3 ವಿಕೆಟ್

ಮುಂಬೈಗೆ ಡಿಕಾಕ್ ಶತಕದ ಆಸರೆ

• **ಮುಂಬೈ:** ಕ್ವಿಂಟನ್ ಡಿಕಾಕ್ ಅವರ ಸಮಯೋಚಿತ ಬ್ಯಾಟಿಂಗ್‌ಗೆ ಪಂಜಾಬ್ ತಂಡ ತತ್ತರಿಸಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ದೊಡ್ಡ ಸ್ಕೋರ್ ನಿರ್ಮಿಸಿತು.

ರೋಹಿತ್ ಇಲ್ಲದೆ ಕಣಕ್ಕಿಳಿದ ಮುಂಬೈಗೆ ಆಘಾತ ಎದುರಾದರೂ ಡಿಕಾಕ್ ಹಾಗೂ ನಮನ್ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಆಸರೆ ಪಡೆದ ಮುಂಬೈ ಇಂಡಿಯನ್ಸ್ ಆರ್‌ಸಿಬಿ ವಿರುದ್ಧ ಕುಸಿತ ಕಂಡ ನಂತರ ಉತ್ತಮ ಸ್ಕೋರ್ ನಿರ್ಮಿಸಿತು. ಬ್ಯಾಟಿಂಗ್ ಆಹ್ವಾನ ಪಡೆದ ಹಾರ್ದಿಕ್ ಪಡೆ 195 ರನ್ ಗಳಿಸಿತು. ಪಂಜಾಬ್ 6 ವಿಕೆಟ್ ಪಡೆದುಕೊಂಡಿತು.

ರೋಹಿತ್ ಬದಲಿಗೆ ಕಣಕ್ಕಿಳಿದ ಡಿಕಾಕ್ 112(60ಎ, 8 ಬೌ, 7ಸಿ) ಇನ್ನಿಂಗ್ಸ್‌ನ ಹೀರೋ. ಇನ್ನಿಂಗ್ಸ್‌ನ ಅರ್ಧ ಓವರ್‌ಗಳ ವರೆಗೆ ಬ್ಯಾಟಿಂಗ್ ಮಾಡಿದ ಅವರು, ಪಂಜಾಬ್ ಪಡೆಯನ್ನು ದಂಡಿಸಿದರು. ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದರು. ನಮನ್ ಕೂಡ ಅರ್ಧಶತಕ ಬಾರಿಸಿ ಮಿಂಚಿದರು.

ಆರಂಭಿಕ ಆಘಾತ: ಅಸಲಿಗೆ ಮುಂಬೈ ಇಂಡಿಯನ್ಸ್ ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಮೊದಲನೇ ಓವರ್‌ನಲ್ಲಿ ಕೇವಲ ಒಂದು ರನ್ ಮಾತ್ರ ಬಂದಿತ್ತು. ಎರಡನೇ ಓವರ್‌ನಲ್ಲಿ ಡಿಕಾಕ್ ಬೌಂಡರಿ ಬಾರಿಸಿದರು. ಅತ್ತ 2 ರನ್ ಮಾತ್ರ ಗಳಿಸಿದ್ದ

ರಿಕೆಲ್ಟನ್ ಮೂರನೇ ಓವರ್‌ನಲ್ಲಿ ಕ್ಯಾಚ್ ಆದರು. ಮುಂದಿನ ಎಸೆತದಲ್ಲೇ ಸೂರ್ಯ ವಿಕೆಟ್ ಕೂಡ ಪಡೆದುಬಿಟ್ಟರು ವೇಗಿ ಅರ್ಶದೀಪ್ ಸಿಂಗ್. ಅಲ್ಲಿಗೆ 12 ರನ್ ಮಾತ್ರಕ್ಕೆ 2 ವಿಕೆಟ್ ಕಳೆದುಕೊಂಡು ಭಾರೀ ಸಂಕಷ್ಟದಲ್ಲಿದ್ದ ಮುಂಬೈ ನಮನ್ ಧಿರ್ ಅವರನ್ನು ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ನೀಡಿತು. ಬಂದ ತಕ್ಷಣವೇ ಕ್ಯಾಚ್ ಕೊಟ್ಟಿದ್ದ ಅವರು ಯಜುವೇಂದ್ರ ಚಾಹಲ್ ಅವರಿಂದ ಜೀವದಾನ ಪಡೆದರು. ಡಿಕಾಕ್ ಅವರನ್ನು ರನ್‌ಔಟ್ ಮಾಡುವ ಅವಕಾಶವೂ ಪಂಜಾಬ್ ಕಳೆದುಕೊಂಡಿತು. ದೊಡ್ಡ ಹೊಡೆತಕ್ಕೆ ಮುಂದಾಗ ಇವರಿಬ್ಬರು ವಿಕೆಟ್ ಉಳಿಸಿಕೊಳ್ಳುವ ಕೆಲಸಕ್ಕೆ ಬಿದ್ದರು. ಆದಾಗ್ಯೂ ಡಿಕಾಕ್ ತಮ್ಮ ವಿಸ್ಮಯಕಾರಿ ಹೊಡೆತಗಳ ಮೂಲಕ ಮಿಂಚಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ಮುಂಬೈ 48 ರನ್‌ಗಳಿಸಿತು.

ಡಿಕಾಕ್ ಶತಕ: ಪಂಜಾಬ್‌ಗೆ ಡಿಕಾಕ್ ಅವರನ್ನು ಕಟ್ಟಿಹಾಕಲು ಸಾಧ್ಯವೇ ಆಗಲಿಲ್ಲ. ಬಂದ ಬೌಲರ್‌ಗಳನ್ನೆಲ್ಲಾ ಅವರು ಮನ ಬಂದಂತೆ ದಂಡಿಸಿದರು. ಪ್ರಮುಖ ಬೌಲರ್‌ಗಳ ಬೆಂಡೆತ್ತಿದರು. ರೋಹಿತ್ ಶರ್ಮ ಅವರ ಬದಲಿಗೆ ತಂಡಕ್ಕೆ ಬಂದ ಅವರು ಭರ್ಜರಿ ಶತಕ ಬಾರಿಸಿದರು. ಒಟ್ಟು 60 ಎಸೆತದಲ್ಲಿ ಅವರು ಔಟಾಗದೆ 112 ರನ್‌ಗಳಿಸಿದರು. ಇನ್ನು ಡೆತ್ ಓವರ್‌ನಲ್ಲೂ ಅವರಬ್ಬರ ಮುಂದುವರಿಯಿತು. ತಿಲಕ್ ಕೂಡ ಎರಡು ಬೌಂಡರಿ ಬಾರಿಸಿದರು. ಮುಂಬೈ ಡೆತ್ ಓವರ್‌ಗಳಲ್ಲಿ 35 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತು.

ನಮನ್-ಡಿಕಾಕ್ ಜೊತೆಯಾಟ

ಮಧ್ಯಮ ಓವರ್‌ಗಳಲ್ಲಿ ಅಬ್ಬರದ ಬ್ಯಾಟಿಂಗ್ ಮಾಡಿದ ನಮನ್ ಹಾಗೂ ಡಿಕಾಕ್ ಜೋಡಿ ಪಂಜಾಬ್ ಬೌಲರ್‌ಗಳ ಮೇಲೆ ಮರುಪ್ರಹಾರ ಶುರು ಮಾಡಿದರು. ಕ್ಲಾಸಿಕಲ್ ಬೌಂಡರಿಗಳೊಂದಿಗೆ ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದ ಡಿಕಾಕ್ ಪಂದ್ಯದ ಗತಿ ಬದಲಾಯಿಸಿದರು. ಅವರಿಗೆ ನಮನ್ ಅಷ್ಟೇ ಅದ್ಭುತವಾದ ಸಾಥ್ ಕೊಟ್ಟರು. ಕ್ಯಾಚ್ ಮತ್ತು ರನ್‌ಔಟ್ ಮಿಸ್ ಮಾಡಿದ್ದ ಪಂಜಾಬ್ ತಕ್ಕ ಬೆಲೆ ಕಟ್ಟಿತು. 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಡಿಕಾಕ್ ಮುಂದೆ ತೀರಾ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಅತ್ತ ನಮನ್ ಕೂಡ ಅಬ್ಬರಿಸಿದರು. ಯಾವ ಕ್ಯಾಚ್ ಬಿಟ್ಟ ಚಾಹಲ್ ಅವರನ್ನೇ ದಂಡಿಸಿದರು. ಅವರೂ 30 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಇನ್ನೇನು ಪಂಜಾಬ್ ತಂಡವನ್ನು ದಂಡಿಸುತ್ತಾ ಮೆರೆದಾಡುತ್ತಿದ್ದ ಮುಂಬೈಗೆ ಶಶಾಂಕ್ ಸಿಂಗ್ ಆಘಾತ ನೀಡಲು ಬಂದರು. 14ನೇ ಓವರ್‌ನಲ್ಲಿ ನಮನ್ 50 ರನ್‌ಗೆ ವಿಕೆಟ್ ಒಪ್ಪಿಸಿದರು. ಅವರ 31 ಬಾಲ್‌ಗಳ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್, 3 ಬೌಂಡರಿ ಸೇರಿವೆ. ಮಧ್ಯಮ ಓವರ್‌ಗಳಲ್ಲಿ (7-15) ಮುಂಬೈ 1 ವಿಕೆಟ್ ಕಳೆದುಕೊಂಡು 112 ರನ್‌ಬಾರಿಸಿತು. ಡೆತ್ ಓವರ್‌ನಲ್ಲಿ ಮುಂಬೈ ಅಂದುಕೊಂಡ ಸ್ಕೋರ್ ಮಾಡಲಾಗಲಿಲ್ಲ. ಹಾರ್ದಿಕ್ ಪಾಂಡ್ಯ ಸ್ಫೋಟಕ ಸಿಕ್ಸರ್ ಬಾರಿಸಿ ಅಬ್ಬರಿಸುವ ಹೊತ್ತಲ್ಲೇ ಶ್ರೇಯಸ್ ಅಯ್ಯರ್ ಅವರ ವಿಸ್ಮಯ ಕ್ಯಾಚ್‌ಗೆ ವಿಕೆಟ್ ಕೊಟ್ಟರು. ಅಲ್ಲಿಂದಲೇ ಡೆತ್ ಓವರ್‌ನಲ್ಲಿ ಕಂಬ್ಯಾಕ್ ಮಾಡಿತು ಪಂಜಾಬ್.

ಕಿರುಸುದ್ದಿ

ಸ್ಕ್ವಾಷ್: ಜೋಶ್ನಾ, ಚೋಟ್ರಾನಿ ಮುನ್ನಡೆ

• **ಹೊಸದಿಲ್ಲಿ:** ಹ್ಯಾಂಬರ್ಗ್ ಓಪನ್ ಸ್ಕ್ವಾಷ್‌ನಲ್ಲಿ ಅನುಭವಿ ಆಟಗಾರ್ತಿ ಜೋಶ್ನಾ ಚಿನಪ್ಪ ಮತ್ತು ವೀರ್ ಚೋಟ್ರಾನಿ ಮುನ್ನಡೆದರೆ, ಭರವಸೆ ಆಟಗಾರ ವೆಲವನ್ ಸೆಂಥಿಲ್‌ಕುಮಾರ್ ಮತ್ತು ತನ್ವಿ ಖನ್ನಾ ಆರಂಭಿಕ ಸುತ್ತಿನಲ್ಲಿ ಸೋತರು. ವಿಶ್ವದ ಮಾಜಿ ಮಹಿಳಾ ನಂ. 10 ಜೋಶ್ನಾ ಸ್ಥಳೀಯ ಪ್ರತಿಸ್ಪರ್ಧಿ ಸಾಸ್ಕಿಯಾ ಬೀನ್ ಹಾರ್ಡ್ ಅವರನ್ನು 11-4, 11-5, 11-4 ಅಂತರದಿಂದ ಸೋಲಿಸಿದರೆ, ಪುರುಷರ ವಿಶ್ವದ ನಂ. 47 ಚೋಟ್ರಾನಿ ಪಿಎಸ್‌ಎ ಕಂಚಿನ ಮಟ್ಟದ ಸ್ಪರ್ಧೆಯಲ್ಲಿ ಸ್ಪೇನ್‌ನ ಇವಾನ್ ಪೆರೆಜ್ ಅವರನ್ನು 11-8, 11-9, 11-8 ಅಂತರದಿಂದ ಸೋಲಿಸಿದರು. ಈ ವಾರ ವಿಶ್ವ ಶ್ರೇಯಾಂಕ 22ಕ್ಕೆ ಏರಿದ ಪುರುಷರ ಐದನೇ ಶ್ರೇಯಾಂಕಿತ ಅಭಯ್ ಸಿಂಗ್ ಮತ್ತು ಏಳನೇ ಶ್ರೇಯಾಂಕಿತ ರಮಿತ್ ಟಂಡನ್ ಮೊದಲ ಸುತ್ತಿನಲ್ಲಿ ಬೈ ಪಡೆದರು.

ಪಿಕಲ್‌ಬಾಲ್: ಭಾರತಕ್ಕೆ ಪದಕ

• **ಹೊಸದಿಲ್ಲಿ:** ಫ್ಲೋರಿಡಾದ ನೇಪಲ್ಸ್‌ನಲ್ಲಿ ನಡೆದ ಯುಎಸ್ ಓಪನ್ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನ ಪುರುಷರ ಡಬಲ್ಸ್ 5.0 ಸ್ಪರ್ಧೆಯಲ್ಲಿ ಅರ್ಜುನ್ ಸಿಂಗ್, ಆದಿತ್ಯ ಸಿಂಗ್ ಅವರೊಂದಿಗೆ ಸೇರಿ ಜೆ. ಮಿಯೋಡ್ ಮತ್ತು ಡಬ್ಲ್ಯೂ. ಲಿನ್ ಅವರನ್ನು 9-11, 11-2, 11-7 ಸೆಟ್‌ಗಳಿಂದ ಸೋಲಿಸುವ ಮೂಲಕ ಪ್ರಶಸ್ತಿ ಗೆದ್ದರು. ಪಂತ್ ಥಕ್ಕರ್ ಮತ್ತು ಅಥರ್ವ ಶೇಠ್ 4.5 ಪುರುಷರ ಡಬಲ್ಸ್ ವಿಭಾಗದಲ್ಲಿ ಕಯಾನ್ ಅಪ್ಪೆಲ್ ಮತ್ತು ಮೈಕೆಲ್ ವ್ಯಾನ್ ಡ್ಯುಸೆನ್ ವಿರುದ್ಧ 8-11, 9-11 ಸೆಟ್‌ಗಳಿಂದ ಸೋತ ನಂತರ ಬೆಳ್ಳಿ ಪದಕ ಗೆದ್ದರು. ಇದು ಟೂರ್ನಿಯಲ್ಲಿ ಅರ್ಜುನ್ ಅವರ ಮೂರನೇ ಚಿನ್ನ ಮತ್ತು ಅವರ ಸಹೋದರ ಆದಿತ್ಯ ಅವರೊಂದಿಗೆ ಅವರ ಎರಡನೇ ಚಿನ್ನ. ಈ ಹಿಂದೆ ಅವರು ಟೂರ್ನಿಯಲ್ಲಿ ಬಿ18 ಬಾಲಕರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದಿದ್ದರು.

ಫ್ರೆಂಚ್ ಓಪನ್ ಬಹುಮಾನ ಹೆಚ್ಚಳ

• **ಹೊಸದಿಲ್ಲಿ:** ಟೆನಿಸ್ ಲೋಕದ ಪ್ರಮುಖ ಗ್ರ್ಯಾಂಡ್ ಸ್ಲಾಮ್ ಅನ್ನಿಸಿಕೊಳ್ಳುವ ಫ್ರೆಂಚ್ ಓಪನ್ ಪಂದ್ಯಾವಳಿಯ ಬಹುಮಾನವನ್ನು ಶೇ. 9.5ರಷ್ಟು ಹೆಚ್ಚಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಗುರುವಾರ ಹೊರಡಿಸಲಾಗಿರುವ ಪ್ರಕಟಣೆಯಲ್ಲಿ ಮೊತ್ತವನ್ನು 61.7 ಮಿಲಿಯನ್ ಯೂರೋಗೆ ಹೆಚ್ಚಿಸಲಾಗಿದೆ. ಇದು 2025ರ ಬಹುಮಾನಕ್ಕೆ ಹೋಲಿಸಿದರೆ 5.4 ಮಿಲಿಯನ್ ಹೆಚ್ಚಾಗಿದೆ. ಕೂಟದ ಪ್ರತಿ ಹಂತಕ್ಕೂ ತಲುಪುವ ಆಟಗಾರರಿಗೆ ಬಹುಮಾನ ಹೆಚ್ಚಿಸಲಾಗಿದೆ. ಅಂದರೆ ಇದು ಚಾಂಪಿಯನ್‌ಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಾಗಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೂ ಹೆಚ್ಚಿನ ಬಹುಮಾನ ಸಿಗಲಿದೆ. ಮೂರು ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಬಹುಮಾನ ಹೆಚ್ಚಿದರೂ ಫ್ರೆಂಚ್ ಓಪನ್‌ನಲ್ಲಿ ಮಾತ್ರ ಹೆಚ್ಚಿರಲಿಲ್ಲ, ಹೀಗಿರುವಾಗ ಆಯೋಜಕರು ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಗ್ರ್ಯಾಂಡ್‌ಸ್ಲಾಮ್ ವಿಚಾರಕ್ಕೆ ಬಂದರೆ ವಿಂಬಲ್ಡನ್ ಅತಿ ಕಡಿಮೆ ಬಹುಮಾನ ಹೊಂದಿದ ಕೂಟ. ಯುಎಸ್ ಓಪನ್‌ನ ಒಟ್ಟು ಬಹುಮಾನ 90 ಮಿಲಿಯನ್ ಡಾಲರ್ ಕೊಟ್ಟರೆ, ಆಸ್ಟ್ರೇಲಿಯಾ 79.92 ಮಿಲಿಯನ್ ಡಾಲರ್ ಬಹುಮಾನ ನೀಡಿದೆ.

ವೈಶಾಲಿಗೆ ಒಲಿದ ಕ್ಯಾಂಡಿಡೇಟ್ಸ್ ಪಟ್ಟ

• **ಹೊಸದಿಲ್ಲಿ:** ಚೆಸ್ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಕಳೆದ ವರ್ಷ ಡಿ. ಗುಕೇಶ್ ವಿಶ್ವಚಾಂಪಿಯನ್‌ಶಿಪ್ ಪಟ್ಟ ಗೆದ್ದ ನಂತರ ಇದೀಗ ಮಹಿಳೆಯರ ವಿಭಾಗದ ಫಿಡೆ ಕ್ಯಾಂಡಿಡೇಟ್ಸ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಆರ್. ವೈಶಾಲಿ ವಿಜಯಶಾಲಿಯಾಗಿದ್ದಾರೆ. ಇದರೊಂದಿಗೆ ವಿಶ್ವ ಚಾಂಪಿಯನ್ ಆಗುವುದಕ್ಕೆ ದಾಪುಗಾಲು ಹಾಕಿರುವ ಅವರು, ಈ ಸಾಧನೆ ಮಾಡಿರುವ ಮೊದಲ ಭಾರತೀಯೆ ಎನ್ನಿಸಿಕೊಂಡಿದ್ದಾರೆ. ಪುರುಷರ ಪಂದ್ಯಾವಳಿಯಲ್ಲಿ ಪ್ರಜ್ಞಾನಂದ ಸೇರಿದಂತೆ ಪ್ರಮುಖ ಆಟಗಾರರು ಹಿನ್ನಡೆ ಅನುಭವಿಸಿದ ನಂತರ ಭಾರತದ ಏಕೈಕ ನಿರೀಕ್ಷೆಯಾಗಿ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ ಉಳಿದಿದ್ದರು. ವಿಶ್ವದ ಅಗ್ರ ಶ್ರೇಯಾಂಕಿತ ಚೆಸ್ ಪಟುಗಳನ್ನು ಎದುರಿಸಿದ್ದ ಅವರು ಮೊದಲಿನಿಂದಲೂ ಪ್ರಾಬಲ್ಯ ಸಾಧಿಸುತ್ತಾ ಬಂದರು. ಕ್ಯಾಂಡಿಡೇಟ್ಸ್ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆ ಪಡೆದಿರುವ ಅವರು, ಅಂತಿಮ ಸುತ್ತಿನಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ ಈ ಸಾಧನೆಗೈದರು. ಇನ್ನು ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಕಿರೀಟಕ್ಕಾಗಿ ಜು ವೆಂಜುನ್ ವಿರುದ್ಧ ಹೋರಾಡಲಿದ್ದಾರೆ. ಬುಧವಾರದ ಅಂತಿಮ ಸುತ್ತಿನ ಗೆಲುವಿನ ನಂತರ 8.5 ಅಂಕ ಗಳಿಸಿದ ವೈಶಾಲಿ ಅರ್ಧ ಪಾಯಿಂಟ್ ಅಂತರದಿಂದ ಒಂಟಿಯಾಗಿ ಅಗ್ರಸ್ಥಾನ ಪಡೆದರು. ಕಜಾಕಿಸ್ತಾನದ ಬಿಬಿಸಾರ ಅಸೌಬಯೇವಾ (8) ಎರಡನೇ ಸ್ಥಾನ ಪಡೆದರು. ಅವರು ಅಂತಿಮ ಸುತ್ತಿನಲ್ಲಿ ಭಾರತದ ದಿವ್ಯಾ ದೇಶಮುಖ್ (5.5) ವಿರುದ್ಧ ಡ್ರಾ ಮಾಡಿಕೊಂಡರು.

ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ವರ್ಷಗಳು	
ಪಟ್ಟ	ವರ್ಷ
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2013
ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್	2016
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2018
ಇಂಟರ್‌ನ್ಯಾಷನಲ್ ಮಾಸ್ಟರ್	2021
ಗ್ರ್ಯಾಂಡ್ ಮಾಸ್ಟರ್	2024

ನನ್ನ ಕನಸು ನನಸಾಗಿದೆ. ಪಂದ್ಯಾವಳಿಯ ಪ್ರಮುಖ ಪಂದ್ಯದಲ್ಲಿ ನಾನು ಝು ಜಿನರ್ ಅವರ ವಿರುದ್ಧ ಸೋತಾಗ ಒತ್ತಡವಿತ್ತು. ಆದರೆ ನಾನು ನನ್ನ ಆಟದ ಮೇಲೆ ಗಮನ ಹರಿಸಿ ಕೊನೆಯ ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವುದು ನನಗೆ ಸಂತಸ ತಂದಿದೆ. ನಾನು ನನ್ನ ಬೆಸ್ಟ್ ಆಟವಾಡಿದ್ದೇನೆ, ಮುಂದಿನ ಗುರಿ ವಿಶ್ವ ಚಾಂಪಿಯನ್‌ಶಿಪ್.

■ ಆರ್. ವೈಶಾಲಿ, ಕ್ಯಾಂಡಿಡೇಟ್ಸ್ ಚಾಂಪಿಯನ್

- ಕ್ಯಾತರಿನಾ ಲಾಗ್ನೊ ಸೋಲಿಸಿದ ಗ್ರ್ಯಾಂಡ್‌ಮಾಸ್ಟರ್
- ವಿಶ್ವಚಾಂಪಿಯನ್‌ಶಿಪ್‌ಗೆ ಅರ್ಹ
- ಉನ್ನತ ಪಂದ್ಯಾವಳಿಯಲ್ಲಿ ಚೀನಾದ ಜು ವೆಂಜುನ್ ಎದುರಾಳಿ

15 ವರ್ಷಗಳ ಬಳಿಕ ಇತಿಹಾಸ

ವೈಶಾಲಿ ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಪ್ರಶಸ್ತಿಗಾಗಿ ಹೋರಾಡಿದ ಎರಡನೇ ಭಾರತೀಯ ಮಹಿಳೆ ಮತ್ತು 15 ವರ್ಷಗಳ ನಂತರ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ಮೊದಲಿಗರು ಅನ್ನಿಸಿಕೊಂಡರು. ಕೊನೆರು ಹಂಪಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಅವರು 2011ರಲ್ಲಿ ಅಲ್ಬೇನಿಯಾದ ಟಿರಾನಾದಲ್ಲಿ ಹೌ ಯಿಫಾನ್ ಅವರನ್ನು ಎದುರಿಸಿದ್ದರು. ಇತ್ತ ಸವಾಲಿಗೆ ಸಿದ್ಧವಾಗುತ್ತಿರುವ ವೈಶಾಲಿಗೆ ಕ್ಯಾಂಡಿಡೇಟ್ಸ್ ಗೆಲುವು ಕಳೆದ ಮೂರು ವರ್ಷಗಳಲ್ಲಿ ವೈಶಾಲಿ ಗೆದ್ದ ಮೂರನೇ ದೊಡ್ಡ ಪ್ರಶಸ್ತಿಯಾಗಿದೆ. 24 ವರ್ಷದ ಅವರು ಎರಡು ಬಾರಿ ಫಿಡೆ ಗ್ರ್ಯಾಂಡ್ ಸ್ವಿಸ್ ಪಂದ್ಯಾವಳಿಯನ್ನು ಗೆದ್ದಿದ್ದಾರೆ. ಮತ್ತು 2024 ರಲ್ಲಿ ಮಹಿಳಾ ಒಲಿಂಪಿಯಾಡ್ ವಿಜಯದ ಭಾಗವಾಗಿದ್ದರು.

ವೈಶಾಲಿ ಸಾಧನೆಗಾಥೆ

ಪುರುಷರ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಸಹೋದರಿ ಆರ. ವೈಶಾಲಿ, ಭಾರತದ ಪ್ರಮುಖ ಚೆಸ್ ಆಟಗಾರರಲ್ಲಿ ಒಬ್ಬರು. ಸ್ವಿಸ್ ಚಾಂಪಿಯನ್‌ಶಿಪ್, ಒಲಿಂಪಿಯಾಡ್ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಮೂಲತಃ ತಮಿಳುನಾಡಿನವರಾದ ಅವರು, ಬಾಲ್ಯದಿಂದಲೇ ಚೆಸ್‌ನಲ್ಲಿ ಆಸಕ್ತರಾಗಿದ್ದರು. ತಮ್ಮನ ಚೆಸ್ ಆಟದೊಂದಿಗೆ ಅಭ್ಯಾಸಕ್ಕಿಳಿದ ಅವರು, ಮುಂದೊಂದು ದಿನ ವೃತ್ತಿಜೀವನವಾಗಿ ಆಯ್ಕೆ ಮಾಡಿಕೊಂಡರು. 2012ರಿಂದ 2015ರವರೆಗೆ ಭಾರತದಲ್ಲಿ ಛಾಪು ಮೂಡಿಸಿದರು. ಮೊದಲಿಗೆ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟ ಪಡೆದಿದ್ದ ಅವರು 2024ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟವೂ ಪಡೆದರು. ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ನಂತರದಿಂದ ವೈಶಾಲಿ ಚೆಸ್ ಅಂಗಳದಲ್ಲಿ ದಾಖಲೆಗಳನ್ನು ಮಾಡುತ್ತಲೇ ಬಂದಿದ್ದಾರೆ. ಬಹುತೇಕ ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

ಯಾರ್‍ಯಾರು ಚಾಂಪಿಯನ್ಸ್

ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಮತ್ತು ಚೀನಾದ ಝು ಜಿನೆರ್ (ತಲಾ 7.5) ಅವರು ಮೂರನೇ ಸ್ಥಾನ ಹಂಚಿಕೊಂಡರು. ಓಪನ್ ವಿಭಾಗದಲ್ಲಿ, ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (10 ಪಾಯಿಂಟ್ಸ್) ಒಂದು ಸುತ್ತು ಮೊದಲೇ ಚಾಂಪಿಯನ್ ಆಗಿದ್ದು, ಅವರು ಕೊನೆಯ ಸುತ್ತಿನಲ್ಲಿ ಚೀನಾದ ವೀ ಯಿ (7) ಜೊತೆ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ (6) ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ (6.5) ಜೊತೆ ಡ್ರಾ ಮಾಡಿಕೊಂಡರು. ಜರ್ಮನಿಯ ಮಥಾಯಸ್ ಬ್ಲೂಬಾಮ್ (7) ಅವರನ್ನು ಸೋಲಿಸಿದ ನೆದರ್ಲೆಂಡ್ಸ್‌ನ ಅನಿಶ್ ಗಿರಿ (8.5) ಎರಡನೇ ಸ್ಥಾನ ಪಡೆದರು.

ಫ್ರಾಂಚೈಸಿಗಳಿಗೆ ನಿಲ್ಲದ ಗಾಯದ ಚಿಂತೆ

ಐಪಿಎಲ್: ಖಲೀಲ್, ಪೇನ್ ಹೊರಕ್ಕೆ

• **ಹೈದರಾಬಾದ್:** ಗೆಲುವಿನ ಹಳಿಗೆ ಮರಳಿದ ಖುಷಿಯಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಆಘಾತ ಎದುರಾಗಿದ್ದು, ತಂಡದ ಪ್ರಮುಖ ವೇಗಿ ಖಲೀಲ್ ಅಹ್ಮದ್ ಗಾಯದ ಕಾರಣದಿಂದಾಗಿ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಬಿದ್ದರು.

ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, ಅದೇ ಪಂದ್ಯದ ತಮ್ಮ ಕೋಟಾದ ಕೊನೆಯ ಓವರ್ ಮಾಡುವ ವೇಳೆ ಗಾಯಗೊಂಡಿದ್ದರು. ಕ್ವಾಡ್ರೈಸ್ಸ್ ಗಾಯದಿಂದ ಹೊರನಡೆದ ಅವರು ಉಳಿದ ಭಾಗದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದಲೇ ಹೊರನಡೆದಿದ್ದಾರೆಂದು ಫ್ರಾಂಚೈಸಿ ಅಧಿಕೃತವಾಗಿ ತಿಳಿಸಿದೆ. ಗುರುವಾರದಂದು ಮಾಧ್ಯಮಗೋಷ್ಠಿಯಲ್ಲಿ ಚೆನ್ನೈ, ಖಲೀಲ್ ಅಹ್ಮದ್ ಅವರಿಗೆ ಗಾಯವಾಗಿದೆ. ಚೇತರಿಸಿಕೊಳ್ಳಲು ಸುಮಾರು 12 ವಾರಗಳ ಅವಶ್ಯಕತೆಯಿದೆ ಹೀಗಾಗಿ ಅವರು ಮುಂದಿನ ಭಾಗದಲ್ಲಿ ತಂಡದಲ್ಲಿರುವುದಿಲ್ಲ ಎಂದು ತಿಳಿಸಿದೆ. ಈಗಾಗಲೆ ನಾಥನ್ ಎಲ್ಲಿಸ್ ಗಾಯದಿಂದ ಹೊರನಡೆದಿದ್ದಾರೆ. ಚೆನ್ನೈ ತಂಡದ ಬೌಲಿಂಗ್ ಮೇಲೆ ಪರಿಣಾಮಕಾರಿ ಒತ್ತಡ ಬೀಳಲಿದೆ. ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಯಾವುದೇ ಹೇಳಿಕೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ತಿಳಿಸಿಲ್ಲ.

ಹೈದರಾಬಾದ್‌ಗೆ ಧೋನಿ

ತಂಡದ ಪ್ರಮುಖ ಆಟಗಾರ ಮಹೇಂದ್ರ ಸಿಂಗ್ ಧೋನಿ ಚೆನ್ನೈ ತಂಡದೊಂದಿಗೆ ಹೈದರಾಬಾದ್‌ಗೆ ತೆರಳಿದ್ದಾರೆ. ಕಾಲ್ ಸ್ಟ್ರೈನ್‌ನಿಂದ ಬಳಲುತ್ತಿದ್ದ ಧೋನಿ ಕಳೆದ ಪಂದ್ಯಗಳಲ್ಲಿ ಆಡಿರಲೇ ಇಲ್ಲ. ಸಂಜು ಸ್ಯಾಮ್ಸನ್ ವಿಕೆಟ್ ಕೀಪಿಂಗ್ ಮಾಡಿದ್ದರು. ಈ ಹಿಂದಿನ ಪಂದ್ಯದ ನಂತರ ಮುಖ್ಯ ಕೋಚ್ ಧೋನಿ ಆಡುವ ಬಗ್ಗೆ ಮಾತನಾಡಿದ್ದರು. ಶನಿವಾರದ ಪಂದ್ಯಕ್ಕಾಗಿ ಚೆನ್ನೈ ಸೂಪರ್ ಕಿಂಗ್ಸ್ ಹೈದರಾಬಾದ್‌ಗೆ ತೆರಳಿದ್ದು ಬಸ್ಸಿನಲ್ಲಿ ಧೋನಿ ಕಾಣಿಸಿಕೊಂಡಿದ್ದಾರೆ.

ಡೆವಿಡ್ ಪೇನ್ ಹೊರಕ್ಕೆ

ಇತ್ತ ಸನ್‌ರೈಸರ್ಸ್ ಹೈದರಾಬಾದ್ ತಂಡದಿಂದ ಡೆವಿಡ್ ಪೇನ್ ಹೊರಬಿದ್ದರು. ತಂಡದ ವೇಗಿಗಳ ಪಡೆಯ ಪ್ರಮುಖ ಬೌಲರ್‌ಗಳಲ್ಲಿ ಒಬ್ಬರಾಗಿದ್ದ ಅವರು, ಕೈಗೆ ಆದ ಬಲವಾದ ಗಾಯದಿಂದ ಹೊರನಡೆದಿದ್ದಾರೆಂದ ಫ್ರಾಂಚೈಸಿ ಗುರುವಾರ ತಿಳಿಸಿದೆ. ಹಿಂದಿನ ಪಂದ್ಯಗಳಲ್ಲಿ ಅವರು ಆರ್‌ಸಿಬಿ ಹಾಗೂ ಕೆಕೆಆರ್ ವಿರುದ್ಧ ಕಣಕ್ಕಿಳಿದಿದ್ದರು.

ಗುಜರಾತ್‌ಗೆ ಗೆಲುವಿನ ಗುರಿ

• **ಅಹಮದಾಬಾದ್:** ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಶುಕ್ರವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ.

ಗೆಲುವುಗಳೊಂದಿಗೆ ಮಿಂಚುತ್ತಿರುವ ಗುಜರಾತ್ ತನ್ನ ತವರು ಪಂದ್ಯದಲ್ಲಿ ನಾಗಾಲೋಟ ಮುಂದುವರಿಸುವ ಹಂಬಲದಲ್ಲಿದ್ದು, ಗಿಲ್ ಪಡೆ ಸವಾಲಿಗೆ ಸಜ್ಜಾಗಿ ನಿಂತಿದೆ. ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಕೆಕೆಆರ್ ಮತ್ತೊಮ್ಮೆ ಹೀನಾಯವಾಗಿ ಸೋತಿತ್ತು. ಇತ್ತ ಗುಜರಾತ್ ಟೈಟಾನ್ಸ್ ಲಖನೌ ಸೂಪರ್ ಜೈಂಟ್ಸ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತ್ತು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು ರನ್ ಹೊಳೆ ಹರಿಯುವ ಸಾಧ್ಯತೆ ಇದೆ ಎನ್ನಬಹುದು.

ಕುಸಿದ ಕೆಕೆಆರ್‌ಗೆ ಚಿಂತೆ: ಅನುಭವದ ಬೌಲಿಂಗ್ ಪಡೆ ಇಲ್ಲ, ಇದ್ದವರು ಮಿಂಚಿದರೂ ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ವೇಗಿಗಳಾದ ಪಥಿರಾಣ, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಕೈಕೊಟ್ಟಿರುವುದು ತಂಡಕ್ಕೆ ದೊಡ್ಡ ಹಿನ್ನಡೆ ತಂದಿದೆ. ಸ್ಪಿನ್ನರ್‌ಗಳಾದ ಸುನಿಲ್ ನರೈನ್ ಮತ್ತು ವರುಣ್ ಚಕ್ರವರ್ತಿ ಕೂಡ ಅಲ್ಪ ದುಬಾರಿಯಾಗಿದ್ದಾರೆ. ಅಂಕುಲ್ ರಾಯ್ ಒಬ್ಬರೇ ವಿಕೆಟ್ ಕಿತ್ತವರು. ಇತ್ತ ಬ್ಯಾಟಿಂಗ್‌ನಲ್ಲಿ ಫಿನ್ ಅಲೆನ್ ಲಯದ ಹುಡುಕಾಟದಲ್ಲಿದ್ದಾರೆ. ನರೈನ್ ಮತ್ತೊಮ್ಮೆ ಆರಂಭಿಕರಾಗಿ ಕಾಣಿಸಿಕೊಂಡಿದ್ದರೂ ಕಳೆದ ಪಂದ್ಯದಲ್ಲಿ ನಿರೀಕ್ಷಿತ ಫಲಿತಾಂಶ ಕೊಟ್ಟಿಲ್ಲ. ಅಜಿಂಕ್ಯಾ

ರಹಾನೆ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಇತ್ತ ರಿಂಕು ಸಿಂಗ್, ರಮಣದೀಪ್ ಲಯಕ್ಕೆ ಬರಬೇಕಿದೆ.

ಗುಜರಾತ್‌ಗೆ ವಿಶ್ವಾಸ: ಜಾಸ್ ಬಟ್ಲರ್ ತಮ್ಮ ನೈಜ ಲಯಕ್ಕೆ ಮರಳಿದ್ದು ತಂಡದ ವಿಶ್ವಾಸವನ್ನೇ ಹೆಚ್ಚಿಸಿದೆ. ಗಿಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಅವರು ಮಿಂಚಿದ್ದು ಬ್ಯಾಟಿಂಗ್ ಪಡೆಗೆ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟರ್ ಫಿಲಿಪ್ಸ್, ತೇವಾಟಿಯಾ ಸೇರಿದಂತೆ ಪ್ರಮುಖರು ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪ್ರಸಿದ್ಧ ಕೃಷ್ಣ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಕರಾರುವಾಕ್ ಬೌಲಿಂಗ್ ದಾಳಿಗೆ ರಬಾಡ ಸೇರಿದಂತೆ ಪ್ರಮುಖ ವೇಗಿಗಳ ಸಾಥ್ ಸಿಕ್ಕಿದೆ. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಲಯಕ್ಕೆ ಮರಳಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಕೂಟದಲ್ಲಿ ಸ್ಫೂರ್ತಿದಾಯಕ ಸಾಧನೆ

ಹೈರಾಕ್ಸ್‌ನಲ್ಲಿ ವಿಶೇಷ ಕ್ರೀಡಾಪಟುಗಳ ಸಾಧನೆ

• **ಬೆಂಗಳೂರು:** ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಅಲ್ಟ್ರಾಹ್ಯೂಮನ್ ಹೈರಾಕ್ಸ್ ಸ್ಪರ್ಧೆಯಲ್ಲಿ'ಅಡಾಪ್ಟಿವ್' ವಿಭಾಗದ ವಿಶೇಷ ಸಾಮರ್ಥ್ಯದ ಕ್ರೀಡಾಪಟುಗಳು ಅತ್ಯಂತ ಪ್ರೇರಣಾದಾಯಕ ಪ್ರದರ್ಶನ ನೀಡಿದರು.

ಈ ವಿಭಾಗದಲ್ಲಿ ಪ್ರಮುಖವಾಗಿ ಗಮನ ಸೆಳೆದವರು ಶಾಲಿನಿ ಸರಸ್ವತಿ. ನಾಲ್ಕು ಅಂಗಗಳನ್ನು ಕಳೆದುಕೊಂಡಿದ್ದರೂ ತಮ್ಮ ಹೋರಾಟ ಮನೋಭಾವದಿಂದ ಅವರು ಕ್ರೀಡೆಯಲ್ಲಿ ಹೊಸ ದಿಕ್ಕು ತೋರಿಸಿದ್ದಾರೆ. 2012ರಲ್ಲಿ ಅಪರೂಪದ ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಅವರು ತಮ್ಮ ನಾಲ್ಕು ಅಂಗಗಳನ್ನು ಕಳೆದುಕೊಂಡರು. ಆದರೂ ಅವರು ಹಿಂಜರಿಯದೆ 2021ರಲ್ಲಿ ಚಿನ್ನ ಮತ್ತು 2022ರಲ್ಲಿ ಬೆಳ್ಳಿ ಪದಕವನ್ನು ರಾಷ್ಟ್ರೀಯ ಪ್ಯಾರಾ ಗೇಮ್ಸ್‌ನಲ್ಲಿ 100 ಮೀ ಓಟದಲ್ಲಿ ಗೆದ್ದಿದ್ದಾರೆ. 2023ರ ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಟಿ62 ವಿಭಾಗದಲ್ಲಿ ಏಷ್ಯಾ ದಾಖಲೆ ಹೊಂದಿದ್ದಾರೆ.

ಪ್ರೊಫೆಷನಲ್ ಅಥ್ಲೆಟಿಕ್ಸ್‌ನಿಂದ ನಿವೃತ್ತಿಯಾದ ಬಳಿಕ ಹೈರಾಕ್ಸ್ ಸ್ಪರ್ಧೆಯನ್ನು ತಮ್ಮ ಹೊಸ ಗುರಿಯನ್ನಾಗಿ ಮಾಡಿಕೊಂಡಿರುವ ಅವರು, ಇದು ಸಹನಶಕ್ತಿ ಮತ್ತು ಶಕ್ತಿಯ ಉತ್ತಮ ಸಂಯೋಜನೆ ಎಂದು ಹೇಳಿದ್ದಾರೆ. ಸ್ಪರ್ಧೆಯ ಅನುಭವದ ಬಗ್ಗೆ ಮಾತನಾಡಿದ ಅವರು, ವಾಲ್ ಬಾಲ್ಸ್ ಬಹಳ ಕಷ್ಟವಾಗಿತ್ತು, ಆದರೆ ಪ್ರೇಕ್ಷಕರ ಪ್ರೋತ್ಸಾಹವೇ ನನಗೆ ಶಕ್ತಿ ನೀಡಿತು, ಎಂದು ಹೇಳಿದರು.

ಇನ್ನೊಬ್ಬ ಕ್ರೀಡಾಪಟು ವೀನಿತಾ ಜಾನ್ಸನ್ ಪುಣೆಯಿಂದ ಆಗಮಿಸಿದ್ದು, ಪಾದ ಸಮಸ್ಯೆ ಇದ್ದರೂ ತಮ್ಮ ಜೀವನವನ್ನು ಫಿಟ್ನೆಸ್‌ಗೆ ಅರ್ಪಿಸಿದ್ದಾರೆ. ಈ ವಿಭಾಗದಲ್ಲಿ ಸ್ಪರ್ಧಿಸುವುದು ನನಗೆ ಬಹಳ ಸಂತೋಷ ತಂದಿತು. ಜನರ ಪ್ರೋತ್ಸಾಹ ಸ್ಪರ್ಧೆಯನ್ನು ಹಬ್ಬದಂತಾಗಿಸಿತು, ಎಂದು ಅವರು ಹೇಳಿದರು. ಮುಂಬೈ ಇಂಜಿನಿಯರ್ ರಿಷಿ ವಾಖಾರಿಯಾ ಕೂಡ ಗಮನ ಸೆಳೆದರು. ಜನ್ಮತಃ ಶ್ರವಣ ದೋಷ ಹೊಂದಿದ್ದರೂ, ಕೋಕ್ಲಿಯರ್ ಇಂಪ್ಲಾಂಟ್ ಸಹಾಯದಿಂದ ಅವರು ಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಹೈರಾಕ್ಸ್ ನನ್ನಿಗೆ ಕೇವಲ ಫಿಟ್ನೆಸ್ ಸ್ಪರ್ಧೆಯಲ್ಲ, ಅದು ಆತ್ಮಸ್ಥೈರ್ಯ ಮತ್ತು ನಿಯಮಿತ ತರಬೇತಿಯ ಪ್ರತಿಬಿಂಬ. ನನ್ನ ಭಾಗವಹಿಸುವಿಕೆ ಇತರರಿಗೆ ಪ್ರೇರಣೆಯಾಗಬೇಕು, ಎಂದು ರಿಷಿ ಹೇಳಿದರು.

ಪದಬಂಧ 5956

▸▸ ರಾಜಾ ಸಂಗಮೇಶ ಹಿರೇಮಠ

ಎಡದಿಂದ ಬಲಕ್ಕೆ

5.ಮಾನಸಿಕ ಶಕ್ತಿಯನ್ನು ಹೀಗೆನ್ನುತ್ತೇವೆ (4)
6.ಹತ-ನಗೆ ಇರುವ ದ್ವೇಷ (4)
7.ಮಾರಿನಲ್ಲಿ ತಿರುಗಿ ಕುಳಿತಿದ್ದಾನೆ (3)
8.ತಪುದ ನಡುವೆ ಮಾಡಿದ ಮೋಸ (4)
10.ಮರ, ಮತ್ತದರ ಮೇಲೆ ಬೆಳೆದ ಬಳ್ಳಿ (4)
12.ಶ್ರೇಷ್ಠ ಆರಾಧಿತ (4)
14.ದಾಳದ ನಡುವೆ ಈ ಹೂವು ಅಡಗಿದೆ (4)
15.ಏಳು ಕಲ್ಲುಗಳನ್ನಿಟ್ಟು ಚೆಂಡಿನಿಂದ ಹೊಡೆವ ಆಟ (3)
16.ಎಣಿಯಲ್ಲದ್ದು-ಹೋಲಿಕೆಗೆ ಮೀರಿದ್ದು (4)
17.ಹೂಕುಂಡವಲ್ಲ, ಯಜ್ಞಕ್ಕಾಗಿ ಇರುವಂತಹುದು (4)

ಮೇಲಿನಿಂದ ಕೆಳಕ್ಕೆ

1.ಜೀವಿ ವಾಸಿಸುವ ಸ್ಥಳ-ಮನೆ (2)
2.ಚಿಕ್ಕಪ್ರಾಯದ ಅಭಿನಯಗಾರ (4)
3.ಎಲ್ಲರೂ ಒಂದೇ ರೀತಿಯ ನಿರ್ಧಾರಕ್ಕೆ ಬರುವುದು (4)
4.ಅನುಭವ-ಶಿಕ್ಷಣದಿಂದ ಪಡೆದ ಶಕ್ತಿ (2)
9.ಪ್ರಧಾನಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
11.ಲೇಪಿಸು-ಬಳಿಯುವಿಕೆ ತಲೆಕೆಳಗಾಗಿದೆ (3)
13.ನೀರಿನಿಂದ ಆವೃತವಾದ ಸ್ಥಿತಿಯಿದು (4)
14.ಹಾದಿಯಲ್ಲಿ ಸಾಗುವವನು-ಪ್ರಯಾಣಿಕ (4)
16.ಬಲವಂತವಾಗಿ ಒಡ್ಡುವ ಪ್ರತಿರೋಧ (2)
18.ಏಳಂಬಿವಿಲ್ಲಿ ತಲೆಕೆಳಗಾಗಿದೆ (2)

5955 ಉತ್ತರ

ಎಡದಿಂದ ಬಲಕ್ಕೆ:
1.ರಾವಣ 3.ಕೊಂಕಣ
7.ರಾಜೀವ 8.ಅವಿರತ
10.ತಾರುಮಾರು
12.ಪರಶಿವ 15.ನಾಗರಿಕ
17.ಸಂದೇಹ 18.ಅಂಗಡಿ
19.ಮಾಳವ

ಮೇಲಿನಿಂದ ಕೆಳಕ್ಕೆ :
2.ವನದೇವಿ 4.ಕರಿನೀರು
5.ಪರಾತ 6.ತವರು
9.ಶಿಖರ 11.ಮಾದರಿ
13.ರಣರಂಗ 14.ವಸಂತ
15.ಕಹಳೆ 16.ಗಟ್ಟಿಮೇಳ

ಶಿವಮೊಗ್ಗ
ಶುಕ್ರವಾರ, 17 ಏಪ್ರಿಲ್ 2026
ಸಂಪುಟ 16, ಸಂಚಿಕೆ 354, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಸಾವು | ೦೭ · ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ | ೦೭ · ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಅಮಾವಾಸ್ಯೆ, ನಕ್ಷತ್ರ: ರೇವತಿ

ದಿನದ ಮಾತು

ಬರೀ ಬಯಕೆಗಳಿಂದ ಕಾರ್ಯಗಳು ಸಿದ್ಧಿಸುವುದಿಲ್ಲ, ಅವು ಪ್ರಯತ್ನದಿಂದ ಮಾತ್ರ ಸಿದ್ಧಿಸುತ್ತವೆ.
▲ ಲಾವೋತ್ಸೆ

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ
ಲೇಖನ
• ಸುಬ್ರಹ್ಮಣ್ಯ ಎಚ್.
• ಪುಟ ೬

ಕಿರುಸುದ್ದಿ

ಭೀಕರ ಅಪಘಾತ: ಎಂಟು ಮಂದಿ ಸಾವು

• **ರಾಯಚೂರು:** ಬುಲೆರೋ ಹಾಗೂ ಫ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಇತರೆ ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ. ಈ ಘಟನೆ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚೀಲಕನಹೋಣ ಬಳಿ ಸಂಭವಿಸಿದೆ. ಘಟನೆ ಸಂಬಂಧ ತೀವ್ರ ಸಂತಾಪ ಸೂಚಿಸಿರುವ ಪ್ರಧಾನಿ ಮೋದಿಯವರು, ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.
• ಪುಟ ೯

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ • ಪುಟ ೭
ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ • ಪುಟ ೭
ಉದ್ವಿಗ್ನತೆಯಿಂದ ಎಲ್ಲಾ ರಾಷ್ಟ್ರಗಳ ಮೇಲೆ ಪರಿಣಾಮ • ಪುಟ ೭
ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ • ಪುಟ ೭
ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ • ಪುಟ ೭
ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ: ಶಾ • ಪುಟ ೭
ತೃತೀಯ ಭಾಷೆಗೆ ಗ್ರೇಡ್: ಹೈಕೋರ್ಟ್ ತಡೆ • ಪುಟ ೯
ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ • ಪುಟ ೯

ಕ್ಷೇತ್ರ ಮರುವಿಂಗಡಣೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಲ್ಲ
ಮೀಸಲಾತಿ ವಿರೋಧಿಗಳನ್ನು ಮಹಿಳೆಯರು ಕ್ಷಮಿಸಲ್ಲ: ಮೋದಿ

ರಾಜ್ಯಗಳಿಗಿಲ್ಲ ತಾರತಮ್ಯ

• **ಹೊಸದಿಲ್ಲಿ:** ಯಾವುದೇ ರಾಜ್ಯ- ದೊಡ್ಡದಾಗಲಿ ಸಣ್ಣದಾಗಲಿ, ಉತ್ತರವಾಗಲಿ ದಕ್ಷಿಣವಾಗಲಿ, ಪೂರ್ವವಾಗಲಿ ಪಶ್ಚಿಮವಾಗಲಿ- ಮಹಿಳಾ ಮೀಸಲು ಕಾಯ್ದೆಯ ಜಾರಿಗೆ ಸಂಬಂಧಿಸಿದ ಕ್ಷೇತ್ರಗಳ ಮರು ವಿಂಗಡಣೆ (ಡಿಲಿಮಿಟೇಶನ್) ಪ್ರಕ್ರಿಯೆಯಲ್ಲಿ ಭೇದಭಾವಕ್ಕೆ ಒಳಪಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸ್ಪಷ್ಟಪಡಿಸಿದ್ದಾರೆ.

2029ರಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತರುವುದನ್ನು ಅವರು ದೃಢವಾಗಿ ಬೆಂಬಲಿಸಿ, ಈ ಕ್ರಮಕ್ಕೆ ವಿರೋಧಿಸುವವರನ್ನು ದೇಶದ ಮಹಿಳೆಯರು ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು.

ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾಯ್ದೆಗೆ ತಿದ್ದುಪಡಿ ಮಾಡಲು ಮತ್ತು ಡಿಲಿಮಿಟೇಶನ್ ಆಯೋಗವನ್ನು ಸ್ಥಾಪಿಸಲು ತರಲಾದ ಮೂರು ಮಸೂದೆಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮೋದಿಯವರು, ಯಾವುದೇ ರಾಜಕೀಯ ಪಕ್ಷ ಈ ಕಾಯ್ದೆಗೆ ವಿರೋಧಿಸಿದರೆ, ಅದರಿಂದ ತಮಗೆ ರಾಜಕೀಯ ಲಾಭವಾಗುವುದು ಸಹಜ ಎಂದು ಹೇಳಿದರು. ಈ ಕ್ರಮದಲ್ಲಿ ಮೋದಿಗೆ ರಾಜಕೀಯ ಸ್ವಾರ್ಥ ಇದೆ ಎಂದು ಕೆಲವರು ಭಾವಿಸುತ್ತಾರೆ. ನೀವು ಇದಕ್ಕೆ ವಿರೋಧಿಸಿದರೆ, ನನಗೆ ರಾಜಕೀಯ ಲಾಭವಾಗುವುದು ಸಹಜ. ಆದರೆ ನೀವು ಜೊತೆಯಾಗಿದ್ದರೆ, ಯಾರಿಗೂ ರಾಜಕೀಯ ಲಾಭವಾಗುವುದಿಲ್ಲ, ನಮಗೆ ಕ್ರೆಡಿಟ್ ಬೇಡ ಎಂದು ಅವರು ಹೇಳಿದರು.

ಕೆಲವು ರಾಜ್ಯಗಳು, ವಿಶೇಷವಾಗಿ ದಕ್ಷಿಣ ಮತ್ತು ಪೂರ್ವ ಭಾಗದ ರಾಜ್ಯಗಳು, ಡಿಲಿಮಿಟೇಶನ್ ಪ್ರಕ್ರಿಯೆಯ ಬಗ್ಗೆ ಹೊಂದಿರುವ ಆತಂಕಗಳನ್ನು ನಿವಾರಿಸಲು ಯಾವುದೇ ರಾಜ್ಯಕ್ಕೂ ಅನ್ಯಾಯವಾಗುವುದಿಲ್ಲ ಮತ್ತು ಯಾರಿಗೂ ಭೇದಭಾವ ಇರಲ್ಲ ಎಂದರು. ➡ ಪುಟ ೮

> ಶಾಸಕಾಂಗಗಳಲ್ಲಿ ಮೀಸಲಾತಿ ಮಹಿಳೆಯರ ಹಕ್ಕು ಮತ್ತು ಅದು ಯಾರು ನೀಡುವ ಉಡುಗೊರೆಯಲ್ಲ. ಈ ಹಕ್ಕುಗಳನ್ನು ನೀಡಲು ಈ ಹಿಂದೆ ವಿರೋಧಿಸಿದವರು ಅದರ ಪರಿಣಾಮಗಳನ್ನು ಎದುರಿಸಿದ್ದಾರೆ. ಈ ಕಾಯ್ದೆಯನ್ನು ವಿರೋಧಿಸುವ ರಾಜಕೀಯ ಪಕ್ಷಗಳನ್ನು ಮಹಿಳೆಯರು ಕ್ಷಮಿಸುವುದಿಲ್ಲ.
> ■ ನರೇಂದ್ರ ಮೋದಿ, ಪ್ರಧಾನಿ

ಇಂದು ಸಂಜೆ 4 ಗಂಟೆಗೆ ಮತಕ್ಕೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಸೇರಿದಂತೆ ಒಟ್ಟು ಮೂರು ಪ್ರಮುಖ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದ್ದು, ಸದನದಲ್ಲಿ ಈ ಮಸೂದೆಗಳ ಚರ್ಚೆಗೆ 15 ಗಂಟೆ ಸಮಯ ಮೀಸಲಿರಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸದಸ್ಯರು ಹೆಚ್ಚಿನ ಸಮಯಕ್ಕೆ ಒತ್ತಾಯಿಸಿದಲ್ಲಿ, ಸ್ಪೀಕರ್ ಅವಧಿಯನ್ನು 18 ಗಂಟೆಗಳವರೆಗೆ ವಿಸ್ತರಿಸುವ ಸಾಧ್ಯತೆಯೂ ಇದೆ ಎಂದರು. ಸದನದ ಕಲಾಪ ಮಧ್ಯರಾತ್ರಿವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಶುಕ್ರವಾರ ಸಂಜೆ 4 ಗಂಟೆಗೆ ಮಸೂದೆಗಳ ಅಂಗೀಕಾರಕ್ಕಾಗಿ ಮತದಾನ ನಡೆಯಲಿದೆ ಎಂದು ಅವರು ಸ್ಪಷ್ಟಪಡಿಸಿದರು. ಈ ವಿಶೇಷ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಗೆ ಸಂಬಂಧಿಸಿದ ಕಾಯ್ದೆ ಸೇರಿದಂತೆ ಮೂರು ಮಸೂದೆಗಳನ್ನು ಮಂಡಿಸಲಾಗಿದೆ. ➡ ಪುಟ ೮

ಮಸೂದೆಗಳ ಕುರಿತ ಚರ್ಚೆಗೆ 15 ಗಂಟೆ ನಿಗದಿ

ತಿದ್ದುಪಡಿಗಳು ಮತ್ತು ಮಹಿಳಾ ಮೀಸಲಾತಿ

ಲೋಕಸಭೆಯು ಗುರುವಾರ ಮೂರು ನಿರ್ದಿಷ್ಟ ಮಸೂದೆಗಳ ಬಗ್ಗೆ ಚರ್ಚೆ ನಡೆಸಿತು: ಸಂವಿಧಾನದ (131ನೇ ತಿದ್ದುಪಡಿ) ಮಸೂದೆ 2026, ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ (ತಿದ್ದುಪಡಿ) ಮಸೂದೆ 2026, ಮತ್ತು ಮರುವಿಂಗಡಣೆ ಮಸೂದೆ 2026. ಈ ಪ್ರಸ್ತಾವನೆಗಳ ಅನ್ವಯ ಲೋಕಸಭೆಯ ಒಟ್ಟು ಬಲವನ್ನು 815 ಸ್ಥಾನಗಳಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಒಟ್ಟು 272 ಸ್ಥಾನಗಳನ್ನು ಅಂದರೆ ಸದನದ ಶೇ.33ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗುವುದು.

ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ: ವಿಪಕ್ಷ • ಪುಟ ೮

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ
ಸಂಪಾದಕೀಯ • ಪುಟ ೬

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

ಎಚ್ಚರಿಕೆ ವಹಿಸಲು ಡಿಸಿಗಳಿಗೆ ಸಿಎಂ ಸೂಚನೆ

• **ಬೆಂಗಳೂರು:** ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದ್ದು, ಜಿಲ್ಲಾಧಿಕಾರಿಗಳು ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಗುರುವಾರ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವ ನೀರು ಪೂರೈಕೆ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಸೂಚನೆ ನೀಡಿದರು. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515 ಗ್ರಾಮಗಳಿಗೆ ನೀರು ಪೂರೈಕೆ ಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು. ➡ ಪುಟ ೮

ಗ್ರಾಮಗಳನ್ನು ಗುರುತಿಸಿ

ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಅನುದಾನದ ಕೊರತೆಯಿಲ್ಲ

ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ, ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ • ಪುಟ ೮

24ಕ್ಕೆ ವಿಶೇಷ ಸಂಪುಟ ಸಭೆ ನಡೆಸಲು ನಿರ್ಧಾರ

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

• **ಬೆಂಗಳೂರು:** ಒಳಮೀಸಲಾತಿ ಜಾರಿಗೆ ಸಂಬಂಧಪಟ್ಟಂತೆ ವರದಿ ಅಧ್ಯಯನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚನೆ ಮಾಡಲು ಸಚಿವ ಸಂಪುಟ ನಿರ್ಧರಿಸಿದ್ದು, ಈ ಸಂಬಂಧ ಏ.24 ರಂದು ವಿಶೇಷ ಸಂಪುಟ ಸಭೆ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ತೀರ್ಮಾನ ಕೈಗೊಳ್ಳಲಾಗಿದ್ದು, ಒಳಮೀಸಲಾತಿ ಜಾರಿಗೆ ಎದುರಾಗಿರುವ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಏ.24ರ ಒಳಗೆ ವರದಿ ಸಲ್ಲಿಸಲು ಮುಖ್ಯಕಾರ್ಯದರ್ಶಿಗೆ ಸೂಚಿಸಲಾಗಿದೆ.

ಅಲ್ಲದೇ, ಕಳೆದ ಅಧಿವೇಶನದಲ್ಲಿ ಮಂಡನೆಯಾಗಿದ್ದ ರೋಹಿತ್ ವೇಮುಲಾ ವಿಧೇಯಕಕ್ಕೆ ಗುರುವಾರ ನಡೆದ ಸಂಪುಟದಲ್ಲಿ ಅನುಮೋದನೆ ನೀಡಲಾಗಿದ್ದು, ಇದು ಕಾಯ್ದೆಯಾಗಿ ಜಾರಿಯಾಗಲಿದೆ ಎಂದು ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರಸಭೆ, ಹುನಗುಂದ ಪುರಸಭೆ ಮತ್ತು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣ ಪಂಚಾಯಿತಿ, ಕಲಬುರಗಿ ಜಿಲ್ಲೆಯ ಉದನೂರು, ನಾಗನಹಳ್ಳಿ ಗ್ರಾಮ ಮತ್ತು ಮಾಲಗತ್ತಿ ಗ್ರಾಮದ ವ್ಯಾಪ್ತಿಯಲ್ಲಿ ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಿರುವ ನಿವೇಶನಗಳನ್ನು ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಕಾಂಗ್ರೆಸ್ ಭವನ ಟ್ರಸ್ಟ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ➡ ಪುಟ ೮

ಜೆಜೆಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಜಲ್ ಜೀವನ್ ಮಿಷನ್ ವಿಸ್ತರಿತ ಹಂತದಲ್ಲಿ ಪುನರ್ ರಚಿತ ಜಲ ಜೀವನ್ ಮಿಷನ್ 2.0 ಅನ್ನು ಅನುಷ್ಠಾನಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ತಿಳುವಳಿಕೆ ಒಡಂಬಡಿಕೆ ಮಾಡಿಕೊಳ್ಳಲು ಸಚಿವ ಸಂಪುಟ ಸಮ್ಮತಿಸಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ➡ ಪುಟ ೮

ನಾಸಿಕ್ ಟಿಸಿಎಸ್ ಎಚ್‌ಆರ್ ಮ್ಯಾನೇಜರ್ ವಿರುದ್ಧ ತೀವ್ರ ತನಿಖೆ

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

• **ಹೊಸದಿಲ್ಲಿ:** ನಾಸಿಕ್ ಟಿಸಿಎಸ್ ಬಿಪಿಒ ಘಟಕದಲ್ಲಿ ನಡೆದ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರ ಪ್ರಕರಣದ ಪ್ರಮುಖ ಆರೋಪಿ ಎಚ್‌ಆರ್ ಮ್ಯಾನೇಜರ್ ನಿದಾ ಖಾನ್‌ಗೂ ಕೆಂಪು ಕೋಟೆ ಕಾರು ಸ್ಫೋಟ ಹಿಂದಿನ ವೈಟ್ ಕಾಲರ್ ಭಯೋತ್ಪಾದಕಿ ಡಾ.ಶಾಹೀನ್ ಶಾಹಿದ್‌ಗೂ ಸಂಪರ್ಕವಿತ್ತೆಂಬ ಬಗ್ಗೆ ಭಾರೀ ಚರ್ಚೆ ನಡೆಯುತ್ತಿದೆ.

ಕೆಲವು ಸಾಮಾಜಿಕ ಜಾಲತಾಣ ಪೋಸ್ಟ್‌ಗಳ ಪ್ರಕಾರ, ನಿದಾ ಖಾನ್ ಮತ್ತು ಡಾ.ಶಾಹೀನ್ ಶಾಹಿದ್ ದಿಲ್ಲಿಯಲ್ಲಿ ಹಲವು ಬಾರಿ ಭೇಟಿಯಾಗಿದ್ದರು. ಕೆಂಪು ಕೋಟೆ ಸಮೀಪದಲ್ಲಿ ಸಂಭವಿಸಿದ ಆತ್ಮಾಹುತಿ ಕಾರು ಬಾಂಬ್ ಸ್ಫೋಟವು ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿ ಆಗಿತ್ತು. ನಾಸಿಕ್ ಪ್ರಕರಣವು ಉದ್ಯೋಗ ಸ್ಥಳದಲ್ಲಿನ ಲೈಂಗಿಕ ಕಿರುಕುಳ, ಅತ್ಯಾಚಾರ, ಬಲವಂತದ ಮತಾಂತರಕ್ಕೆ ಯತ್ನಿಸಿದ ಆರೋಪವಿದೆ. ➡ ಪುಟ ೮

ಟಿಸಿಎಸ್ ನಾಸಿಕ್ ಘಟಕ ಸ್ಥಗಿತ

ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಬಲವಂತದ ಮತಾಂತರ ಆರೋಪಗಳನ್ನು ಒಳಗೊಂಡಂತೆ ಪ್ರಕರಣದಲ್ಲಿ ಈಗಾಗಲೇ 9 ಎಫ್‌ಐಆರ್‌ಗಳು ದಾಖಲಾಗಿದ್ದು, 6 ಬಂಧನಗಳೂ ನಡೆದಿರುವ ಹಿನ್ನೆಲೆಯಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತನ್ನ ನಾಸಿಕ್ ಬಿಪಿಒ ಘಟಕದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಕಂಪನಿ ಎಲ್ಲಾ ಸಿಬ್ಬಂದಿಯನ್ನು ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ವರ್ಗಾಯಿಸಿದ್ದು, ತನಿಖೆ ನಡೆಯುತ್ತಿರುವ ನಡುವೆಯೇ ಈ ಕ್ರಮ ಕೈಗೊಳ್ಳಲಾಗಿದೆ.

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ? • ಪುಟ ೭

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ, ಉಗ್ರಗಾಮಿ ಹಮ್ಜಾಗೆ ಗುಂಡು

• **ಲಾಹೋರ್:** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸೇರಿ ದೇಶದ ಹಲವೆಡೆ ಭಯೋತ್ಪಾದಕ ದಾಳಿ ಹಿಂದಿನ ರೂವಾರಿ, ಲಷ್ಕರ್-ಎ- ತೈಬಾ (ಎಲ್‌ಇಟಿ) ಉಗ್ರ ಸಂಘಟನೆಯ ಉಗ್ರ ಹಾಗೂ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬನಾದ ಅಮೀರ್ ಹಮ್ಜಾನ ಮೇಲೆ ಮಂಗಳವಾರ ತಡರಾತ್ರಿ ಲಾಹೋರ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದು, ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ವರದಿಯಾಗಿದೆ.

ಕಳೆದೊಂದು ವರ್ಷದಲ್ಲಿ ಇದು ಎರಡನೇ ಬಾರಿಗೆ ಅಪರಿಚಿತರು ಹಮ್ಜಾ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಪಾಕಿಸ್ತಾನದ ಖಾಸಗಿ ಸುದ್ದಿವಾಹಿನಿಯೊಂದರ ಕಚೇರಿ ಹೊರಭಾಗದಲ್ಲಿ ಈ ಘಟನೆ ನಡೆದಿದೆ. ➡ ಪುಟ ೮

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

• **ಬೆಂಗಳೂರು:** ಉಪ ಚುನಾವಣೆಯ ಕಾವು ಮುಗಿಯುತ್ತಿದಂತೆ ಸಂಪುಟ ವಿಸ್ತರಣೆ ಕೂಗು ಜೋರಾಗಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಜಂಟಿಯಾಗಿ ದಿಲ್ಲಿಗೆ ತೆರಳುತ್ತಿರುವುದು ಕುತೂಹಲ ಮೂಡಿಸಿದೆ. ಶುಕ್ರವಾರ ದಿಲ್ಲಿಯ ಖಾಸಗಿ ಹೋಟೆಲ್‌ನಲ್ಲಿ ರಾಜತಾಂತ್ರಿಕರ ಜತೆ ಸಮಾಲೋಚನೆ ನಡೆಸುವ ಬ್ರಾಂಡ್ ಬೆಂಗಳೂರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಬ್ಬರು ನಾಯಕರು ಒಂದೇ ವಿಶೇಷ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ. ಸಂಜೆ 5.30ಕ್ಕೆ ಕಾರ್ಯಕ್ರಮ ನಿಗದಿಯಾಗಿದ್ದು, ಮಧ್ಯಾಹ್ನ 3.30ಕ್ಕೆ ದಿಲ್ಲಿಗೆ ತಲುಪಲಿದ್ದಾರೆ. ➡ ಪುಟ ೮

ಮಕ್ಕಳಿಗೆ ಕನ್ನಡ, ಇಂಗ್ಲಿಷ್ ಕಲಿಕೆ ಅನುಭವ ನೀಡುವ ಉದ್ದೇಶ

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

▸ ನಂದಿನಿ ಎನ್.

ದಿಗಂತ ವಿಶೇಷ

• **ಬೆಂಗಳೂರು:** ಮಕ್ಕಳಿಗೆ ಮಾತೃಭಾಷೆ(ಕನ್ನಡ) ಮತ್ತು ಇಂಗ್ಲಿಷ್ ಎರಡರ ಮೂಲಕ ಕಲಿಕೆ ಅನುಭವ ನೀಡುವ ಉದ್ದೇಶದಿಂದ ಪೂರ್ವಪ್ರಾಥಮಿಕ ಹಂತದಲ್ಲಿ ಈ ವರ್ಷದಿಂದಲೇ ಬಾಲಚೇತನ ಎಂಬ ಹೆಸರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಪರಿಚಯಿಸಿದ್ದು, ಈ ಮೂಲಕ ಸರ್ಕಾರಿ ಶಾಲೆಗಳತ್ತ ಆಕರ್ಷಣೆ ಹೆಚ್ಚಿಸುವ ಸದುದ್ದೇಶ ಹೊಂದಿದೆ.

ರಾಜ್ಯ ಸರ್ಕಾರವು ಪೂರ್ವಪ್ರಾಥಮಿಕ ಹಂತವಾದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗೆ ದ್ವಿಭಾಷಾ ನೀತಿ ಶಿಕ್ಷಣವನ್ನು 2026-27ನೇ ಶೈಕ್ಷಣಿಕ ವರ್ಷದಿಂದ ಈ ವ್ಯವಸ್ಥೆ ಜಾರಿಗೆ ಬಂದಿದ್ದು, ರಾಜ್ಯ ಸರ್ಕಾರಿ ಶಾಲೆಗಳ ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ದ್ವಿಭಾಷಾ(ಕನ್ನಡ ಮತ್ತು ಇಂಗ್ಲಿಷ್) ಪಠ್ಯಕ್ರಮ ಈಗ ಪ್ರಮುಖವಾಗಿ ಪರಿಚಯವಾಗಿದೆ. 4 ರಿಂದ 6 ವರ್ಷ ವಯಸ್ಸಿನ ಮಕ್ಕಳ ಸಾಮಾನ್ಯ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಈ ಪಠ್ಯಕ್ರಮ ಆಧಾರಿತ ಅಭ್ಯಾಸ ಪುಸ್ತಕವನ್ನು ಪೂರ್ವ ಪ್ರಾಥಮಿಕ ಹಂತದ ಕಲಿಕೆಗಾಗಿ ವಿನ್ಯಾಸಗೊಳಿಸಲಾಗಿದ್ದು, ಇವುಗಳಲ್ಲಿ ಅಕ್ಷರ ಮತ್ತು ಪದಗಳನ್ನು ಗುರುತಿಸುವಿಕೆ, ಉಚ್ಚಾರಣೆ ಮತ್ತು ಬರವಣಿಗೆ, ಮೂಲ ಸಂಖ್ಯಾಜ್ಞಾನ ಹಾಗೂ ಸುತ್ತಲಿನ ಪರಿಸರದ ಅರಿವನ್ನು ಮೂಡಿಸಲು ಅರ್ಥಪೂರ್ಣ ಹಾಗೂ ಸರಳ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ➡ ಪುಟ ೮

ಪಠ್ಯಪುಸ್ತಕದಲ್ಲಿನ ವಿಶೇಷತೆ

ಮಕ್ಕಳಿಗೆ ಪಠ್ಯ ತೆರೆದ ಕೂಡಲೇ ಆಕರ್ಷಣೆಯಾಗುವಂತೆ ವಿವಿಧ ಚಿತ್ರಗಳ ಜತೆಗೆ ಇಷ್ಟದ ಆಹಾರ ಪದಾರ್ಥದ ಒಂದು ಚಿತ್ರವನ್ನು ಸಂಗ್ರಹಿಸಿ ಅಂಟಿಸೋಣ, ಚಿತ್ರದಲ್ಲಿರುವ ಆಹಾರವಲ್ಲದೆ ನಿನಗೆ ಇಷ್ಟವಾದ ಆಹಾರ ಯಾವುದು?, ಮನೆಯಲ್ಲಿ ಒಣ-ಹಸಿ ಕಸಗಳನ್ನು ಪ್ರತ್ಯೇಕ ಡಬ್ಬದಲ್ಲಿ ಹಾಕಲು ಪ್ರಯತ್ನಿಸು, ಆಟವಾಡುವ ಹಾಗೂ ಹೊರ ಸಂಚಾರದ ಸಮಯದಲ್ಲಿ ಎಚ್ಚರವಹಿಸಬೇಕಾದ ಕ್ರಮಗಳ ಕುರಿತು ಹಿರಿಯರಿಂದ ತಿಳಿದುಕೊಳ್ಳಿ. ➡ ಪುಟ ೮

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದ ಬೆಳವಣಿಗೆ ಹಿನ್ನೆಲೆಯಲ್ಲಿ ಸಚಿವ ಜಮೀರ್ ಅಹಮ್ಮದ್ ತಲೆದಂಡವಾದರೆ, ರಾಜ್ಯದಲ್ಲಿನ ಇಡೀ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ದೂರವಾಗುತ್ತದೆ. ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 20-30 ಕ್ಷೇತ್ರಗಳನ್ನು ಗೆಲ್ಲುವುದೂ ಕಷ್ಟವಾದೀತು ಎಂದು ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಸಿದೆ.

ಮುಸ್ಲಿಂ ನಾಯಕರ ತಲೆದಂಡ ಹಿನ್ನೆಲೆ ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಕೆ

ಗುರುವಾರ ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಸಂಸ್ಥಾಪಕ ರಾಜ್ಯಾಧ್ಯಕ್ಷ ಸುಭಾನ್ ಖಾನ್ ಮಾತನಾಡಿ, ಈಗಾಗಲೇ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಸ್ಥಾನದಿಂದ ಕೆ.ಅಬ್ದುಲ್ ಜಬ್ಬಾರ್, ದಕ್ಷಿಣ ಕ್ಷೇತ್ರಕ್ಕೆ ಸಂಬಂಧವೇ ಇಲ್ಲದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮ್ಮದ್ ತಲೆದಂಡವಾಗಿದೆ. ➡ ಪುಟ ೮

> ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.
> ■ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ, ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ

ಹೈಕಮಾಂಡ್ ಭೇಟಿಯಾದ ಹಿರಿಯ ಶಾಸಕರ ನಿಯೋಗ

• **ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆ ಸಂಬಂಧ ಹೈಕಮಾಂಡ್ ಮೇಲೆ ಒತ್ತಡ ಹೇರಲು ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ಶಾಸಕರ ನಿಯೋಗ ಗುರುವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದಾರೆ.

ಸಚಿವ ಸಂಪುಟ ಪುನರ್ ರಚಿಸಿ, ಸಚಿವ ಸ್ಥಾನ ನೀಡಲು ಮನವಿ

ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಶಾಸಕರಾದ ಟಿ.ಬಿ.ಜಯಚಂದ್ರ, ಅಶೋಕ್ ಪಟ್ಟಣ್, ಕೆ. ಷಡಕ್ಷರಿ, ಜಿ.ಟಿ.ಪಾಟೀಲ್, ಬಿ.ಜಿ.ಶಾಂತನಗೌಡ, ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಶಿವಣ್ಣ, ಮಹಂತೇಶ್ ಕೌಜಲಗಿ, ಯಶವಂತರಾಯಗೌಡ ಪಾಟೀಲ್, ಸಿ.ಎಸ್.ನಾಡಗೌಡ ಸೇರಿದಂತೆ ಹಲವರು ಗುರುವಾರ ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ➡ ಪುಟ ೮

ಸಂಪಾದಕೀಯ

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ

ಲೋಕಸಭೆಯಲ್ಲಿ ಮಂಡನೆಯಾದ ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿ ಹಾಗೂ ಲೋಕಸಭೆ ಕ್ಷೇತ್ರಗಳ ಪುನರ್‌ವಿಂಗಡಣೆ ಪ್ಯಾನಲ್ ಸ್ಥಾಪನೆಗೆ ಸಂಬಂಧಿಸಿದ ಮೂರು ಮಸೂದೆಗಳು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹತ್ವದ ಘಟ್ಟವನ್ನು ಸೂಚಿಸುತ್ತವೆ. ಮಹಿಳೆಯರಿಗೆ ಶೇ.33 ಮೀಸಲಾತಿ ಒದಗಿಸುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಸಮಾನ

ಅವಕಾಶ ಕಲ್ಪಿಸುವುದು ಕೇಂದ್ರ ಸರ್ಕಾರದ ದೂರದೃಷ್ಟಿಯ ನಿರ್ಧಾರವೆಂದೇ ಹೇಳಬೇಕು.

ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿವರೆಗೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಪ್ರಮಾಣ ಕಡಿಮೆಯಾಗಿಯೇ ಉಳಿದಿರುವುದು ವಾಸ್ತವ. ಈ ಹಿನ್ನೆಲೆಯಲ್ಲಿ ಮೀಸಲಾತಿ ಕೇವಲ ನೀತಿ ಘೋಷಣೆ ಆಗದೆ, ಪರಿಣಾಮಕಾರಿ ಜಾರಿಗೆ ಬರಬೇಕಾದ ಅಗತ್ಯವಿದೆ. ಅದಕ್ಕಾಗಿ ಜನಗಣತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಅನಿವಾರ್ಯವಾಗಿ ಜೋಡಿಸಿರುವುದು ಸೂಕ್ತವಾದ ಆಡಳಿತಾತ್ಮಕ ಕ್ರಮ. ಕ್ಷೇತ್ರಗಳ ಪುನರ್ ರಚನೆ ಮೂಲಕ ಸಮಾನ ಜನಸಂಖ್ಯೆಗೆ ಸಮಾನ ಪ್ರತಿನಿಧಿತ್ವ ದೊರಕುವಂತೆ ಮಾಡುವುದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತವೇ ಆಗಿದೆ.

ಕ್ಷೇತ್ರ ಪುನರ್‌ವಿಂಗಡಣೆ ಮೂಲಕ ಲೋಕಸಭೆ ಸ್ಥಾನಗಳ ಹೆಚ್ಚಳವೂ ಸಾಧ್ಯವಾಗಲಿದೆ. ಇದರಿಂದ ದೇಶದ ವಿವಿಧ ಭಾಗಗಳಿಗೆ, ವಿಶೇಷವಾಗಿ ಜನಸಂಖ್ಯೆ ಹೆಚ್ಚುತ್ತಿರುವ ಪ್ರದೇಶಗಳಿಗೆ, ಹೆಚ್ಚಿನ ಪ್ರತಿನಿಧಿತ್ವ ದೊರೆಯಲಿದೆ. ಜೊತೆಗೆ ಮಹಿಳೆಯರಿಗೆ ಹೊಸ ಅವಕಾಶಗಳು ಸೃಷ್ಟಿಯಾಗಲಿದ್ದು, ರಾಜಕೀಯದಲ್ಲಿ ಅವರ ಪಾತ್ರ ಮತ್ತಷ್ಟು ಬಲಿಷ್ಠವಾಗಲಿದೆ.

ದಕ್ಷಿಣ ರಾಜ್ಯಗಳ ಆತಂಕಗಳನ್ನೂ ನಿರ್ಲಕ್ಷಿಸದೇ, ಸಮತೋಲನ ಕಾಪಾಡುವ ರೀತಿಯಲ್ಲಿ ಈ ಪ್ರಕ್ರಿಯೆ ಮುಂದುವರಿಯಲಿದೆ ಎಂಬ ವಿಶ್ವಾಸವಿದೆ. ಕೇಂದ್ರ ಸರ್ಕಾರವು ಸಮಗ್ರ ಅಭಿವೃದ್ಧಿ ಮತ್ತು ಸಮಾನತೆ ಎಂಬ ದ್ವಿತೀಯ ಉದ್ದೇಶಗಳನ್ನು ಹೊಂದಿ ಈ ಮಸೂದೆಗಳನ್ನು ಮುಂದಿಟ್ಟಿದೆ.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುವುದಿಲ್ಲ ಎಂದಿದ್ದಾರೆ. ಜತೆಗೆ, ಎಲ್ಲರ ಒತ್ತಾಯದಂತೆ ಜನಸಂಖ್ಯೆ ಆಧಾರಿತವಾಗಿ ಪುನರ್‌ವಿಂಗಡಣೆ ಮಾಡದೇ, ಶೇ.50ರ ಆಧಾರದಲ್ಲಿ ಹೆಚ್ಚಳ ಮಾಡಲಾಗುತ್ತಿದೆ. ಇದರಿಂದ ಎಲ್ಲ ರಾಜ್ಯಗಳಿಗೂ ಸಮಾನ ನ್ಯಾಯ ಸಿಗಲಿದೆ. ಕರ್ನಾಟಕದಲ್ಲೂ 42 ಸ್ಥಾನಗಳಿಗೆ ಏರಿಕೆಯಾಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಅಭಯ ನೀಡಿರುವುದರಿಂದ ಈ ಮಸೂದೆಗಳ ಬಗ್ಗೆ ರಾಜಕೀಯವಾಗಿ ಯೋಚನೆ ಮಾಡದೆ, ಮಹಿಳೆಯರ ಹಿತದೃಷ್ಟಿಯಿಂದ ಯೋಚಿಸಿ ಮುಂದಡಿ ಇಡಬೇಕಾಗಿದೆ. ಈಗಾಗಲೇ ಹಿಂದೆ ಒಂದಿಲ್ಲೊಂದು ಕಾರಣಗಳಿಂದಾಗಿ ಈ ಮಹಿಳಾ ಮಸೂದೆ ಜಾರಿಯಾಗದೇ ಉಳಿದಿತ್ತು. ಈಗ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಿರುವುದರಿಂದ ಈಗಲಾದರೂ ಅತ್ತ ಹೆಜ್ಜೆ ಇಡಬೇಕಾಗಿದೆ. ಒಟ್ಟಿನಲ್ಲಿ, ಮಹಿಳಾ ಮೀಸಲು ಮತ್ತು ಡಿಲಿಮಿಟೇಶನ್ ಮಸೂದೆಗಳು ಕೇವಲ ಕಾನೂನು ಬದಲಾವಣೆಗಳಲ್ಲ; ಅವು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ದೇಶವನ್ನು ಮುಂದಕ್ಕೆ ಕೊಂಡೊಯ್ಯುವ ದಿಟ್ಟ ಹೆಜ್ಜೆಗಳಾಗಿವೆ. ಭಾರತದ ಪ್ರಜಾಪ್ರಭುತ್ವವನ್ನು ಮತ್ತಷ್ಟು ಒಳಗೊಂಡ ಮತ್ತು ಸಮತೋಲನಯುತವಾಗಿಸುವ ಈ ಪ್ರಯತ್ನ ಸ್ವಾಗತಾರ್ಹ.

ಹಣಕ್ಕಾಗಿ ಮನುಷ್ಯರಲ್ಲ

ಉತ್ತಮಾಃ ಧನಮಾರ್ಜೇಯುಃ ಧನಮಾರ್ಜಿತಿನೋತ್ತಮಾನ್ ।
ಮನುಷ್ಯಾಣಾಂ ಕೃತೇ ವಿತ್ತಂ ನ ವಿತ್ತಸ್ಯ ಕೃತೇ ತು ತೇ॥ -ಸುವಚನ ಶತಕಂ

ಉತ್ತಮ ಜನರು ಹಣವನ್ನು ಗಳಿಸಬಲ್ಲರು. ಆದರೆ ಹಣ ಉತ್ತಮರನ್ನು ಕೊಳ್ಳಲಾರದು. ಮನುಷ್ಯರಿಗಾಗಿ ಹಣ, ಹಣಕ್ಕಾಗಿ ಮನುಷ್ಯರಲ್ಲ -ಎಂಬುದು ಶ್ಲೋಕಾರ್ಥ.

ಸುಖಮಯ ಜೀವನವನ್ನು ಸಾಗಿಸುವುದಕ್ಕೆ ಬೇಕಾದ ಕೆಲವೇ ಮುಖ್ಯ ಅಂಶಗಳಲ್ಲಿ ಪ್ರಧಾನವಾದದ್ದು ಹಣ. ಹಣವೊಂದಿದ್ದರೆ ಬಹುತೇಕ ಕಾರ್ಯ ಸಾಧಿಸಿದಂತೆ. ಹಣ ಎಲ್ಲ ಗುಣಗಳ ಆಗರ. ಈ ಕಾರಣಕ್ಕಾಗಿಯೇ "ಸರ್ವೇ ಗುಣಾ- ಕಾಂಚನಮಾಶ್ರಯಂತಿ" ಎಂಬ ಸೂಕ್ತಿ ಹೊರಟಿದೆ.

ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

ಹಣಕ್ಕಾಗಿ ಹಪಹಪಿಸುವವರಿರುವಂತೆ ಹಣವನ್ನು ಸಂಪೂರ್ಣ ತಿರಸ್ಕರಿಸಿದವರಿದ್ದಾರೆ. ಆದರೆ ಇಂಥವರ ಸಂಖ್ಯೆ ತೀರಾ ವಿರಳ.

ಹಣವಿಲ್ಲದೇ ಜೀವನ ನಿರ್ವಹಣೆ ಅಸಾಧ್ಯ. ಬದುಕನ್ನು ಶ್ರೀಮಂತಗೊಳಿಸುವ ಹಣವನ್ನು ದುಡಿಮೆಯಿಂದ ಸಂಪಾದಿಸಬಹುದು. ಉತ್ತಮ ಗುಣನಡತೆಯುಳ್ಳವರು, ಪರಿಶ್ರಮಿಗಳು ಹಣವನ್ನು ಗಳಿಸಬಲ್ಲರು. ಮೈಮುರಿದು ದುಡಿದರೆ ಸಂಪತ್ತು ಬಂದೇಬರುತ್ತದೆ. ಬಂದ ಸಂಪತ್ತನ್ನು ನೋಡಿ ಮೈಮರೆಯದೆ ಸರಿಯಾಗಿ ವಿನಿಯೋಗಿಸಿಕೊಂಡಾಗ ಸಾರ್ಥಕತೆ ಪಡೆಯುತ್ತದೆ. ಶ್ರಮವನ್ನು ಆರಾಧಿಸುವ ಉತ್ತಮರಾದ ಯಾರೂ ಕೂಡ ಸಂಪತ್ತಿನ ಅಧಿಪತಿಗಳಾಗಲು ಸಾಧ್ಯ. ಸಂಪತ್ತನ್ನು ಗಳಿಸಲು ಸಾಧ್ಯ. ಆದರೆ ಹಣ ಉತ್ತಮರನ್ನು ಕೊಂಡುಕೊಳ್ಳಲಾರದು.

ಈ ಮಾತಿಗೆ ಅಪವಾದವೆಂಬಂತೆ ಹಣದಿಂದ ಜನರನ್ನು ಕೊಂಡುಕೊಳ್ಳುವ ಕೆಟ್ಟ ಚಾಳಿಯನ್ನು ಈಗೀಗ ಕಾಣಬಹುದು. ರಾಜಕೀಯದಲ್ಲಂತೂ ಇದು ಸಾಮಾನ್ಯವೆನಿಸಿದೆ. ಚೀಲ ಚೀಲ ಹಣ ಕೊಟ್ಟು ಶಾಸಕರನ್ನು ಖರೀದಿಸಿ ಅಧಿಕಾರ ಗದ್ದುಗೆ ಏರಿದವರು ಇದ್ದಾರೆ. ನ್ಯಾಯವನ್ನು ಕೊಂಡುಕೊಳ್ಳುವವರಿದ್ದಾರೆ. ಇದೇ ಚಾಳಿಯು ಈಗ ಬಿಟ್ಟಿ ಭಾಗ್ಯವೆಂಬ ಹೆಸರಿನಿಂದ ಮುಂದುವರಿದಿದೆ. ಈ ಕರ್ಮದ ಹಿಂದೆ ಸ್ವಾರ್ಥ, ಅಧಿಕಾರಗಳ ಹೊರತಾಗಿ ಲೋಕಕಲ್ಯಾಣದ ಯಾವ ಚಿಂತನೆಯೂ ಇಲ್ಲ.

ಮನುಷ್ಯರಿಗೆ ಮಾತ್ರ ಸಂಪತ್ತು, ಅಧಿಕಾರ, ಮಾನ್ಯತೆ... ಇತ್ಯಾದಿಗಳು ಬೇಕು. ಇದಕ್ಕಾಗಿ ಏನನ್ನೂ ಮಾಡುತ್ತಾರೆ. ದೇಶವನ್ನೇ ಮಾರುತ್ತಾರೆ. ಭೂಮಿಯನ್ನೂ ಬರಡು ಮಾಡುತ್ತಾರೆ. ಆಜನ್ಮ ವಿರೋಧಿಗಳೊಂದಿಗೂ ಕೈ ಜೋಡಿಸುತ್ತಾರೆ.

ಮನುಷ್ಯನಿಗೆ ತನ್ನ ಬದುಕನ್ನು ಚೆನ್ನಾಗಿ ನಿರ್ವಹಿಸುವಷ್ಟು ಸಂಪತ್ತು ಬೇಕು. ಅದಕ್ಕೂ ಹೆಚ್ಚಾಗಿ ಕೂಡಿಡುವ ಸಂಪತ್ತಿನಿಂದ ಏನು ಪ್ರಯೋಜನ? ಸಂಪತ್ತಿಗಾಗಿ ನಮ್ಮ ಬದುಕನ್ನು ಮೀಸಲಿಡಬಾರದು. ಬಾಹ್ಯವಾದ ಯಾವ ಸಂಪತ್ತೂ ಶಾಶ್ವತವಲ್ಲ, ಸಂಪತ್ತು ಎಂದಿದ್ದರೂ ಚಂಚಲ. ಹೃದಯ ಸಂಪತ್ತು ಮಾತ್ರ ಶಾಶ್ವತ. ಸಂಪತ್ತಿರುವಷ್ಟು ದಿನ ಶ್ರೀಮಂತರ ಹಿಂದೆ ಸುತ್ತುವವರು ಸಂಪತ್ತು ಕರಗಿದ ಮೇಲೆ ದೂರ ಸರಿಯುತ್ತಾರೆ.

ಆದ್ದರಿಂದ ಹಣ ಮಾಡುವುದೇ ಗುರಿಯಾಗದೇ ಉತ್ತಮ ಜೀವನ ನಿರ್ವಹಣೆಗೆ ಮಣೆ ಹಾಕಬೇಕು. ಯಾವುದೇ ಇರಲಿ, ಒಂದು ಹಂತ ಮೀರಿದರೆ ಅಪಾಯ, ತೊಂದರೆ ತಪ್ಪಿದ್ದಲ್ಲ. ಹಣಕ್ಕಾಗಿಯೇ ಮನುಷ್ಯ ಜನ್ಮವಲ್ಲ ಎಂಬ ಎಚ್ಚರವಿದ್ದರೆ ಸಾಕು.

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ

▸ ಸುಬ್ರಹ್ಮಣ್ಯ ಎನ್.

ಪಾಕಿಸ್ತಾನದಲ್ಲಿ ನಡೆದ ಇರಾನ್ - ಅಮೆರಿಕ ಶಾಂತಿ ಮಾತುಕತೆ ಮುರಿದುಬಿದ್ದಿದೆ. ಇರಾನ್ ಮತ್ತು ಅಮೆರಿಕಗಳು ಒಮ್ಮತಕ್ಕೆ ಬರಲು ವಿಫಲಗೊಂಡಿವೆ. ಇದು ದುರದೃಷ್ಟಕರ ನಿಜ. ಆದರೆ ಆಶ್ಚರ್ಯಕರವಲ್ಲ, ಮಾತುಕತೆಯು ಮುರಿದು ಬೀಳುವುದೆಂಬ ಸಂಕೇತ ಆರಂಭದಿಂದಲೇ ಇತ್ತು. ಏಕೆಂದರೆ ಸಂಧಾನ ಪ್ರಕ್ರಿಯೆ ಏರ್ಪಟ್ಟಿದ್ದೇ ಅವಸರದಲ್ಲಿ, ಅಮೆರಿಕವು ಯುದ್ಧ ನಿಲ್ಲಿಸುವುದಕ್ಕಿಂತಲೂ ಮುಖ್ಯವಾಗಿ ತನ್ನ ಮುಖವುಳಿಸಿಕೊಳ್ಳಲು ಈ ಮಾತುಕತೆಗೆ ಮುಂದಾಗಿತ್ತು. ನರೇಟಿವ್ ಕದನದಲ್ಲಿ ಇರಾನ್ ಮೇಲುಗೈ ಸಾಧಿಸುತ್ತಿರುವುದನ್ನು ಕಂಡ ಟ್ರಂಪ್ ಅದಕ್ಕಾಗಿ ಶಾಂತಿ ಮಾತುಕತೆಯ ನಾಟಕವಾಡಿದ್ದರು. ತನ್ನ ಧಣಿಯಾದ ಅಮೆರಿಕದ ಅಪ್ಪಣೆಯಂತೆ ಪಾಕಿಸ್ತಾನವು ಮಾತುಕತೆ ಏರ್ಪಡಿಸಲು ಮುಂದಾಗಿತ್ತು.

ಇಲ್ಲೀಗ ಮುಖ್ಯ ವಿಷಯವಿರುವುದು ಮಾತುಕತೆ ಮುರಿದು ಬಿದ್ದಿರುವುದಲ್ಲ, ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ. ಶಾಂತಿ ಮಾತುಕತೆ ನಡೆದ ಸಮಯ ಸಂದರ್ಭವಂತೂ ಇನ್ನೂ ವಿಪರ್ಯಾಸದ್ದು. ಏಕೆಂದರೆ ಕೆಲವೇ ದಿನಗಳ ಮೊದಲು ಪಾಕಿಸ್ತಾನದ ವಿದೇಶಾಂಗ ಸಚಿವ ಖ್ವಾಜಾ ಆಸೀಫ್ ರವರು, 'ಇಸ್ರೇಲ್ ಮನುಕುಲಕ್ಕೆ ಒಂದು ಶಾಪ ಹಾಗೂ ಕ್ಯಾನ್ಸರ್' ಎಂದು ಬಣ್ಣಿಸಿದ್ದರು. ಅದಕ್ಕೂ ಮುನ್ನ ಇದೇ ಆಸೀಫ್ ಕೊಲ್ಕತ್ತಾ ನಗರದ ಮೇಲೆ ಬಾಂಬ್ ಹಾಕುವುದಾಗಿ ಬೆದರಿಸಿದ್ದರು.

ಇದು ಖ್ವಾಜಾ ಆಸಿಫ್ ಒಬ್ಬರದೇ ಮನಸ್ಥಿತಿಯಲ್ಲ, ಪಾಕಿಸ್ತಾನದ ಎಲ್ಲರ ಮನಸ್ಥಿತಿಯೂ ಅಂತಹುದೇ. ಹಿಂದೊಮ್ಮೆ ಪಾಕಿಸ್ತಾನದ ವಿದೇಶಾಂಗ ಸಚಿವರಲ್ಲಿ ದೇವರಲ್ಲಿ ನಿಮ್ಮ ಮೆಚ್ಚಿನ ಕೋರಿಕೆ ಯಾವುದು ಎಂದು ಕೇಳಿದಾಗ ಆತ " ದೇವರು ನನ್ನ ಕೋರಿಕೆ ಈಡೇರಿಸುವುದಾದರೆ, ನಾನು ನನ್ನ ಎರಡು ಕೈಗಳಲ್ಲಿ ಎರಡು ಪರಮಾಣು ಬಾಂಬ್‌ಗಳನ್ನು ನೀಡುವಂತೆ ಕೋರುತ್ತೇನೆ. ಅದರಲ್ಲಿ ಒಂದನ್ನು ಮುಂಬೈ ಮೇಲೆ ಹಾಗೂ ಇನ್ನೊಂದನ್ನು ದಿಲ್ಲಿ ಮೇಲೆ ಹಾಕುತ್ತೇನೆ" ಎಂದು ನುಡಿದಿದ್ದ.

ಪಾಶ್ಚಿಮಾತ್ಯ ದೇಶಗಳು, ಅದರಲ್ಲಿಯೂ ಮುಖ್ಯವಾಗಿ ಅಮೆರಿಕವು ಪಾಕಿಸ್ತಾನದ ಮುಖಂಡರ ಇಂತಹ ಹೇಳಿಕೆಗಳನ್ನೆಲ್ಲಾ ಪರಿಗಣನೆಗೆ ತೆಗೆದುಕೊಳ್ಳದಿರುವುದು ಪರಮಾಶ್ಚರ್ಯ. ಏಕೆಂದರೆ ಇವೇನು ಯಾವುದೋ ಭಯೋತ್ಪಾದಕ ಸಂಘಟನೆಗಳ ಮಾತುಗಳಲ್ಲ, ಪಾಕಿಸ್ತಾನದ ರಾಜಕೀಯ ಮುಖಂಡರಿಂದ, ಸರಕಾರದಿಂದ ಬರುವ ಹೇಳಿಕೆಗಳಿವು. ಇಂಥ ಹೇಳಿಕೆ ನೀಡುವುದರಲ್ಲಿ ಅವರಿಗೆ ಯಾವುದೇ ಮುಜುಗರವೂ, ಹಿಂಜರಿಕೆಯೂ ಇಲ್ಲ. ಹಾಗಿದ್ದರೆ ಪಾಕಿಸ್ತಾನದಲ್ಲಿ ಮುಖ್ಯವಾಹಿನಿಯಲ್ಲಿ ಇರುವವರಾದರೂ ಯಾರು? ಇಲ್ಲಿ ನಿಮಗೆ ಯಾವುದೇ ಭೇದವೇ ಕಾಣುವುದಿಲ್ಲ, ಮುಖ್ಯವಾಹಿನಿ ಮತ್ತು ಭಯೋತ್ಪಾದನೆಯ ಹಾದಿ ತುಳಿದವರು ಎಲ್ಲರೂ ಒಂದೇ ಆಗಿದ್ದಾರೆ.

ಹಾಗಿದ್ದರೆ, ಪಾಕಿಸ್ತಾನದ ಜಿಹಾದಿ ಅಸ್ಮಿತೆಯು 'ಉದಾರವಾದಿ' (ಲಿಬರಲ್) ಪಾಶ್ಚಿಮಾತ್ಯ ದೇಶಗಳಿಗೆ ಸಮ್ಮತವಾದುದಾದರೂ ಹೇಗೆ?

ಇದಕ್ಕೆ ಉತ್ತರ ಪಾಕಿಸ್ತಾನ ಬೆಳೆದು ಬಂದ ರೀತಿಯಲ್ಲಿದೆ. 1947ರಲ್ಲಿ ಪಾಕಿಸ್ತಾನವು ರೂಪುಗೊಂಡುದೇ ಇಸ್ಲಾಮಿಕ್ ಮೂಲಭೂತವಾದಿ ಮಾನಸಿಕತೆ ಮತ್ತು ಬ್ರಿಟಿಷ್ - ಅಮೆರಿಕನ್ ಭೌರಾಜಕೀಯ ಚಿತಾವಣೆಯಿಂದ. ಮೇಲ್ನೋಟಕ್ಕೆ ಪಾಕಿಸ್ತಾನವು ಆಧುನಿಕವೂ, ಮೂಲಭೂತವಾದವೂ ಜತೆಯಾಗಿ ಮಿಶ್ರಣಗೊಂಡಂತಿತ್ತು. ಈ ವೈರುಧ್ಯವನ್ನು ಪರಿಹರಿಸಿಕೊಳ್ಳುವ ಬದಲಿಗೆ ಪಾಕಿಸ್ತಾನವು ಅದನ್ನೇ ಸಾಂಸ್ಥಿಕಗೊಳಿಸುತ್ತಾ ಬಂತು. ಹೊರಗಿನಿಂದ ಆಧುನಿಕವಾಗಿ ಕಂಡರೂ ಒಳಗಿನಿಂದ ಪಾಕಿಸ್ತಾನವು ಹೆಚ್ಚು ಮೂಲಭೂತವಾದಿ ಯಾಗಿ ಮತ್ತು ಆಕ್ರಮಣಕಾರಿಯಾಗಿ ಬೆಳೆಯುತ್ತಾ ಬಂತು.

ಪಾಕಿಸ್ತಾನದ ಈ ದ್ವಂದ್ವ ನೀತಿಯನ್ನು ಪಾಶ್ಚಿಮಾತ್ಯ ದೇಶಗಳು ಅದರಲ್ಲೂ ಮುಖ್ಯವಾಗಿ ಅಮೆರಿಕವು ಲಾಗಾಯ್ತಿನಿಂದಲೂ ಬೆಂಬಲಿಸುತ್ತಾ ಬಂದಿದೆ. ಖ್ಯಾತ ಲೇಖಕ ಬ್ರೂಸ್ ರೀಡೆಲ್ ಬರೆಯುತ್ತಾರೆ " ಪ್ರಜಾಪ್ರಭುತ್ವದ ಚಾಂಪ್ಯನ್ ಎಂದು ಕರೆಸಿಕೊಳ್ಳುವ ಅಮೆರಿಕವು ನಿರಂತರವಾಗಿ ಪಾಕಿಸ್ತಾನದ ಸರ್ವಾಧಿಕಾರಿಗಳನ್ನು ಬೆಂಬಲಿಸಿಕೊಂಡು ಬಂದಿದೆ. ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಸಾರಿದರೂ , ಒಳಗಿನಿಂದ ಜಿಹಾದ್ ಮಾನಸಿಕತೆಯನ್ನು ಬೆಳೆಸಿಕೊಳ್ಳುತ್ತಾ ಬಂದರೂ ಅಮೆರಿಕವು ಪಾಕಿಸ್ತಾನದ ಬೆಂಬಲಕ್ಕೇ ನಿಂತಿದೆ. ಆಯೂಬ್ ಖಾನ್‌ನಿಂದ ಹಿಡಿದು ಜಿಯಾ ಉಲ್ ಹಕ್, ಮುಷರಫ್ ತನಕ ಎಲ್ಲಾ ನಿರಂಕುಶಾಧಿಕಾರಿಗಳು ಅಮೆರಿಕದ ಬೆಂಬಲ ಪಡೆಯುತ್ತಾ ಬಂದಿದ್ದಾರೆ. ಕೆನಡಿ ಪಾಕಿಸ್ತಾನದ ಅಯೂಬ್ ಖಾನ್‌ಗೇ ಡಿನ್ನರ್ ಪಾರ್ಟಿ ಏರ್ಪಡಿಸಿದ್ದರು. ಪಾಕಿಸ್ತಾನವು ಸಾವಿರಾರು ಬಾಂಗ್ಲಾದೇಶೀಯರನ್ನು ಅಮಾನುಷವಾಗಿ ಹತ್ಯೆಗೈದಾಗ ರಿಚರ್ಡ್ ನಿಕ್ಸನ್ ಕಣ್ಣು ಮುಚ್ಚಿ ಕೂತಿದ್ದರು. ಜಿಯಾ ಉಲ್ ಹಕ್ ಭಯೋತ್ಪಾದಕ ಸಂಘಟನೆಗಳನ್ನು ಬೆಳೆಸಿದರೂ ರೋನಾಲ್ಡ್ ರೇಗನ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಮುಷರಫ್ ತಾಲಿಬಾನ್ ಬೆಳೆಸಿದಾಗ ಜಾರ್ಜ್ ಬುಶ್ ಕಂಡೂ ಕಾಣದಂತೆ ಕೂತರು. ಅದೇ ತಾಲಿಬಾನ್ ಬಳಿಕ ಅಮೆರಿಕನ್ನರನ್ನೇ ಕೊಲ್ಲತೊಡಗಿತು"

ಇಂತಿರುವಾಗ ಡೊನಾಲ್ಡ್ ಟ್ರಂಪ್‌ರವರು ಪಾಕಿಸ್ತಾನಿ ಸೇನಾ ಮುಖಂಡ ಆಸೀಮ್ ಮುನೀರ್‌ನನ್ನು 'ನನ್ನ ಮೆಚ್ಚಿನ ಫೀಲ್ಡ್ ಮಾರ್ಷಲ್' ಎಂದು ಕರೆಯುವುದು ಅಚ್ಚರಿ ತರುವುದಿಲ್ಲ. ಇವೆಲ್ಲ ಪಾಕಿಸ್ತಾನದ ಆಡಳಿತದಲ್ಲಿ

> ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ.

ಒಂದು ನಂಬಿಕೆಯನ್ನು ಗಟ್ಟಿಗೊಳಿಸಿದೆ. ತಾವು ಎಷ್ಟೇ ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡಿದರೂ, ಎಷ್ಟೇ ಜಿಹಾದಿ ಮಾನಸಿಕತೆಯನ್ನು ಪ್ರಕಟಿಸಿದರೂ ಪಾಶ್ಚಿಮಾತ್ಯ ಜಗತ್ತು ತಮ್ಮನ್ನು ಒಪ್ಪಿಕೊಳ್ಳುತ್ತದೆ ಎಂಬುದಾಗಿ.

ಹಾಗಾಗಿ ಉದಾರವಾದಿ ಪಾಕಿಸ್ತಾನಿಯರು ಕೂಡಾ ಕಾಲಕ್ರಮೇಣ ಉಗ್ರವಾದಿ ಮಾನಸಿಕತೆ ಬೆಳೆಸಿಕೊಂಡರು. ಮಹಮ್ಮದ್ ಅಲಿ ಜಿನ್ನಾ ಕೂಡಾ ಒಂದು ಕಾಲದಲ್ಲಿ ಹಿಂದು-ಮುಸ್ಲಿಂ ಏಕತೆಯ ಸರದಾರ ಎಂದು ಬಣ್ಣಿಸಲ್ಪಟ್ಟಿದ್ದ. ಆದರೆ ಹಿಂದುಗಳನ್ನು ಪಾಕಿಸ್ತಾನದಲ್ಲಿ ಉಳಿಸಿಕೊಳ್ಳಲು ಆತ ಪಟ್ಟ ಪ್ರಯತ್ನವು ಆತನ ಕಾರ್ಯತಂತ್ರದ ಒಂದು ಭಾಗವಾಗಿತ್ತೇ ಹೊರತು ಪ್ರಾಮಾಣಿಕವಾದುದಾಗಿರಲಿಲ್ಲ. ಭಾರತದಲ್ಲಿರುವ ಮುಸ್ಲಿಮರಿಗೆ ಸುರಕ್ಷೆ ಒದಗಿಸುವುದು ಆತನ ಈ ನಡೆಯ ಹಿಂದಿನ ಉದ್ದೇಶವಾಗಿತ್ತು.

ಪಾಕಿಸ್ತಾನದ ಆಡಳಿತಗಾರರೆಲ್ಲ ಜಿಹಾದಿ ಆಯಾಮವನ್ನು ಬೆಂಬಲಿಸಿಕೊಂಡೇ ಬಂದವರು. ಜುಲ್ಫಿಕರ್ ಅಲಿ ಭುಟ್ಟೋ ಕೂಡಾ ತಮ್ಮ ಸಮಾಜವಾದಿ ಸಿದ್ಧಾಂತದ ಜತೆಗೇ ಪಾಕಿಸ್ತಾನದ ಇಸ್ಲಾಮೀಕರಣವನ್ನು ಬಲಗೊಳಿಸಿದ್ದರು. ಬೆನಜೀರ್ ಭುಟ್ಟೋ ಲಿಬರಲ್ ನಾಯಕಿ ಎಂಬ ಮುಖವಾಡ ಹಾಕಿಕೊಂಡಿದ್ದರೂ ಕಾಶ್ಮೀರಕ್ಕೆ ಸಂಬಂಧಿಸಿ ಜಿಹಾದನ್ನು ಪ್ರೋತ್ಸಾಹಿಸಿದ್ದರು ಹಾಗೂ ತಾಲಿಬಾನ್ ಬೆಳೆಯಲೂ ಅವರೇ ಕಾರಣರಾಗಿದ್ದರು. ನವಾಜ್ ಶರೀಫ್ ಆಡಳಿತದ ಅವಧಿಯಲ್ಲಿ ಮುಂಬೈ ಸ್ಫೋಟಗಳು ಮತ್ತು ಕಾರ್ಗಿಲ್ ಅತಿಕ್ರಮಣ ನಡೆದಿತ್ತು. ಪಾಕಿಸ್ತಾನದ ಈಗಿನ ಸೇನಾ ಮುಖ್ಯಸ್ಥ ಮುನೀರ್ ಕೂಡಾ ಇದೇ ರೀತಿಯ ಮಾನಸಿಕತೆಯವನು.

ಪಾಕಿಸ್ತಾನವು ಜಿಹಾದಿ ಫ್ಯಾಕ್ಟರಿಯಾಗಿರುವುದರ ಜತೆಗೆ ಪಾಶ್ಚಿಮಾತ್ಯ ದೇಶಗಳ ಮಿತ್ರನೂ ಆಗಿರುವುದು ಭಾರತದ ಪಾಲಿಗೆ ಎರಡಲಗಿನ ಕತ್ತಿಯಂತಾಗಿದೆ. ಭಾರತವು ಪಾಶ್ಚಿಮಾತ್ಯ ದೇಶಗಳ ಸ್ನೇಹವುಳಿಸಿಕೊಂಡೇ ಇತ್ತ ಪಾಕಿಸ್ತಾನದ ವಿರುದ್ಧ ಹೋರಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಕಿಸ್ತಾನವನ್ನು ಭಾರತವು ದುರ್ಬಲಗೊಳಿಸಲು ಯತ್ನಿಸಿದರೂ ಅಮೆರಿಕ ಅದನ್ನು ಮತ್ತೆ ಬಲಗೊಳಿಸುವ ಯತ್ನಕ್ಕೆ ಕೈಹಾಕುತ್ತದೆ.

ಇವೆಲ್ಲದರ ಹಿನ್ನೆಲೆಯಲ್ಲಿ ನೋಡುವಾಗ, ಪಾಕಿಸ್ತಾನದಲ್ಲಿ ನಡೆದ ಇರಾನ್ -ಅಮೆರಿಕ ಶಾಂತಿ ಮಾತುಕತೆ ಮುರಿದುಬೀಳುವುದು ಅನಿವಾರ್ಯವಾಗಿತ್ತು. ಆದರೆ ಈ ಮಾತುಕತೆಯ ವೈಫಲ್ಯದ ನಿಜವಾದ ಕಾರಣ ಬೇರೆಡೆಯಲ್ಲಿದೆ. ಮುಖ್ಯವಾಗಿ ಅಮೆರಿಕದ ದ್ವಂದ್ವ ನಿಲುವು ಇದಕ್ಕೆ ಕಾರಣ. ಅಮೆರಿಕದ ಮಾತಿನಲ್ಲೊಂದು ಹಾಗೂ ಕೃತಿಯಲ್ಲೊಂದು ವರ್ತನೆಯು ಸಮಸ್ಯೆ ಪರಿಹಾರವಾಗಲು ಅವಕಾಶ ನೀಡುವುದಿಲ್ಲ. ಈ ವರ್ತನೆಯನ್ನು ನಿಲ್ಲಿಸದ ಹೊರತು ಅಮೆರಿಕವು ಸ್ವಂತ ಗೋಲು ಹೊಡೆಯುತ್ತಲೇ ಇರಬೇಕಾಗುತ್ತದೆ. ಪಾಕಿಸ್ತಾನವು ಪದೇಪದೇ ಅದರ ಲಾಭ ಪಡೆಯುತ್ತಲೇ ಇರುತ್ತದೆ. ಅಂತಿಮವಾಗಿ ಇದು ಪಾಶ್ಚಿಮಾತ್ಯ ದೇಶಗಳ ಮತ್ತು ಅಮೆರಿಕದ ವಿಶ್ವಾಸಾರ್ಹತೆಗೇ ಕುಂದು ತರಲಿದೆ.

ಮಹಿಳಾ ಸಬಲೀಕರಣದತ್ತ ದೃಷ್ಟಿ-ವಿಕಸಿತ ಭಾರತಕ್ಕೆ ನಾರೀಶಕ್ತಿ

▸ ಶುಭಾ ಹೆಗಡೆ ಗಿರಣಿಮನೆ

ಭಾರತವು ಅಭಿವೃದ್ಧಿ ಪಥದಲ್ಲಿ ವೇಗವಾಗಿ ಸಾಗುತ್ತಿದೆ. ಈ ಕಾಲಘಟ್ಟದಲ್ಲಿ ಮಹಿಳೆಯರ ಸಬಲೀಕರಣವು ಕೇವಲ ಒಂದು ಸಾಮಾಜಿಕ ವಿಚಾರವಲ್ಲ, ಅದು ರಾಷ್ಟ್ರ ನಿರ್ಮಾಣದ ಆಧಾರಕ್ಕೂ ಮೂಲವಾಗಿದೆ. ಇಂಥಹ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಅಧಿನಿಯಮ (Women's Reservation Act) ಒಂದು ಐತಿಹಾಸಿಕ ಹೆಜ್ಜೆಯನ್ನು ಇಡುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು, ಸಮಾನ ಅವಕಾಶಗಳನ್ನು ಒದಗಿಸುವುದು ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಈ ಅಧಿನಿಯಮದಲ್ಲಿದೆ.

ನಮ್ಮ ಸಂವಿಧಾನದಲ್ಲಿ ಸಮಾನತೆ ಎನ್ನುವ ತತ್ತ್ವವನ್ನು ಘೋಷಿಸಿದ್ದರೂ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆಯಲ್ಲೇ ಉಳಿದಿತ್ತು. 2019ರ ಚುನಾವಣೆಯ ನಂತರವೂ ಸಹ ಕೇವಲ ಸುಮಾರು 14% ರಷ್ಟು ಮಾತ್ರವಿತ್ತು. ಇದು ರಾಜ್ಯ ವಿಧಾನಸಭೆಗಳಲ್ಲೂ ಹೆಚ್ಚಿನ ಬದಲಾವಣೆ ಏನೂ ಆಗಿರಲಿಲ್ಲ. ಹಾಗಿರುವಾಗ ಈ ಸ್ಥಿತಿ ಬದಲಿಸಿ ಹೊಸ ನಿಯಮ ತರುವುದು ಅವಶ್ಯವಾಗಿತ್ತು. ಈ ನಿಟ್ಟಿನಲ್ಲಿ 2023ರಲ್ಲಿ 'ನಾರೀಶಕ್ತಿ ವಂದನ ಅಧಿನಿಯಮ'ವು ಸಂಸತ್ತಿನಲ್ಲಿ ಅಂಗೀಕಾರವಾಯಿತು. ಪರಿಣಾಮ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಗೆ ಈ ಮಹಿಳಾ ಮೀಸಲಾತಿ ಅಧಿನಿಯಮ ಪ್ರಕಾರ 33% (1/3)ರಷ್ಟು ಸ್ಥಾನಕ್ಕೆ ಮಹಿಳೆಯರು ಇರುತ್ತಾರೆ. ಇದರಿಂದ ಮಹಿಳೆ ಆಡಳಿತಕ್ಕೆ ಬಂದರೆ ಒಂದು ಸಮತೋಲನವನ್ನು ತರಲು ಪ್ರಯತ್ನಿಸಿದಂತಾಗುತ್ತದೆ.

ಈ ಪ್ರಯತ್ನವು ದೇಶದ ಅಭಿವೃದ್ಧಿ, ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಸ್ಥಳೀಯ ಅನೇಕ ಸಮಸ್ಯೆಗಳ ಕಡೆ ಸೂಕ್ಷ್ಮವಾಗಿ ಗಮನಿಸುವಿಕೆ ಹೀಗೆ ಅನೇಕ ರೀತಿಯ ಬದಲಾವಣೆಯ ಪರಿಣಾಮ ಬೀರುತ್ತದೆ. ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಭಾಷಣವೊಂದರಲ್ಲಿ "ನಾರೀಶಕ್ತಿಯು ದೇಶದ ಅಭಿವೃದ್ಧಿಗೆ ಮೂಲಶಕ್ತಿ. ಮಹಿಳೆಯು ಮುಂದಾದರೆ ಭಾರತವು ವಿಕಸಿತ ರಾಷ್ಟ್ರವಾಗುವುದು ಖಚಿತ" ಎಂದರು. ಇನ್ನೊಂದು ವಿಶೇಷವೆಂದರೆ ಈ ಮಸೂದೆಗೆ ಅಂಕಿತ ಹಾಕಿದವರು ಸಹ ರಾಷ್ಟ್ರಪತಿ ದ್ರೌಪದಿ ಮುರ್ಮು ಮಹಿಳೆಯೇ ಎನ್ನುವುದು ಹೆಮ್ಮೆ ಪಡುವಂಥಹ ಸಂಗತಿ. ಹಾಗಾದರೆ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನದಾಗಿ ಪಾಲ್ಗೊಂಡರೆ ಆಗುವ ಪರಿಣಾಮಗಳೇನು? ಎಂದು ನೋಡಬೇಕಾಗುತ್ತದೆ.

ಮಹಿಳಾ ಮೀಸಲಾತಿ ಅಧಿನಿಯಮ

ನಾರಿ ಶಕ್ತಿಯಿಂದಾಗುವ ಪರಿಣಾಮಗಳು: ನಮ್ಮಲ್ಲಿ ಮಹಿಳೆ ಎಂದರೆ ಕೇವಲ ಕುಟುಂಬ ನಿರ್ವಹಣೆಗೆ ಮಾತ್ರ ಎನ್ನುವ ಕಾಲವೊಂದಿತ್ತು. ಹಾಗಂತ ಹೊರಜಗತ್ತಿಗೆ ಮಹಿಳೆ ಕಾಣಿಸಿಕೊಂಡೇ ಇಲ್ಲ ಅಂತಲ್ಲ, ಆದರೆ ಪ್ರಮಾಣ ಕಡಿಮೆ ಇತ್ತು. ಆದರೂ ರಾಜಕೀಯದಂಥಹ ಕ್ಷೇತ್ರದಲ್ಲಿ ಮಹಿಳೆಯ ಸ್ಥಾನವು ಮಾನಸಿಕವಾಗಿಯೂ ಹಿಂದೆ ಇತ್ತು ಹಾಗೂ ಸಂವಿಧಾನಿಕವಾಗಿಯೂ ಶೇಕಡಾವಾರು ಕಮ್ಮಿಯೇ ಇತ್ತು. ಈಗ ಜಾರಿಗೊಳ್ಳುತ್ತಿರುವ ಹೊಸ ಅಧಿನಿಯಮವು ಇಷ್ಟು ದಿನದ ಸಮಾನತೆ ಎನ್ನುವ ಕೂಗಿಗೂ ಸಹ ಒಂದು ಹೊಸ ಅಧ್ಯಾಯ ನೀಡುತ್ತದೆ. ಮಹಿಳೆಯರಲ್ಲಿ ಐದು ಆಡಳಿತಾತ್ಮಕ ಗುಣಗಳನ್ನು ಕಾಣಬಹುದು. ಶಿಸ್ತು, ಭ್ರಷ್ಟಾಚಾರ ನಿರ್ಮೂಲನೆ, ಅಭಿವೃದ್ಧಿ, ನೀತಿ ನಿರೂಪಣೆ, ಆಡಳಿತ ಇವೇ ಆ ಪಂಚಸೂತ್ರಗಳು.

ಶಿಸ್ತು: ಆಕೆ ತನಗೆ ನೀಡಿದ ಜವಾಬ್ದಾರಿಯನ್ನು ಶಿಸ್ತಿನಿಂದ ಪಾಲಿಸುವುದು ಹುಟ್ಟುಗುಣ. ಅಂಥಹ ಶಿಸ್ತು ರಾಜಕೀಯದಲ್ಲಿ, ಆಡಳಿತದಲ್ಲಿ ಬೇಕಾಗಿದೆ. ಮಹಿಳೆಯರು ಆ ಶಿಸ್ತನ್ನು ಪಾಲಿಸಬಲ್ಲರು.

ಭ್ರಷ್ಟಾಚಾರ ನಿರ್ಮೂಲನೆ: ಭಾರತದಲ್ಲಿ ಭ್ರಷ್ಟಾಚಾರ ಎನ್ನುವುದು ನಿತ್ಯ ಊಟ ಮಾಡುವ ಅನ್ನದಷ್ಟೇ ಪಥ್ಯವಾಗಿಬಿಟ್ಟಿದೆ. ದೇಶದ ಭವಿಷ್ಯ ನಿರ್ಮಾಣಕ್ಕೆ ಭ್ರಷ್ಟಾಚಾರ ದೊಡ್ಡ ತೊಡಕು. ಅಂತಹ ಭ್ರಷ್ಟಾಚಾರವನ್ನು ಮಹಿಳೆ ಹತ್ತಿಕ್ಕಬಲ್ಲಳು.

ಅಭಿವೃದ್ಧಿ: ಮಹಿಳೆಗೆ ಸೂಕ್ಷ್ಮದೃಷ್ಟಿತ್ವವಿದೆ. ಯಾವ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆ ಹರಿಸಬೇಕು ಎನ್ನುವ ಜಾಣ್ಮೆ ಮತ್ತು ತಾಳ್ಮೆ ಆಕೆಯ ಕೆಲಸಕ್ಕೆ ಪೂರಕವಾಗಿರುತ್ತದೆ.

ನೀತಿ ನಿರೂಪಣೆ: ಒಂದು ಕೆಲಸವನ್ನು ಕೈಗೆತ್ತಿಕೊಂಡರೆ ಆ ಕೆಲಸ ನಿಯತ್ತಾಗಿ ಮುಗಿಸಲು ಬೇಕಿರುವ ನಿಯಮ, ನೀತಿ, ಕಾನೂನನ್ನು ಅಚ್ಚುಕಟ್ಟಾಗಿ ಪಾಲಿಸಬಲ್ಲಳು.

ಆಡಳಿತ: ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಆಡಳಿತಗಾರನೂ ಸೇವಕನಾಗಿ ಕೆಲಸ ಮಾಡಬೇಕು. ಕಾಯಕವೇ ಕೈಲಾಸ ಎಂದುಕೊಂಡ ಮಹಿಳೆ ಅಧಿಕಾರ ಸಿಕ್ಕರೆ ಆಕೆಯ ಕ್ಷಮತೆಯನ್ನು ಒರೆಗೆ ಹಚ್ಚಿ ಕೆಲಸವನ್ನು ಮಾಡುತ್ತಾಳೆ.

ಇಂಥಹ ಐದು ನಿಯಮವನ್ನು ಪಾಲಿಸುವ ಮಹಿಳೆಗೆ ರಾಜಕೀಯದಲ್ಲಿ ಹೆಚ್ಚಿನ ಅವಕಾಶ ಸಿಗುತ್ತಿರುವುದು ಸ್ವಾಗತಾರ್ಹ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ 33% ಮೀಸಲಾತಿ ಈಗಾಗಲೇ ನೀಡಲಾಗಿದೆ. ಕೆಲವು ರಾಜ್ಯಗಳಂತು 50%ವರೆಗೂ ಮೀಸಲಾತಿ ಹೆಚ್ಚಿಸಿವೆ. ಇದರ ಪರಿಣಾಮ ಗ್ರಾಮೀಣ ಮಟ್ಟದಲ್ಲಿ ಗಮನಾರ್ಹವಾಗಿ ಬದಲಾವಣೆಯನ್ನು ಕಾಣಬಹುದು. ಅಧ್ಯಯನಗಳ ಪ್ರಕಾರ ಗ್ರಾಮ ಪಂಚಾಯತಿಗಳಲ್ಲಿ ಶಿಕ್ಷಣ, ಆರೋಗ್ಯ, ಮತ್ತು ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳ ಮೇಲೆ ಹೆಚ್ಚಿನ ಗಮನ ಹರಿಸಿರುವುದು ಕಂಡು ಬರುತ್ತದೆ.

ಮಹಿಳೆಯರ ಶಿಕ್ಷಣ: ಭಾರತವು ಸ್ವತಂತ್ರ ಬಂದ ನಂತರ 1951ರಲ್ಲಿ ಮಹಿಳಾ ಸಾಕ್ಷರತೆ ಕೇವಲ 8.9%ರಷ್ಟು ಇತ್ತು. ಕಾಲವು ಬದಲಾಗುತ್ತ ಸಾಗಿದಂತೆ ಮಹಿಳೆಯರಿಗೆ ಶಿಕ್ಷಣದ ಒತ್ತು ಹೆಚ್ಚಿದೆ. 2011ರ ಜನಗಣತಿಯ ಅಂಕಿ ಅಂಶ ನೋಡಿದರೆ ಸುಮಾರು 65%ರಷ್ಟು ಹೆಚ್ಚಿದೆ. ಇತ್ತೀಚಿನ ಅಂದಾಜಿನ ಪ್ರಕಾರ 70% ದಾಟಿದೆ ಎಂದು ಹೇಳಲಾಗುತ್ತಿದೆ. ವಿದ್ಯಾಭ್ಯಾಸದಲ್ಲಿ ಈ ಮಟ್ಟದಲ್ಲಿ ಬದಲಾವಣೆ ಆದರೂ ಸಹ ರಾಜಕೀಯದಲ್ಲಿ ಮಾತ್ರ ಪಾಲ್ಗೊಳ್ಳುವಿಕೆ ಬಹಳ ಕಡಿಮೆ ಇದೆ. ಮಹಿಳೆಯರಿಗೆ ರಾಜಕೀಯಕ್ಕೆ ಬನ್ನಿ ಎಂದು ಕರೆದರೆ ಬರಲಾಗದು. ಸಂವಿಧಾನದಲ್ಲೂ ತಿದ್ದುಪಡಿಯಾಗಬೇಕು. ಆ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಶಿಕ್ಷಣ ಬೇಕು. ಈ ಜಾಗೃತಿ ಮೂಡಿಸುವ ವ್ಯಕ್ತಿ ಮಹಿಳೆಯೇ ಆಗಿದ್ದರೆ! ಹೌದು, ಇದು ಒಂದು ರೀತಿಯ ಸರಪಳಿಯ ಕೊಂಡಿಯಂತೆ ಒಂದಕ್ಕೊಂದು ಅಂಟಿಕೊಂಡಿದೆ. ಹಾಗಾಗಿ ಇದನ್ನು ಸರಿದೂಗಿಸಲು ಮಹಿಳಾ ಮೀಸಲಾತಿ ಅಧಿನಿಯಮ ಜಾರಿಗೆ ಬರುವುದು ಅಗತ್ಯವಾಗಿದೆ. ಈ ನಿಯಮದಿಂದ ಮಹಿಳೆಯರಿಗೆ ರಾಜಕೀಯದಲ್ಲಿ ಅವಕಾಶ ಸಿಕ್ಕರೆ ಕೇವಲ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಮಾತ್ರವಲ್ಲ, ಸಮಾಜದ ಹಿತಕ್ಕಾಗಿ ಕೆಲಸ ಮಾಡುವ ಸಾಮರ್ಥ್ಯವನ್ನು ತೋರಿಸುತ್ತಾರೆ.

ಈ ಮೀಸಲಾತಿ ಮಹಿಳೆ ಮತ್ತು ಮಕ್ಕಳ ಸಮಸ್ಯೆಗೆ ಪರಿಹಾರವಾಗಬಲ್ಲದೇ: ಹೆಣ್ಣಿನ ನೋವು ಹೆಣ್ಣಿಗೆ ತಿಳಿಯುವುದು, ಮಗುವಿನ ನೋವು ತಾಯಿಗೆ ತಿಳಿಯುವುದು ಎನ್ನುವಂಥಹ ಸಂಗತಿ ಎಲ್ಲರಿಗೂ ಗೊತ್ತಿರುವಂಥದ್ದೆ. ಹಾಗಿರುವಾಗ ಮಹಿಳೆ ಶಾಸಕಿಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯನ್ನು, ಶಿಕ್ಷಣ ಖಾತೆಯನ್ನು, ಸಾಮಾಜಿಕ ಭದ್ರತೆಯ ವಿಷಯವಾಗಿ, ಆರ್ಥಿಕ ಕ್ಷೇತ್ರದಲ್ಲಿ ಹೀಗೆ ಪ್ರಮುಖ ಕ್ಷೇತ್ರದಲ್ಲಿದ್ದರೆ ಅಭಿವೃದ್ಧಿಯ ಸಮಗ್ರ ದೃಷ್ಟಿಕೋನವನ್ನು ಇಟ್ಟುಕೊಂಡು ಪ್ರತಿಬಿಂಬಿಸುತ್ತಾರೆ. ಅಲ್ಲದೇ ಮಹಿಳೆಯರ ರಾಜಕೀಯ ಪ್ರವೇಶ ಹೆಚ್ಚಾಗುವುದರಿಂದ ಸ್ವಯಂಸಹಾಯ ಸಂಘಗಳಲ್ಲಿ ಗಣನೀಯ ಪ್ರೋತ್ಸಾಹ, ಮಹಿಳಾ ಉದ್ಯಮಶೀಲತೆಯ ಮೂಲಕ ಗ್ರಾಮೀಣ ಆರ್ಥಿಕತೆ ಬಲಪಡಿಸುವಿಕೆ, ಮಕ್ಕಳ ಮೇಲಿನ ಮಾನಸಿಕ ಒತ್ತಡ ನಿರ್ವಹಣೆಗೆ ಬೇಕಾಗುವ ಕ್ರಮ, ಮಹಿಳೆ ಮತ್ತು ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹೀಗೆ ಅತೀ ಹತ್ತಿರದಿಂದ ಬಲ್ಲವರಾಗಿ ಅದಕ್ಕೆ ಬೇಕಾಗುವ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವ ಕೆಲಸ ಮಹಿಳೆಯು ಮಾಡುತ್ತಾಳೆ.

ನ್ಯಾಯ ಮತ್ತು ಧರ್ಮ: ಶಿಕ್ಷಣ, ಆರೋಗ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ಗೌರವವನ್ನು ಸಮಗ್ರವಾಗಿ ನೋಡಿದರೆ ಈ ಅಧಿನಿಯಮವು ಜಾರಿಗೆ ಬರುತ್ತಿರುವುದು ಅಭಿವೃದ್ಧಿ ದಿಕ್ಕಿಗೆ ಕೊಂಡೊಯ್ಯುವ ಮತ್ತೊಂದು ಮೈಲುಗಲ್ಲಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮಹಿಳೆ ನಿರ್ಧಾರ ಮಾಡುವ ಸ್ಥಾನದಲ್ಲಿದ್ದಾಗ ಸಮಾಜದ ಎಲ್ಲ ವರ್ಗಗಳಿಗೂ ಧ್ವನಿಯಾಗುವ ಮತ್ತು ನ್ಯಾಯ ಕೊಡಿಸುವ ಅವಕಾಶಗಳು ಹೆಚ್ಚಿದೆ. ಇಂದಿನ ಕಾಲದಲ್ಲಿ ತಂತ್ರಜ್ಞಾನ, ವಿಜ್ಞಾನ, ಕ್ರೀಡೆ, ಸೇನೆ ಹೀಗೆ ಎಲ್ಲ ಕ್ಷೇತ್ರದಲ್ಲೂ ಇದ್ದಾರೆ ಎಂದು ನಾವು ಹೆಮ್ಮೆ ಪಡುತ್ತೇವೆ. ಆದರೆ ರಾಜಕೀಯ ಬಲವು ಮಹಿಳೆಗೆ ಸಿಕ್ಕರೆ ಈ ಎಲ್ಲ ಕ್ಷೇತ್ರದಲ್ಲಿರುವ ಮಹಿಳೆಯರಿಗೆ ಸಿಗುವ ಬಲವು ಬೇರೆಯದೇ ಆಗಿರುತ್ತದೆ. ಇದಕ್ಕೆ ಗ್ರಾಮ ಪಂಚಾಯ್ತಿಗಳಲ್ಲಿ ಆದ ಬದಲಾವಣೆಯೇ ನಾವು ಗಮನಿಸಬಹುದು. ಇದರೊಟ್ಟಿಗೆ ಮಹಿಳಾ ಮೀಸಲಾತಿ ಅಧಿನಿಯಮವು ಸಮಾಜದಲ್ಲಿರುವ ಅನೇಕ ಅಂತರವನ್ನು ತೊಡೆದು ಹಾಕಲು ಸಹ ಸಹಾಯ ಮಾಡುತ್ತದೆ.

"ವಿಕಸಿತ ಭಾರತ" ಎನ್ನುವ ಕನಸನ್ನು ಸಂಪೂರ್ಣವಾಗಿ ಸಾಕಾರಗೊಳಿಸಲು "ನಾರಿ ಶಕ್ತಿ"ಯ ಪಾತ್ರ ಬಹಳ ದೊಡ್ಡದಾಗಿದೆ. ದೇಶದಲ್ಲಿ ಸಮಾನತೆ, ನ್ಯಾಯ, ಅಭಿವೃದ್ಧಿ ಸಾಧಿಸಲು ಈ ಅಧಿನಿಯಮವು ಪೂರಕವಾಗುತ್ತದೆ. ಮಹಿಳಾ ಮೀಸಲಾತಿ ಅಧಿನಿಯಮವು ನಮ್ಮ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಇನ್ನಷ್ಟು ಸಮಾನತೆ, ಭದ್ರತೆ, ಮತ್ತು ಭದ್ರತೆಯತ್ತ ಕೊಂಡೊಯ್ಯುವ ಮಹತ್ತರ ಹೆಜ್ಜೆ. ರಾಷ್ಟ್ರವೊಂದು ಇದ್ದರೆ ಸಾಲದು. ಅಲ್ಲಿ ಸರ್ವತೋಮುಖ ಅಭಿವೃದ್ಧಿಯಾದರೆ ಮಾತ್ರ ಜಗತ್ತಿಗೆ ವಿಶ್ವಗುರು ರಾಷ್ಟ್ರವಾಗಬಲ್ಲದು. ಈ ನಿಟ್ಟಿನಲ್ಲಿ ನಾರಿ ಶಕ್ತಿಶಾಲಿಯಾದಾಗ ಮಾತ್ರ ಭಾರತವು ನಿಜವಾದ ಅರ್ಥದಲ್ಲಿ ವಿಕಸಿತ ರಾಷ್ಟ್ರವಾಗಲು ಸಾಧ್ಯ.

ದಶಕಗಳ ಕನಸಿಗೆ ರೂಪ ನೀಡಿದ ದೃಢ ರಾಜಕೀಯ ಇಚ್ಛಾಶಕ್ತಿ

▸ ಶ್ರೀವಲ್ಲಿ

ಭಾರತದ ರಾಜಕೀಯ ವೇದಿಕೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಇಂದಿನ ಅಗತ್ಯ. 2023ರ ಸೆಪ್ಟೆಂಬರ್ 28ರಂದು ಲೋಕಸಭೆಯಲ್ಲಿ ಮತ್ತು ಒಕ್ಟೋಬರ್ 21ರಂದು ರಾಜ್ಯಸಭೆಯಲ್ಲಿ ಅಂಗೀಕಾರಗೊಂಡ 'ನಾರಿ ಶಕ್ತಿ ವಂದನ್ ಅಧಿನಿಯಮ್' (106ನೇ ಸಾಂವಿಧಾನಿಕ ತಿದ್ದುಪಡಿ) ಈ ಗುರಿಯತ್ತ ಒಂದು ಮೈಲಿಗಲ್ಲು. ಮೋದಿ ಸರ್ಕಾರದ ನೇತೃತ್ವದಲ್ಲಿ ಜಾರಿಗೊಂಡ ಈ ಮಸೂದೆ, ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಖಾತರಿಪಡಿಸುತ್ತದೆ. ಇದು ದೇಶದ ರಾಜಕೀಯ ಚೈತನ್ಯವನ್ನು ಹೆಚ್ಚಿಸುವ ದೊಡ್ಡ ಹೆಜ್ಜೆಯಾಗಿದೆ.

ಈ ಮಸೂದೆಯ ಇತಿಹಾಸವು ದೀರ್ಘಕಾಲದ ಹೋರಾಟದಿಂದ ಆರಂಭವಾಗುತ್ತದೆ. 1992ರಲ್ಲಿ 73ನೇ ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳ ಮೂಲಕ ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. ಇದರಿಂದ ಲಕ್ಷಾಂತರ ಮಹಿಳೆಯರು ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ನಾಯಕತ್ವ ವಹಿಸಿದರು. ಆದರೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಹಕಾರೀ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ 14 ಶೇಕಡಾ ಇದ್ದು, ಇದು ಸಮಾನತೆಯ ಕೊರತೆಯನ್ನು ತೋರಿಸುತ್ತಿತ್ತು.

1996ರಲ್ಲಿ ಎನ್.ಡಿ.ಎ ಸರ್ಕಾರವು ಮೊದಲ ಬಾರಿಗೆ ಈ ಮಸೂದೆಯನ್ನು ಪರಿಚಯಿಸಿತು. ಆದರೆ ರಾಜ್ಯಸಭೆಯಲ್ಲಿ ಅಡ್ಡಿ ಬಂದಿತು. ಆದರೆ ವಿರೋಧ ಪಕ್ಷಗಳ ಧರ್ಮನಿರಪೇಕ್ಷತೆ ಮತ್ತು ಒಬಿಸಿ ಮೀಸಲಾತಿಯ ಬೇಡಿಕೆಗಳಿಂದ ಪರಿಚಯಿಸಿದರೂ, ಲೋಕಸಭೆಯಲ್ಲಿ ನಿಲ್ಲಿಸಲ್ಪಟ್ಟಿತು. ಈ ಹೋರಾಟದಲ್ಲಿ ಎನ್.ಡಿ.ಎ ಮತ್ತು ಬಿಜೆಪಿಯವರು ನಿರಂತರವಾಗಿ ಬೆಂಬಲ ನೀಡಿದರು. ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ, 2019ರಲ್ಲಿ ಲೋಕಸಭೆ ಚುನಾವಣಾ ಘೋಷಣಾ ಪತ್ರದಲ್ಲಿ ಈ ಮಸೂದೆಯನ್ನು ಪ್ರಮುಖ ಅಭಿಪ್ರಾಯವಾಗಿ ಘೋಷಿಸಿತು. ಕೊನೆಗೂ 2023ರಲ್ಲಿ ಐತಿಹಾಸಿಕ ಜಯ ಸಾಧಿಸಿತು.



ಮಹಿಳಾ ಅಭಿವೃದ್ಧಿಯ ಕೇಂದ್ರಬಿಂದು

ಈ ಮಸೂದೆಯ ಮಹತ್ವವು ಅಪಾರ. ಇದು ರಾಜಕೀಯದಲ್ಲಿ ಮಹಿಳೆಯರನ್ನು ಸಬಲೀಕರಿಸುತ್ತದೆ. ಇದರಿಂದ ಲಿಂಗ ಸಮಾನತೆ ಸಾಧ್ಯವಾಗುತ್ತದೆ. ಲೋಕಸಭೆಯ 543 ಸ್ಥಾನಗಳಲ್ಲಿ 181 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುತ್ತವೆ. ಇದು ನೀತಿ ನಿರ್ಧಾರದಲ್ಲಿ ಮಹಿಳೆಯರ ಮತ್ತು ಕುಟುಂಬಗಳ ಸಮಸ್ಯೆಗಳಾದ ಶಿಕ್ಷಣ, ಆರೋಗ್ಯ, ಸುರಕ್ಷತೆ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡುತ್ತದೆ. ಉದಾಹರಣೆಗೆ, ಪಂಚಾಯಿತಿ ಮಟ್ಟದಲ್ಲಿ, ಮಹಿಳಾ ನಾಯಕತ್ವದಿಂದ ರಸ್ತೆ, ನೀರು, ವಿದ್ಯುತ್ ಸೌಲಭ್ಯಗಳು ಹೆಚ್ಚಾದವು. ರಾಷ್ಟ್ರೀಯ ಮಟ್ಟದಲ್ಲಿ ಇದು ದೇಶದ ಅಭಿವೃದ್ಧಿಯನ್ನು ತೋರಿಸುತ್ತದೆ. ಸಂಯುಕ್ತರಾಷ್ಟ್ರ ಸಂಘದ ಲಿಂಗ ಸಮಾನತೆ ಗುರಿಗಳೊಂದಿಗೆ ಸಮನ್ವಯಗೊಳ್ಳುತ್ತದೆ.

ಮೋದಿ ಸರ್ಕಾರದ ಮಹಿಳಾ ಬೆಂಬಲದ ಸ್ಥಾನವು ಸ್ಪಷ್ಟ. 'ಬೇಟಿ ಬಚಾವ್ ಬೇಟಿ ಪಢಾವ್' ಯೋಜನೆಯಿಂದ ಲಕ್ಷಾಂತರ ಬಾಲಕಿಯರ ಉಳಿವು ಮತ್ತು ಶಿಕ್ಷಣ ಹೆಚ್ಚಾಯಿತು. 'ಉಜ್ವಲಾ' ಯೋಜನೆಯಿಂದ 10 ಕೋಟಿ ಮಹಿಳೆಯರಿಗೆ ಉಚಿತ ಗ್ಯಾಸ್ ಸೌಲಭ್ಯ ನೀಡಲಾಯಿತು. 'ಮುದ್ರಾ' ಯೋಜನೆಯಲ್ಲಿ 70 ಶೇಕಡಾ ಋಣಗಳು ಮಹಿಳೆ ಯರಿಗೆ ತಲುಪಿದವು. 'ಸುಷಾಸನ್' ಯೋಜನೆಯ ಮೂಲಕ 6 ಕೋಟಿ ಮಹಿಳೆಯರಿಗೆ ಜನ್ ಧನ್ ಖಾತೆ ಜಾರಿಗೊಳಿಸಲಾಯಿತು. 'ಪಿಂಕ್ ರೆವಲ್ಯೂಷನ್' ಮೂಲಕ ಕಿಸಾನ್ ಸಮ್ಮಾನ್ ನಿಧಿಯಲ್ಲಿ ಮಹಿಳಾ ರೈತ ಯರಿಗೆ ಆದ್ಯತೆ. ಇವೆಲ್ಲವೂ ಮಹಿಳಾ ಸಬಲೀಕರಣದ ದೀರ್ಘಕಾಲದ ಚಿಂತನೆಯನ್ನು ತೋರಿಸುತ್ತವೆ. ಪ್ರಧಾನಿ ಮೋದಿ 'ಮಹಿಳೆಯರು ದೇಶದ ಶಕ್ತಿ' ಎಂದು ಘೋಷಿಸಿ, ಈ ಮಸೂದೆಯನ್ನು 'ನಾರಿ ಶಕ್ತಿ' ಎಂದು ಕರೆದರು.

ಹೊಸ ಭಾರತದ ರೂಪುರೇಷೆ

ಇದು ಕೇವಲ ಮಹಿಳೆಯರ ಜಯವಲ್ಲ, ಇದು ದೃಢ ನಾಯಕತ್ವದ ಜಯ. ಸಮಾನತೆಯತ್ತ ಭಾರತ ಸಾಗುತ್ತಿರುವ ದಾರಿಯಲ್ಲಿ, ಈ ಮಸೂದೆ ಒಂದು ಮಹತ್ವದ ಮೈಲುಗಲ್ಲಾಗಿದ್ದು, ಮೋದಿ ಮಾದರಿಯ ಆಡಳಿತದ ಸ್ಪಷ್ಟ ಪ್ರತಿಬಿಂಬವಾಗಿದೆ. 40 ವರ್ಷಗಳಿಂದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಕಾಯುತ್ತಿದ್ದರು. ದೇಶದ ನೀತಿ ನಿರೂಪಣೆಯಲ್ಲಿ ಭಾಗವಹಿಸಲು ಕಾಯುತ್ತಿದ್ದರು. ಈಗ ಅವರಿಗೆಲ್ಲ ಅವಕಾಶ ಸಿಗುವ ಸಂದರ್ಭ ಬಂದಿದೆ. ಪ್ರಧಾನಿ ನರೇಂದ್ರ ಮೋದಿಜಿ ಅವರ ಸರ್ಕಾರ ಮೂರು ಮಸೂದೆ ಮಂಡಿಸುವ ಮೂಲಕ ಭಾರತದ ಅಭಿವೃದ್ಧಿಯ ಪಯಣದಲ್ಲಿ ಹೊಸ ಅಧ್ಯಾಯವನ್ನು ಬರೆಯುವಂತೆ ಮಾಡಿದ್ದಾರೆ. ಮಹಿಳಾ ಮೀಸಲು ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ವಿಶ್ವಾಸಾರ್ಹ ಪ್ರಾತಿನಿಧ್ಯ ಸಾಧ್ಯವಾಗಲಿದೆ. ಇಂತಹ ಮಹತ್ವದ ಕ್ರಮಕ್ಕೆ ಮುಂದಾದ ಪ್ರಧಾನಿಯವರನ್ನು ದೇಶದ ಎಲ್ಲ ಮಹಿಳೆಯರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಮಸೂದೆಯು ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುವಿಕೆಯನ್ನು ಆಮೂಲಾಗ್ರವಾಗಿ ಬದಲಿಸಲಿದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಮಸೂದೆ ಮಂಡನೆ ಮಾಡಿದಾಗ ಸಮಾಜವಾದಿ ಪಕ್ಷ, ಆರ್‌ಜೆಡಿಯ ಮುಖಂಡರು ತಡೆ ಒಡ್ಡಿದ್ದರು.

ಈಗಲೂ ವಿರೋಧಪಕ್ಷ ಹೊಸ ವಾದದೊಂದಿಗೆ ಮಸೂದೆಗೆ ತಡೆ ಮಾಡಲು, ವಿರೋಧ ಮಾಡಲು ಮುಂದೆ ಬಂದಿದೆ. ಮಹಿಳಾ ಮೀಸಲಾತಿ ಮಸೂದೆಗೆ ಕ್ಷೇತ್ರ ಮರುವಿಂಗಡಣೆ ನೆಪವನ್ನು ವಿರೋಧಪಕ್ಷಗಳು ಒಡ್ಡುತ್ತಿವೆ. ಕಳೆದ ಮೂರು ದಿನಗಳಿಂದ ವಿರೋಧಪಕ್ಷದ ನಾಯಕರು ಈ ಮಸೂದೆ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಈ ಮಹಿಳಾ ಮೀಸಲು ಮಸೂದೆಯನ್ನು ವಿರೋಧಿಸಿದರೆ ವಿರೋಧ ಪಕ್ಷಗಳನ್ನು ಜನ ಎಂದೂ ಕ್ಷಮಿಸುವುದಿಲ್ಲ.

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ

• **ವಾಷಿಂಗ್ಟನ್:** ಇರಾನ್ ಜತೆಗಿನ ಎರಡು ವಾರಗಳ ಕದನ ವಿರಾಮವು ಏ.22ಕ್ಕೆ ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಅಮೆರಿಕ ಮಧ್ಯಪ್ರಾಚ್ಯಕ್ಕೆ 10,000ಕ್ಕೂ ಹೆಚ್ಚು ಹೆಚ್ಚುವರಿ ಸೈನಿಕರನ್ನು ನಿಯೋಜಿಸುತ್ತಿದೆ. ಯುಎಸ್‌ಎಸ್ ಜಾರ್ಜ್ ಎಚ್.ಡಬ್ಲ್ಯು. ಬುಷ್ ನೌಕೆಯಲ್ಲಿರುವ ಸುಮಾರು 6,000 ಸೈನಿಕರು ಮತ್ತು ಬಾಕ್ಸರ್ ಆಂಫಿಬಿಯಸ್ ರೆಡಿ ಗ್ರೂಪ್‌ನ 4,200 ನೌಕಾಪಡೆ ಮತ್ತು ಮರೀನ್ ಸಿಬ್ಬಂದಿ ಈ ತಿಂಗಳ ಅಂತ್ಯದ ವೇಳೆಗೆ ಈ ಪ್ರದೇಶವನ್ನು ತಲುಪಲಿದ್ದಾರೆ. ಇವರು ಇರಾನ್ ವಿರುದ್ಧದ ಕಾರ್ಯಾಚರಣೆಯಲ್ಲಿ ತೊಡಗಿರುವ 50,000 ಹಾಲಿ ಸಿಬ್ಬಂದಿಯನ್ನು ಸೇರಿಕೊಳ್ಳಲಿದ್ದಾರೆ.

ನೌಕಾ ದಿಗ್ಬಂಧನ ಮುಂದುವರಿಕೆ: ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆ ವಿಫಲವಾದ ನಂತರ ಭಾನುವಾರ ಅಮೆರಿಕ ಇರಾನ್ ಬಂದರುಗಳ ಮೇಲೆ ಹೇರಿದ್ದ ನೌಕಾ ದಿಗ್ಬಂಧನ ಮುಂದುವರಿದಿದೆ. ದಿಗ್ಬಂಧನ ಜಾರಿಯಾದ 36 ಗಂಟೆಗಳ ಒಳಗೆ ಇರಾನ್‌ನ ಸಮುದ್ರ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ.

ಇರಾನ್ ಸೇನೆಯ ಪ್ರತಿಕ್ರಿಯೆ: ಅಮೆರಿಕದ ಈ ದಿಗ್ಬಂಧನ, ವಾಣಿಜ್ಯ ಮತ್ತು ತೈಲ ಹಡಗುಗಳಿಗೆ ಅಭದ್ರತೆಯನ್ನು ಉಂಟುಮಾಡುತ್ತಿದೆ, ಎಂದು ಇರಾನ್ ಸೇನೆಯ ಕೇಂದ್ರ ಕಮಾಂಡ್ ಸೆಂಟರ್ ತಿಳಿಸಿದೆ. ದಿಗ್ಬಂಧನ ಮುಂದುವರಿದರೆ ಪರ್ಷಿಯನ್ ಕೊಲ್ಲಿ, ಓಮನ್ ಸಮುದ್ರ ಅಥವಾ ಕೆಂಪು ಸಮುದ್ರದಲ್ಲಿ ಯಾವುದೇ ರಫ್ತು ಅಥವಾ ಆಮದಿಗೆ ಅವಕಾಶ ನೀಡುವುದಿಲ್ಲ, ಎಂದು ಕಮಾಂಡ್ ಮುಖ್ಯಸ್ಥ ಅಲಿ ಅಬ್ದೊಲ್ಲಾಹಿ ಎಚ್ಚರಿಸಿದ್ದಾರೆ.

ಈ ಸಂಘರ್ಷ ಶೀಘ್ರದಲ್ಲೇ ಕೊನೆಗೊಳ್ಳಲಿದ್ದು, ಇದರಿಂದ ಅನಿಲ ಬೆಲೆಗಳು ಗಣನೀಯವಾಗಿ ಇಳಿಕೆಯಾಗಲಿವೆ, ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಆರ್ಥಿಕತೆಯ ಶೇ.90ರಷ್ಟು ಭಾಗ ಸಮುದ್ರ ವ್ಯಾಪಾರದ ಮೇಲೆ ಅವಲಂಬಿತವಾಗಿದೆ.

ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ

ಟೆಲ್ ಅವೀವ್: ದಕ್ಷಿಣ ಲೆಬನಾನ್‌ನಿಂದ ಇಸ್ರೇಲ್‌ನತ್ತ ಹಿಜ್ಬೊಲ್ಲಾ ಭಯೋತ್ಪಾದಕರು ಕಳುಹಿಸಿದ ಡ್ರೋನ್ ಅನ್ನು ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ತಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಇಸ್ರೇಲ್ ಸೇನೆ (ಐಡಿಎಫ್) ಗುರುವಾರ ಹೇಳಿದೆ. ಹಿಜ್ಬೊಲ್ಲಾ ಡ್ರೋನ್ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಅನ್ನು ಐಡಿಎಫ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ. ಹಿಜ್ಬೊಲ್ಲಾ ಉಗ್ರ ಸಂಘಟನೆಯ ವಿರುದ್ಧ ಇಸ್ರೇಲ್ ಆಪರೇಷನ್ ರೋರಿಂಗ್ ಲಯನ್ ಆರಂಭಿಸಿದ ಬಳಿಕ ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ಇಂತಹ 40ಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ನಡೆಸಿದೆ. ದಕ್ಷಿಣ ಲೆಬನಾನ್‌ನ ಅರಣ್ಯ ಪ್ರದೇಶಗಳಲ್ಲಿ ತಲೆಮರೆಸಿಕೊಂಡಿದ್ದ ಹಿಜ್ಬೊಲ್ಲಾ ಉಗ್ರರನ್ನು ಇಸ್ರೇಲ್ ಸೇನೆ ವೈಮಾನಿಕ ದಾಳಿಯಲ್ಲಿ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಸಹ ಐಡಿಎಫ್ ಗುರುವಾರ ಬಿಡುಗಡೆಗೊಳಿಸಿದೆ. ಹಿಜ್ಬೊಲ್ಲಾ ಭೂಗತ ಶಸ್ತ್ರಾಸ್ತ್ರಾಗಾರ ವಶ: ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಉಗ್ರರನ್ನು ಸದೆಬಡಿದ ಇಸ್ರೇಲ್ ಸೇನೆಯ 769ನೇ ಬ್ರಿಗೇಡ್, ಹಿಜ್ಬೊಲ್ಲಾಗೆ ಸೇರಿದ ಭೂಗತ ಶಸ್ತ್ರಾಸ್ತ್ರಾಗಾರವನ್ನು ವಶಪಡಿಸಿಕೊಂಡಿದೆ. ಇವುಗಳಲ್ಲಿ ಕಲಾಶ್‌ನಿಕೋವ್ ರೈಫಲ್‌ಗಳು, ಟ್ಯಾಂಕ್ ನಿರೋಧಕ ಕ್ಷಿಪಣಿಗಳು, ಕ್ಷಿಪಣಿ-ಚಾಲಿತ ಗ್ರೆನೇಡ್ (ಆರ್‌ಪಿಜಿ) ಲಾಂಚರ್‌ಗಳು ಮತ್ತು ಮದ್ದುಗುಂಡುಗಳಿದ್ದವು ಎಂದು ಐಡಿಎಫ್ ತಿಳಿಸಿದೆ.

ಇರಾನ್ ಮೇಲೆ ಆರ್ಥಿಕ ಮತ್ತು ಸೈನಿಕ ಒತ್ತಡ

ಅಮೆರಿಕ ನೌಕಾಪಡೆಯು ಇರಾನ್ ಬಂದರುಗಳ ಮೇಲೆ ನಾಕಾಬಂದಿಯನ್ನು ಮುಂದುವರಿಸಿದ್ದು, ಹೊಸ ಆರ್ಥಿಕ ನಿರ್ಬಂಧಗಳನ್ನು ಜಾರಿಗೊಳಿಸುವುದಾಗಿ ಅಮೆರಿಕ ಖಜಾನೆ ಕಾರ್ಯದರ್ಶಿ ಹೇಳಿದ್ದಾರೆ. ಇರಾನ್ ಜತೆ ವ್ಯಾಪಾರ ನಡೆಸುವ ದೇಶಗಳ ಮೇಲೂ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಕ್ರಮವನ್ನು ಹಣಕಾಸು ದಾಳಿಗೆ ಸಮಾನ ಎಂದು ವಿವರಿಸಲಾಗಿದೆ.

ಮೋದಿ-ಮ್ಯಾಕ್ರೊನ್ ಮಾತುಕತೆ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು. ಈ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನ ಸುರಕ್ಷತೆ ಹಾಗೂ ಸ್ವಾತಂತ್ರ್ಯವನ್ನು ತಕ್ಷಣ ಪುನಃಸ್ಥಾಪಿಸುವ ಅಗತ್ಯವಿದೆ ಎಂದು ಇಬ್ಬರು ನಾಯಕರು ಒತ್ತಿ ಹೇಳಿದರು. ಮ್ಯಾಕ್ರೊನ್ ಕರೆ ಮೂಲಕ ಮಾತುಕತೆ ಆರಂಭವಾಗಿದ್ದು, ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಲು ಪರಸ್ಪರ ಸಹಕಾರ ಮುಂದುವರಿಸುವುದಾಗಿ ಮೋದಿ ತಿಳಿಸಿದ್ದಾರೆ. ಫೆ.28ರಿಂದ ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಇದೀಗ ಸುಮಾರು 50 ದಿನಗಳು ಕಳೆದಿವೆ. ಅಮೆರಿಕಾ-ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ಪ್ರತಿಕ್ರಿಯೆ ನೀಡಿದ ಬಳಿಕ ಉದ್ವಿಗ್ನತೆ ಹೆಚ್ಚಾಗಿದೆ. ಈ ನಡುವೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನಕ್ಕೆ ಅಡಚಣೆ ಉಂಟಾಗಿರುವುದು ಜಾಗತಿಕ ತೈಲವಾಯು ಸರಬರಾಜಿನ ಮೇಲೆ ಪರಿಣಾಮ ಬೀರಿದೆ. ಭಾರತವು ಸಂವಾದ ಮತ್ತು ರಾಜತಾಂತ್ರಿಕ ಪರಿಹಾರವೇ ಸಮಸ್ಯೆಗೆ ಮಾರ್ಗವೆಂದು ಪುನರುಚ್ಚರಿಸಿದೆ.

2ನೇ ಸುತ್ತಿನ ಚರ್ಚೆ | ಟೆಹ್ರಾನ್‌ನಲ್ಲಿ ಪಾಕ್ ಸೇನಾ ಮುಖ್ಯಸ್ಥ

ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ

• **ದುಬೈ:** ಮಧ್ಯಪ್ರಾಚ್ಯದಲ್ಲಿ ಮುಂದುವರಿದಿರುವ ಉದ್ವಿಗ್ನತೆ ಕಡಿಮೆ ಮಾಡಲು ಮತ್ತು ಅಮೆರಿಕ-ಇರಾನ್ ನಡುವೆ ಮತ್ತೊಮ್ಮೆ ಮಾತುಕತೆ ನಡೆಸುವ ದಾರಿಯನ್ನು ಸುಗಮಗೊಳಿಸಲು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಗುರುವಾರ ಟೆಹ್ರಾನ್‌ನಲ್ಲಿ ಇರಾನಿನ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ. ಸುಮಾರು ಏಳು ವಾರಗಳಿಂದ ನಡೆಯುತ್ತಿರುವ ಯುದ್ಧದ ನಂತರ ಈ ಸಭೆ ಮಹತ್ವ ಪಡೆದುಕೊಂಡಿದೆ. ಪಾಕಿಸ್ತಾನವು ಮಧ್ಯವರ್ತಿಯಾಗಿ ಪಾತ್ರವಹಿಸುತ್ತಿದ್ದು, ಇಸ್ಲಾಮಾಬಾದ್‌ನಲ್ಲಿ ಹಿಂದಿನ ನೇರ ಮಾತುಕತೆಗಳಿಗೆ ಆತಿಥ್ಯ ವಹಿಸಿತ್ತು.

ಇಸ್ಲಾಮಾಬಾದ್‌ನಲ್ಲಿ ಮಾತುಕತೆ ಸಾಧ್ಯತೆ: ವೈಟ್ ಹೌಸ್ ಮಾಹಿತಿ ಪ್ರಕಾರ, ಮುಂದಿನ ಮಾತುಕತೆಗಳು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ ಅಂತಿಮ ನಿರ್ಧಾರ ಇನ್ನೂ ಕೈಗೊಳ್ಳಲಾಗಿಲ್ಲ.

ಪಾಕಿಸ್ತಾನದ ರಾಜತಾಂತ್ರಿಕ ಚಟುವಟಿಕೆ: ಪಾಕಿಸ್ತಾನದ ಸೇನಾ ಮುಖ್ಯಸ್ಥರು ಇರಾನ್ ಸಂಸತ್ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ಇದೇ ವೇಳೆ ಪಾಕಿಸ್ತಾನದ ಪ್ರಧಾನಮಂತ್ರಿ ಕತಾರ್‌ಗೆ ಭೇಟಿ ನೀಡಿ ಶಾಂತಿ ಪ್ರಕ್ರಿಯೆ ಕುರಿತ ಚರ್ಚೆ ನಡೆಸುತ್ತಿದ್ದಾರೆ. ಅವರು ನಂತರ ಟರ್ಕಿಗೆ ಭೇಟಿ ನೀಡಲಿದ್ದಾರೆ.

ನಿಗದಿಯಾಗದ ಎರಡನೇ ಸುತ್ತಿನ ಮಾತುಕತೆ ದಿನಾಂಕ

• **ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಮಾತುಕತೆಗೆ ಯಾವುದೇ ದಿನಾಂಕಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ, ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿಯ ವಕ್ತಾರ ತಾಹಿರ್ ಅಂದ್ರಾಬಿ ಗುರುವಾರ ತಿಳಿಸಿದ್ದಾರೆ. ಮಾತುಕತೆಗಳು ಹೆಚ್ಚಿನ ವಿಶ್ವಾಸ ಮತ್ತು ಗೌಪ್ಯತೆಯೊಂದಿಗೆ ಮುಂದುವರಿಯುತ್ತಿವೆ, ಎಂದು ಅಂದ್ರಾಬಿ ತಿಳಿಸಿದ್ದಾರೆ. ನಿಯೋಗದ ರಚನೆ ಮತ್ತು ಸಮಯದ ವಿವರಗಳನ್ನು ನಿರ್ಧರಿಸುವುದು ಆಯಾ ದೇಶಗಳಿಗೆ ಬಿಟ್ಟ ವಿಚಾರ. ಈ ಚರ್ಚೆಗಳಲ್ಲಿ ಪರಮಾಣು ವಿಷಯವೂ ಸೇರಿದೆ. 21 ಗಂಟೆಗಳ ಕಾಲ ನಡೆದ ಇಸ್ಲಾಮಾಬಾದ್ ಮಾತುಕತೆಯ ನಂತರ, ಸಂದೇಶಗಳ ವಿನಿಮಯಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆ ವಹಿಸುವುದನ್ನು ಮುಂದುವರಿಸಿದೆ. ಪ್ರಧಾನಿ ಶೆಹಬಾಜ್ ಷರೀಫ್ ಪ್ರಸ್ತುತ ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿ ಪ್ರವಾಸದಲ್ಲಿದ್ದಾರೆ. ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ನೇತೃತ್ವದ ನಿಯೋಗ ಟೆಹ್ರಾನ್‌ಗೆ ಭೇಟಿ ನೀಡಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘೇರ್ ಘಾಲಿಬಾಫ್ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿದೆ. ಪ್ರಸ್ತುತ ಜಾರಿಯಲ್ಲಿರುವ ಎರಡು ವಾರಗಳ ಕದನ ವಿರಾಮವು ಏ.22ರಂದು ಮುಕ್ತಾಯಗೊಳ್ಳಲಿದೆ. ಕಳೆದ ವಾರಾಂತ್ಯದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಅಂತ್ಯಗೊಂಡಿದ್ದವು.

ನೌಕಾ ನಾಕಾಬಂದಿ

ನೌಕಾ ನಾಕಾಬಂದಿಯನ್ನು ಜಾರಿಗೊಳಿಸಲು 10,000 ಕ್ಕೂ ಹೆಚ್ಚು ಸೈನಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹಡಗುಗಳು ಬಂದರೆ ಮೊದಲಿಗೆ ಎಚ್ಚರಿಕೆ ನೀಡಲಾಗುತ್ತದೆ. ಇದುವರೆಗೆ ಯಾವುದೇ ಹಡಗನ್ನು ಬಲವಂತವಾಗಿ ತಡೆಯದಿಲ್ಲ, 13 ಹಡಗುಗಳು ಹಿಂದಿರುಗಿವೆ ಎಂದು ಅಮೆರಿಕ ಹೇಳಿದೆ. ರಕ್ಷಣಾ ಕಾರ್ಯದರ್ಶಿಯ ಪ್ರಕಾರ, ಅಮೆರಿಕ ತನ್ನ ಒಟ್ಟು ನೌಕಾ ಶಕ್ತಿಯ 10% ಕ್ಕಿಂತ ಕಡಿಮೆ ಭಾಗವನ್ನು ಮಾತ್ರ ಬಳಸುತ್ತಿದೆ. ಮಧ್ಯಪ್ರಾಚ್ಯದಲ್ಲಿ 16 ಯುದ್ಧನೌಕೆಗಳು ನಿಯೋಜಿಸಲ್ಪಟ್ಟಿವೆ, ಇದರಲ್ಲಿ ಡಿಸ್ಟ್ರಾಯರ್‌ಗಳು, ಏರ್‌ಕ್ರಾಫ್ಟ್ ಕ್ಯಾರಿಯರ್ ಹಾಗೂ ಇತರ ನೌಕೆಗಳು ಸೇರಿವೆ.

ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕದನ ವಿರಾಮ: ಟ್ರಂಪ್

• **ವಾಷಿಂಗ್ಟನ್:** ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕಾಲ ತಾತ್ಕಾಲಿಕ ಕದನ ವಿರಾಮವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ರಾತ್ರಿ ಘೋಷಿಸಿದ್ದಾರೆ. ಟ್ರಂಪ್ ಹೇಳಿಕೆಯ ಪ್ರಕಾರ, ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಉತ್ತಮ ಮಾತುಕತೆ ನಡೆದಿದ್ದು, ಶಾಂತಿ ಪುನಃಸ್ಥಾಪಿಸಲು ಉಭಯ ರಾಷ್ಟ್ರಗಳು 10 ದಿನಗಳ ಅಧಿಕೃತ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿವೆ. ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಮತ್ತು ಇಸ್ರೇಲ್ ಪ್ರಧಾನಿ ಬಿಬಿ ನೆತನ್ಯಾಹು ಅವರೊಂದಿಗೆ ನಾನು ಉತ್ತಮ ಮಾತುಕತೆ ನಡೆಸಿದ್ದೇನೆ. ಈ ಇಬ್ಬರು ನಾಯಕರೂ ತಮ್ಮ ದೇಶಗಳ ನಡುವೆ ಶಾಂತಿ ನೆಲೆಗೊಳಿಸಲು ಗುರುವಾರದಿಂದ 10 ದಿನಗಳವರೆಗೆ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ. 34 ವರ್ಷಗಳ ನಂತರ ಈ ಎರಡು ದೇಶಗಳು ವಾಷಿಂಗ್ಟನ್‌ನಲ್ಲಿ ಮೊದಲ ಬಾರಿಗೆ ನೇರ ಮಾತುಕತೆ ನಡೆಸಿವೆ. ನಮ್ಮ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಉಪಸ್ಥಿತಿಯಲ್ಲಿ ಈ ಮಾತುಕತೆ ನಡೆದಿದೆ. ವಿಶ್ವದಲ್ಲಿನ 9 ಯುದ್ಧಗಳನ್ನು ನಿಲ್ಲಿಸಿದ ಗೌರವ ನನಗೆ ಸಿಕ್ಕಿದೆ, ಇದು ನನ್ನ 10ನೇ ಸಾಧನೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ಇರಾನ್, ರಷ್ಯಾ ತೈಲ ಖರೀದಿಗೆ ಅಮೆರಿಕ ವಿನಾಯಿತಿ ವಿಸ್ತರಿಸಲ್ಲ

• **ವಾಷಿಂಗ್ಟನ್:** ಇರಾನ್ ಮತ್ತು ರಷ್ಯಾದಿಂದ ತೈಲ ಖರೀದಿಸಲು ನೀಡಿದ್ದ ತಾತ್ಕಾಲಿಕ ವಿನಾಯಿತಿಯನ್ನು ಯಾವುದೇ ಕಾರಣಕ್ಕೂ ಮುಂದುವರಿಸುವ ಯೋಜನೆಯಿಲ್ಲ ಎಂದು ಅಮೆರಿಕ ಟ್ರೆಷರಿ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬುಧವಾರ ಸ್ಪಷ್ಟವಾಗಿ ಹೇಳಿದ್ದಾರೆ. ಹಾರ್ಮುಜ್ ಜಲಸಂಧಿ ತೆರೆಯುವ ವಿಚಾರದಲ್ಲಿನ ಅನಿಶ್ಚಿತತೆ ಹಿನ್ನೆಲೆ ಕೇಂದ್ರ ಸರ್ಕಾರ ರಷ್ಯಾ ಕಚ್ಚಾ ತೈಲ ಖರೀದಿ ಮುಂದುವರಿಸಲಿದೆ. ರಷ್ಯಾ ಮತ್ತು ಇರಾನ್ ತೈಲ ಖರೀದಿಸಲು ನೀಡಿದ್ದ ವಿನಾಯಿತಿ ಪರವಾನಗಿಯನ್ನು ನಾವು ಮರುಪರಿಶೀಲಿಸುವುದಿಲ್ಲ ಅಥವಾ ವಿಸ್ತರಿಸುವುದಿಲ್ಲ, ಮಾ.11ರವರೆಗೆ ತೈಲ ಹಡಗುಗಳಲ್ಲಿ ಲೋಡ್ ಮಾಡಲಾಗಿದ್ದ ತೈಲಕ್ಕೆ ಮಾತ್ರ ಈ ವಿನಾಯಿತಿ ಅನ್ವಯಿಸಿತ್ತು. ಆ ತೈಲ ಪ್ರಮಾಣ ಈಗಾಗಲೇ ಬಳಕೆಯಾಗಿವೆ ಎಂದು ಬೆಸ್ಸೆಂಟ್ ಹೇಳಿದ್ದಾರೆ.

ಉದ್ವಿಗ್ನತೆಯಿಂದ ಎಲ್ಲಾ ರಾಷ್ಟ್ರಗಳಿಗೆ ಪರಿಣಾಮ ಬೀರಿದೆ: ಪ್ರಧಾನಿ ಮೋದಿ

• **ಹೊಸದಿಲ್ಲಿ:** ಜಗತ್ತಿನ ಇಂದಿನ ಉದ್ವಿಗ್ನ ಸನ್ನಿವೇಶ ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮ ಬೀರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ. ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆ ಬಗೆಹರಿಸಲಾಗದು, ಹಾಗಾಗಿ ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸಬೇಕೆಂಬ ಪ್ರಾಮಾಣಿಕ ಆಶಯವನ್ನು ಪ್ರಧಾನಿ ಮೋದಿ ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

ಜಂಟಿ ಶ್ರಮ ಸಂಕಲ್ಪ: ಆಸ್ಟ್ರಿಯಾದ ಫೆಡರಲ್ ಚಾನ್ಸೆಲರ್ ಕ್ರಿಶ್ಚಿಯನ್ ಸ್ಟಾಕರ್ ಜತೆ ವಿಸ್ತೃತ ಮಾತುಕತೆ ನಂತರದಲ್ಲಿ ಪ್ರಧಾನಿ ಮೋದಿ ಜಾಗತಿಕ ಸನ್ನಿವೇಶ ಕುರಿತು ಈ ತೆರ ಬೇಗುದಿ ವ್ಯಕ್ತಪಡಿಸಿದರು. ವ್ಯಾಪಾರ, ರಕ್ಷಣೆ ಮತ್ತು ಮೂಲಸೌಕರ್ಯ ರಂಗಗಳಲ್ಲಿ ಭಾರತ-ಆಸ್ಟ್ರಿಯಾ ನಡುವಣ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ವಿಚಾರವಾಗಿ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಚರ್ಚಿಸಿದ್ದಾರೆ. ಉಕ್ರೇನ್ ಮತ್ತು ಪ.ಏಷ್ಯಾ ಸಂಘರ್ಷಗಳು ಜಾಗತಿಕ ಆರ್ಥಿಕತೆ ಮೇಲೆ ಬೀರಲಿರುವ ಪರಿಣಾಮಗಳ ಬಗ್ಗೆ ಚರ್ಚಿಸಿ, ಇದನ್ನೆದುರಿಸಲು ಜಂಟಿಯಾಗಿ ಶ್ರಮಿಸುವ ಸಂಕಲ್ಪವನ್ನು ಉಭಯ ನಾಯಕರು ತೊಟ್ಟಿದ್ದಾರೆ. ಆಸ್ಟ್ರಿಯನ್ ಚಾನ್ಸೆಲರ್ ಸ್ಟಾಕರ್ ತಮ್ಮ ನಾಲ್ಕು ದಿನಗಳ ಪ್ರವಾಸದ ನಿಮಿತ್ತ ಭಾರತಕ್ಕೆ ಬಂದಿಳಿದಿದ್ದಾರೆ. ಯುರೋಪ್ ಹೊರಗಡೆ ಸ್ಟಾಕರ್ ಅವರ ಪ್ರಥಮ ಅಧಿಕೃತ ಪ್ರವಾಸ ಇದಾಗಿದೆ.

ಭಯೋತ್ಪಾದನೆ ನಿರ್ಮೂಲನೆ: ಇಡೀ ಜಗತ್ತಿಂದು ತೀರಾ ಗಂಭೀರ ಮತ್ತು ಉದ್ವಿಗ್ನ ಸನ್ನಿವೇಶದಲ್ಲಿದೆ. ಇದರ ಪರಿಣಾಮ ನಮ್ಮೆಲ್ಲರ ಮೇಲಾಗುತ್ತಿದೆ. ಇಂತಹ ಉದ್ವಿಗ್ನ ಜಾಗತಿಕ ಸನ್ನಿವೇಶದಲ್ಲಿ, ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆಗಳು ಬಗೆಹರಿಯವು. ಉಕ್ರೇನ್‌ನಲ್ಲಾಗಲಿ, ಪ.ಏಷ್ಯಾದಲ್ಲಾಗಲಿ ಸ್ಥಿರ, ಸಹ್ಯ ಮತ್ತು ಶಾಶ್ವತವಾದ ಶಾಂತಿಯನ್ನು ನಾವು ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೆಳೆಯುತ್ತಿರುವ ಜಾಗತಿಕ ಸವಾಲುಗಳ ಎದುರಿಸಲು ಜಾಗತಿಕ ಸಂಸ್ಥೆಗಳ ಪುನಾರಚನೆ ಅತ್ಯವಶ್ಯವೆಂದು ನಾವು ಒಪ್ಪುತ್ತೇವೆ. ಭಯೋತ್ಪಾದನೆ ನಿರ್ಮೂಲನೆ ವಿಚಾರದಲ್ಲೂ ನಾವು ಸಮಾನ ಬದ್ಧತೆ ಹೊಂದಿದ್ದೇವೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ. ಸ್ಟಾಕರ್ ಭೇಟಿ ತೀರಾ ಮಹತ್ವಪೂರ್ಣವೆಂದಿರುವ ಪ್ರಧಾನಿ ಮೋದಿ, ಭಾರತದ ರೈಲ್ವೆ, ಪರಿಶುದ್ಧ ಇಂಧನ ಉಪಕ್ರಮಗಳ ಸಹಿತ ದೇಶದ ಹಲವಾರು ಇಂಜಿನಿಯರಿಂಗ್ ಪ್ರಾಜೆಕ್ಟ್‌ಗಳಲ್ಲಿ ಆಸ್ಟ್ರಿಯನ್ ಕಂಪೆನಿಗಳು ತೊಡಗಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ.

ಆರು ಒಪ್ಪಂದಗಳಿಗೆ ಸಹಿ: ಭಾರತ ಮತ್ತು ಆಸ್ಟ್ರಿಯಾ ಆರ್ಥಿಕತೆಗಳಲ್ಲಿ ಹೂಡಿಕೆ ಹೂಡಬಯಸುವ ಕಂಪೆನಿಗಳಿಗೆ ನೆರವಾಗಲು ಫಾಸ್ಟ್‌ಟ್ರ್ಯಾಕ್ ವ್ಯವಸ್ಥೆ ಸ್ಥಾಪನೆ, ಮಿಲಿಟರಿ ರಂಗದಲ್ಲಿ ಸಹಕಾರ ಸಹಿತ ಆರು ಒಪ್ಪಂದಗಳಿಗೆ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಸಹಿ ಹಾಕಿದರು. ಜನವರಿಯಲ್ಲಿ ಸಹಿ ಹಾಕಿರುವ ಭಾರತ-ಇಯು ರಕ್ಷಣಾ ಮತ್ತು ಭದ್ರತಾ ಪಾಲುದಾರಿಕೆ ಒಡಂಬಡಿಕೆ ಆಧಾರದಲ್ಲಿ ಪರಸ್ಪರ ಸಹಕಾರ ವರ್ಧನೆಗೆ , ಮಿಲಿಟರಿ ಸಹಕಾರ ಕುರಿತ ಉದ್ದೇಶಪತ್ರವು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಿದೆ.

ಕಿರುಸುದ್ದಿ

ಮಕ್ಕಳ ಆನ್ಲೈನ್ ಭದ್ರತೆ ಜಾಲತಾಣಗಳ ಹೊಣೆ

• **ಲಂಡನ್:** ಸಾಮಾಜಿಕ ಜಾಲತಾಣ ಸಂಸ್ಥೆಗಳು ಮಕ್ಕಳ ಆನ್‌ಲೈನ್ ಭದ್ರತೆಯ ಹೊಣೆ ಹೊರಬೇಕೆಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಕಠಿಣ ಸಂದೇಶ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳು ಮಕ್ಕಳಿಗೆ ತಮ್ಮನ್ನು ಹೇಗೆ ಕಾಣುತ್ತಾರೆ, ಅವರ ಸ್ನೇಹಿತ ವರ್ಗ ಮತ್ತು ಅವರ ಸುತ್ತಲಿನ ಜಗತ್ತನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ ಎಂಬುದನ್ನು ರೂಪಿಸುತ್ತವೆ. ಇದರಲ್ಲಿ ನಿಜವಾದ ಅಪಾಯಗಳಿದ್ದಾಗ, ಅದನ್ನು ನಿರ್ಲಕ್ಷಿಸುವುದು ಆಯ್ಕೆಯೇ ಅಲ್ಲ ಎಂದು ಸ್ಟಾರ್ಮರ್ ಹೇಳಿದರು.

ಲಖನೌ ಅಗ್ನಿ ಅವಗಢದಲ್ಲಿ ಬಾಲಕಿ, 2 ತಿಂಗಳ ಶಿಶು ಬಲಿ

• **ಲಖನೌ:** ನಗರದ ವಿಕಾಸ್ ನಗರ ಪ್ರದೇಶದ ಸೆಕ್ಟರ್ 11ರಲ್ಲಿ ನಿರ್ಮಿಸಲಾದ ತಾತ್ಕಾಲಿಕ ಗುಡಿಸಲು ವಸತಿಗಳಲ್ಲಿ ಭಾರೀ ಅಗ್ನಿ ಅವಘಡದಲ್ಲಿ ಒಬ್ಬ ಬಾಲಕಿ ಮತ್ತು ಆಕೆಯ 2 ತಿಂಗಳ ಸಹೋದರಿ ಮೃತಪಟ್ಟ ಹೃದಯ ವಿದ್ರಾವಕ ಘಟನೆ ಸಂಭವಿಸಿದೆ. ಅಗ್ನಿ ದುರಂತದಲ್ಲಿ ಸುಮಾರು 280ಕ್ಕೂ ಹೆಚ್ಚು ಗುಡಿಸಲುಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ಸಾವಿರಕ್ಕೂ ಹೆಚ್ಚು ಮಂದಿ ದುರಂತದಿಂದ ನಿರಾಶ್ರಿತರಾಗಿದ್ದಾರೆ.

ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ

• **ಹೊಸದಿಲ್ಲಿ:** ದೇಶದಲ್ಲಿ ಏಕಸಮಾನ ನಾಗರಿಕ ಸಂಹಿತೆ (ಏಸಾಸಂ) ಜಾರಿಯು 'ಸಂವಿಧಾನಿಕ ಗುರಿ' ಎಂದು ಅಭಿಪ್ರಾಯಪಟ್ಟ ಸುಪ್ರೀಂಕೋರ್ಟ್, ಮುಸ್ಲಿಂ ವೈಯಕ್ತಿಕ ಕಾನೂನಿನ ಕೆಲವು ವಿಧಿಗಳು ಮಹಿಳೆಯರ ವಿರುದ್ಧ ಭೇದಭಾವ ನಡೆಸುತ್ತಿವೆ ಎಂಬ ಆರೋಪದಡಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೊಳಪಡಿಸಲು ಗುರುವಾರ ಒಪ್ಪಿಗೆ ನೀಡಿದೆ. ಮುಖ್ಯ ನ್ಯಾ.ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೋಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಒಳಗೊಂಡ ಪೀಠ, ಅಲ್ಪಸಂಖ್ಯಾತ ವ್ಯವಹಾರಗಳ ಕೇಂದ್ರ ಸಚಿವಾಲಯದಿಂದ ಪ್ರತಿಕ್ರಿಯೆ ಕೇಳಿದೆ. ಈ ಅರ್ಜಿಯನ್ನು ಪೌಲೋಮಿ ಪವಿನಿ ಶುಕ್ಲಾ ಮತ್ತು ನ್ಯಾಯಕಾರಿ ಮಹಿಳಾ ಪ್ರತಿಷ್ಠಾನ ಸಲ್ಲಿಸಿವೆ. ಅರ್ಜಿದಾರರ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, 1937ರ ಶರಿಯತ್ ಅನ್ವಯ ಕಾನೂನಿನ ಕೆಲವು ವಿಧಿಗಳು ಮಹಿಳೆಯರಿಗೆ ಆಸ್ತಿ ಹಕ್ಕುಗಳಲ್ಲಿ ಸಮಾನತೆ ನೀಡುವುದಿಲ್ಲ ಎಂದು ಹೇಳಿದರು. ಮಹಿಳೆಯರಿಗೆ ಪುರುಷರಿಗಿಂತ ಅರ್ಧ ಅಥವಾ ಅದಕ್ಕಿಂತ ಕಡಿಮೆ ಪಾಲು ನೀಡುವುದು ಸ್ಪಷ್ಟವಾದ ಭೇದಭಾವ ಎಂದೂ ಅವರು ವಾದಿಸಿದರು. ಇದಲ್ಲದೆ, ವಾರಸತ್ವದ ವಿಷಯಗಳು ನಾಗರಿಕ ಸ್ವಭಾವದವಾಗಿದ್ದು, ಅವು ಧರ್ಮದ 'ಅತ್ಯಾವಶ್ಯಕ ಆಚರಣೆ'ಗಳಾಗುವುದಿಲ್ಲ ಎಂದು ಅವರು ತಿಳಿಸಿದರು. ಆದ್ದರಿಂದ, ಇವುಗಳಿಗೆ ಸಂವಿಧಾನದ ಕಲಂ 25 ಅಡಿಯಲ್ಲಿ ರಕ್ಷಣೆಯಿಲ್ಲ ಎಂದು ಹೇಳಿದರು. ಆದರೆ ನ್ಯಾಯಾಲಯವು ಈ ವಿಚಾರದಲ್ಲಿ ನ್ಯಾಯಾಂಗ ಅತಿಕ್ರಮಣದ ಬಗ್ಗೆ ಎಚ್ಚರಿಕೆ ವ್ಯಕ್ತಪಡಿಸಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಮಂದಿ ಸಾವು

• **ಕೀವ್:** ಉಕ್ರೇನ್‌ನ ನಾಗರಿಕ ಪ್ರದೇಶಗಳ ಮೇಲೆ ರಷ್ಯಾ ಹಲವು ಗಂಟೆಗಳ ಕಾಲ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 16 ಮಂದಿ ಬಲಿಯಾಗಿದ್ದಾರೆ. 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ದಾಳಿಗೆ ಭಯಭೀತರಾದ ಉಕ್ರೇನಿಯನ್ನರು ತಮ್ಮ ಮನೆಗಳಲ್ಲೇ ಅಡಗಿಕೊಂಡಿದ್ದರೆಂದು ವರದಿಯಾಗಿದೆ. ಸುಮಾರು 700 ಡ್ರೋನ್‌ಗಳು ಮತ್ತು ಡಜನ್‌ಗಟ್ಟಲೆ ಖಂಡಾಂತರ ಹಾಗೂ ಕ್ರೂಸ್ ಕ್ಷಿಪಣಿಗಳನ್ನು ರಷ್ಯಾ ಉಡಾಯಿಸಿದ್ದು, ಮುಖ್ಯವಾಗಿ ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ಕಳೆದ ಎರಡು ವಾರಗಳಲ್ಲಿ ನಡೆದ ಅತಿ ದೊಡ್ಡ ವಾಯು ದಾಳಿ ಎನ್ನಲಾಗಿದೆ. ನಾಲ್ಕು ವರ್ಷಗಳ ಹಿಂದಿನಿಂದ ಉಕ್ರೇನ್ ಮೇಲೆ ದಂಡೆತ್ತಿ ಆಕ್ರಮಣಕಾರಿ ದಾಳಿ ಆರಂಭಿಸಿದಾಗಿನಿಂದಲೂ ರಷ್ಯಾ ನಾಗರಿಕ ಪ್ರದೇಶಗಳ ಮೇಲೆ ನಿರಂತರ ದಾಳಿ ನಡೆಸುತ್ತಲೇ ಬಂದಿದೆ ಎಂದು ಉಕ್ರೇನ್ ಅಧಿಕಾರಿಗಳು ಆರೋಪಿಸಿದ್ದಾರೆ. ವಿಶ್ವಸಂಸ್ಥೆಯ ಪ್ರಕಾರ, ಈ ದಾಳಿಗಳಲ್ಲಿ ಈಗಾಗಲೇ 15,000ಕ್ಕೂ ಹೆಚ್ಚು ಉಕ್ರೇನ್ ನಾಗರಿಕರು ಮೃತಪಟ್ಟಿದ್ದಾರೆ.

ದೇಶದ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಜರ್ಮನಿ, ನಾರ್ವೆ ಮತ್ತು ಇಟಲಿಗೆ 48 ಗಂಟೆಗಳ ಪ್ರವಾಸ ಕೈಗೊಂಡ ಸಮಯದಲ್ಲೇ ರಷ್ಯಾ ದಾಳಿ ನಡೆಸಿದೆ.

ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ ವಚನ

• **ಹೊಸದಿಲ್ಲಿ:** ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ರಾಮನಾಥ್ ಠಾಕೂರ್, ಹಿರಿಯ ಕಾಂಗ್ರೆಸ್ ನಾಯಕ ಅಭಿಷೇಕ್ ಸಿಂಘ್ವಿ ಹಾಗೂ ಇತರ 13 ಸಂಸದರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭೆಯ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ರಾಜ್ಯಸಭೆಯ 16 ಹೊಸ ಅಥವಾ ಮರು ಚುನಾಯಿತ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಹೊಸ ಸದಸ್ಯರು ಬಿಹಾರ, ಅಸ್ಸಾಂ, ಹರ್ಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಒಡಿಶ ಮತ್ತು ತೆಲಂಗಾಣಗಳನ್ನು ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿಯ 8 ಸಂಸದರು, ಬಿಜೆಪಿ ಮಿತ್ರಪಕ್ಷಗಳ ಮೂವರು ಸಂಸದರು ಮತ್ತು ಕಾಂಗ್ರೆಸ್‌ನ 5 ಸಂಸದರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬಿಹಾರ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ನವೀನ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇವರು ಪ್ರಚಂಡ ಕರತಾಡನ ಮಧ್ಯೆ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭೆಗೆ ಬಿಹಾರದಿಂದ ಪುನರಾಯ್ಕೆಯಾಗಿರುವ ಕೇಂದ್ರ ಸಚಿವ ರಾಮ್‌ನಾಥ್ ಠಾಕೂರ್ ಕೂಡ ನವೀನ್ ಜತೆ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣವಚನ ಸ್ವೀಕರಿಸಿದ ಉಪೇಂದ್ರ ಕುಶ್ವಾಹಾ (ಆರ್‌ಎಲ್‌ಎಂ), ಶಿವೇಶ್ ಕುಮಾರ್(ಬಿಜೆಪಿ) ಕೂಡ ಬಿಹಾರವನ್ನು ಪ್ರತಿನಿಧಿಸುವವರು. ತೆರಾಶ್ ಗೋವಲ್ಲಾ (ಬಿಜೆಪಿ) ಜೋಗನ್ ಮೋಹನ್ (ಬಿಜೆಪಿ), ಪ್ರಮೋದ್ ಬೋರೋ(ಯುಪಿಪಿ-ಎಲ್) ಅಸ್ಸಾಂ ಅನ್ನು ಪ್ರತಿನಿಧಿಸುತ್ತಿರುವ ರಾಜ್ಯಸಭಾ ಸಂಸದರು.

ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ

• **ಚೆನ್ನೈ:** 60 ವರ್ಷದೊಳಗಿನ ಮಹಿಳೆಯರಿಗೆ ತಿಂಗಳಿಗೆ ರೂ.2500 ಆರ್ಥಿಕ ನೆರವು, ಮದುವೆಗೆ 8 ಗ್ರಾಂ. ಚಿನ್ನದ ಉಡುಗೊರೆ ಸಹಿತ ಮಹಿಳಾ ಕಲ್ಯಾಣಕ್ಕೆ ತುಂಬು ಆದ್ಯತೆಯಿರುವಂತಹ ಚುನಾವಣಾ ಪ್ರಣಾಳಿಕೆಯನ್ನು ತಮಿಳಗ ವೆಟ್ರಿ ಕಳಗಂ (ಟಿವಿಕೆ) ನಾಯಕ ದಳಪತಿ ವಿಜಯ್ ಗುರುವಾರ ಪ್ರಕಟಿಸಿದ್ದಾರೆ. ಬಡ ವಧುವಿಗೆ ಬಂಗಾರ ಜತೆ ಉತ್ತಮ ಗುಣಮಟ್ಟದ ರೇಷ್ಮೆ ಸೀರೆ, ಮಹಿಳಾ ನೇತೃತ್ವದ ಎಸ್‌ಎಚ್‌ಜಿಗಳಿಗೆ 5 ಲಕ್ಷ ರೂ.ವರೆಗೆ ಬಡ್ಡಿ ಮುಕ್ತ ಸಾಲ ಸೌಲಭ್ಯದ ಆಶ್ವಾಸನೆಯೂ ಪ್ರಣಾಳಿಕೆಯಲ್ಲಿದೆ. ಮಾತ್ರವಲ್ಲ, ಒಂದು ವೇಳೆ ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವ ಭರವಸೆಯನ್ನೂ ವಿಜಯ್ ನೀಡಿದ್ದಾರೆ.

ಶಿಕ್ಷಣಕ್ಕೆ ಆದ್ಯತೆ: ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೂ ಆದ್ಯತೆ ನೀಡಲಾಗಿದೆ. ಮಕ್ಕಳು ಅರ್ಧದಲ್ಲಿ ವ್ಯಾಸಂಗ ಬಿಡುವುದನ್ನು ತಪ್ಪಿಸಲು ಸರ್ಕಾರಿ ಶಾಲೆ ಅಥವಾ ರಾಜ್ಯ ಸರ್ಕಾರದ ಅನುದಾನಿತ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪೋಷಕರಿಗೆ ವಾರ್ಷಿಕ 15 ಸಾವಿರ ರೂ. ಆರ್ಥಿಕ ನೆರವು ಘೋಷಿಸಲಾಗಿದೆ. ತಮಿಳುನಾಡಿನ ದಂತಕಥೆ ಕಾಮರಾಜರ್ ಹೆಸರಲ್ಲಿ 100 ವಿಶೇಷ ವಸತಿ ಶಾಲೆಗಳನ್ನು ತೆರೆಯಲಾಗುವುದು. ಉನ್ನತ ಶಿಕ್ಷಣಕ್ಕೆ 20 ಲಕ್ಷ ರೂ.ವರೆಗೆ ಸಾಲ ಸೌಲಭ್ಯ, ಎಐ ಖಾತೆ, ಎಐ ವಿವಿ ಮತ್ತು ಎಐ ನಗರ ನಿರ್ಮಾಣದ ಭರವಸೆಯನ್ನೂ ಪ್ರಣಾಳಿಕೆಯಲ್ಲಿ ಟಿವಿಕೆ ನೀಡಿದೆ.

ಮುಸಲ್ಮಾನ ಮಹಿಳೆಯರಿಗೆ ಧರ್ಮಾಧಾರಿತ ಮೀಸಲಾತಿ ಇಲ್ಲ: ಅಮಿತ್ ಶಾ

ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ

• **ಹೊಸದಿಲ್ಲಿ :** ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ನೀಡುವುದಿಲ್ಲ, ಇಂತಹ ಮೀಸಲಾತಿ ಅಥವಾ ಕೋಟಾಗಳು ಅಸಾಂವಿಧಾನಿಕ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈಗಾಗಲೆ ಪ್ರಗತಿಯಲ್ಲಿರುವ ಜನಗಣತಿಯೊಂದಿಗೆ ಜಾತಿ ಗಣತಿ ಮತ್ತು ಜನಸಂಖ್ಯಾ ಎಣಿಕೆಯನ್ನು ಮಾಡಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು. ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ಮತ್ತು ಕ್ಷೇತ್ರ ಮರು ವಿಂಗಡಣೆ ಆಯೋಗ ರಚನೆಗಾಗಿ ಲೋಕಸಭೆಯಲ್ಲಿ ಮಂಡಿಸಲಾದ ಮೂರು ಮಸೂದೆಗಳ ಮಂಡನೆಗೆ ಮುನ್ನ ಬರೋಬ್ಬರಿ 40 ನಿಮಿಷ ಕಾಲ ತೀವ್ರತರ ಚರ್ಚೆ ನಡೆದಿದ್ದು, ಚರ್ಚೆ ವೇಳೆ ಸಚಿವ ಶಾ ಈ ರೀತಿ ಸ್ಪಷ್ಟವಾಗಿ ಅಭಿಮತ ವ್ಯಕ್ತಪಡಿಸಿದರು.

ಧರ್ಮಾಧಾರಿತ ಮೀಸಲಾತಿ ಇಲ್ಲ: ಮುಸಲ್ಮಾನ ಮಹಿಳೆಯರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡೋ ವಿಚಾರ ಇಲ್ಲವೇ ಇಲ್ಲ, ಧರ್ಮದ ಆಧಾರದಲ್ಲಿ ಮೀಸಲಾತಿಗೆ ನಮ್ಮ ಘನ ಸಂವಿಧಾನದಲ್ಲಿ ಅವಕಾಶ ಕೂಡ ಇಲ್ಲ, ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ಕಲ್ಪಿಸಲಾಗದು ಎಂಬುದು ನಮ್ಮ ಸರಕಾರದ ಧೋರಣೆ. ಇಂತಹ ಮೀಸಲಾತಿ ಸಂವಿಧಾನಬಾಹಿರ ಎಂದು ಸಚಿವ ಶಾ, ಈ ವಿಚಾರದಲ್ಲಿ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಧರ್ಮೇಂದ್ರ ಯಾದವ್ ವಾದಕ್ಕೆ ತೀಕ್ಷ್ಣ ತಿರುಗೇಟು ನೀಡಿದರು.

ಸರಕಾರ ಈಗಾಗಲೆ ತೀರ್ಮಾನ ತಳೆದಿದೆ: ಜಾತಿ ಗಣತಿ ನಡೆಸಬೇಕೆಂಬ ಬೇಡಿಕೆಯನ್ನು ನಾವು ಮುಂದಿಡುತ್ತೇವೆಂದು ಸಮಾಜವಾದಿ ಪಕ್ಷದವರು ಹೇಳುತ್ತಾರೆ. ಆದರೆ ವಾಸ್ತವದಲ್ಲಿ, ಜಾತಿಗಣತಿ ಬಗ್ಗೆ ನಮ್ಮ ಸರಕಾರ ಈಗಾಗಲೆ ತೀರ್ಮಾನ ಕೈಗೊಂಡಾಗಿದೆ. ಜನಸಂಖ್ಯಾ ಗಣತಿ ಜತೆ ಜಾತಿ ಗಣತಿ ನಡೆಸಲಾಗುವುದು. ಪ್ರಸಕ್ತ ಕುಟುಂಬಗಳು ಅಥವಾ ಮನೆಗಳ ಗಣತಿ ನಡೆದಿದೆ ಮತ್ತು ಮನೆಗಳಿಗೆ ಯಾವುದೇ ಜಾತಿ ಇಲ್ಲ, ಸಮಾಜವಾದಿ ಪಕ್ಷಕ್ಕೆ ಅದರದೇ ಮಾರ್ಗವಿದ್ದಲ್ಲಿ, ಮನೆಗಳ ಅಥವಾ ಕುಟುಂಬಗಳ ಜಾತಿಯನ್ನು ತರ್ಕಿಸುವರು ಎಂದು ಸಚಿವ ಶಾ ಟೀಕಿಸಿದರು.

ನಮ್ಮದೇನೂ ಅಭ್ಯಂತರವಿಲ್ಲ: ಸಮಾಜವಾದಿ ಪಕ್ಷ ತನ್ನೆಲ್ಲಾ ಟಿಕೆಟ್‌ಗಳನ್ನು ಮುಸಲ್ಮಾನ ಮಹಿಳೆಯರಿಗೆ ಕೊಡುವುದಿದ್ದಲ್ಲಿ, ನಮ್ಮದೇನೂ ಅಭ್ಯಂತರವಿಲ್ಲವೆಂದ ಸಚಿವರು , ಜನಸಂಖ್ಯಾ ಎಣಿಕೆ ಸಂದರ್ಭ ಜಾತಿ ಗಣತಿಗೂ ಅಗತ್ಯ ಪೂರಕ ನಿಯಮಾವಳಿಗಳನ್ನು ಗಣತಿ ಅಧಿಕಾರಿಗಳು ಪ್ರತ್ಯೇಕ ಜೋಡಿಸಿಕೊಂಡಿರುತ್ತಾರೆ. ವೈಯ್ಯಕ್ತಿಕ ವಾಗಿ ನಾನು ಕೂಡ ಇದನ್ನು ಅಪೇಕ್ಷಿಸಿದ್ದೇನೆ. ಒಟ್ಟಿನಲ್ಲಿ ಜಾತಿ ಗಣತಿ ಜತೆ ಜನಗಣತಿ ನಡೆಯಲಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಎಂದರು. ಜನಗಣತಿ 2027ರಡಿ ಮನೆಗಳ ಗಣತಿ ಏ.1ರಿಂದಲೆ ಶುರುವಾಗಿದೆ. ಮುಂದಿನ ಜನಗಣತಿಯು ಜಾತಿ ಗಣತಿಯನ್ನೂ ಒಳಗೊಳ್ಳಬೇಕೆಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ, ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ಕಳೆದ ವರ್ಷ ಏಪ್ರಿಲ್ 30ರಂದು ನಿರ್ಧರಿಸಿತ್ತು. ಸ್ವಾತಂತ್ರ್ಯಾನಂತರ ನಡೆದಿರುವ ಒಂದೇ ಒಂದು ಜನಗಣತಿ ಕೂಡ ಜಾತಿ ಗಣತಿಯನ್ನು ಒಳಗೊಂಡಿಲ್ಲ.

ನಾಸಿಕ್ ಘಟನೆ ಹಿನ್ನೆಲೆಯಲ್ಲಿ ಕೋರಿಕೆ | ಸುಪ್ರೀಂಗೆ ಸಲ್ಲಿಕೆಯಾಗಿದೆ ಅರ್ಜಿ

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ?

• **ಹೊಸದಿಲ್ಲಿ:** ನಾಸಿಕ್‌ನ ಬಹುರಾಷ್ಟ್ರೀಯ ಕಂಪನಿಯಲ್ಲಿ ಹೊರಬಿದ್ದ ಧಾರ್ಮಿಕ ಮತಾಂತರ ಮತ್ತು ಲೈಂಗಿಕ ಕಿರುಕುಳ ಆರೋಪಗಳು ದೇಶವ್ಯಾಪಿ ಚರ್ಚೆಗೆಗ್ರಾಸವಾಗಿರುವಂತೆಯೇ, ಬಲವಂತ ಹಾಗೂ ಮೋಸದ ಧಾರ್ಮಿಕ ಮತಾಂತರವನ್ನು ನೇರವಾಗಿ ಭಯೋತ್ಪಾದಕ ಕೃತ್ಯವೆಂದು ಘೋಷಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಟಿಸಿಎಸ್ ನಾಸಿಕ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಂಟು ಮಹಿಳೆಯರು ಲೈಂಗಿಕ ಕಿರುಕುಳದ ಜೊತೆಗೆ ಬಲವಂತ ಮತಾಂತರ ಆರೋಪ ಮಾಡಿರುವ ಘಟನೆ ಈ ಅರ್ಜಿಗೆ ನೆಲೆ ನೀಡಿದೆ. ಹಿರಿಯ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಅರ್ಜಿಯಲ್ಲಿ, 'ಮೋಸದ ಧಾರ್ಮಿಕ ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ; ಅದು ರಾಷ್ಟ್ರದ ಪ್ರಭುತ್ವ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕೆ ನೇರ ಸವಾಲು' ಎಂದು ಬಣ್ಣಿಸಲಾಗಿದೆ.

ಅರ್ಜಿಯ ಪ್ರಕಾರ, ಸಂಘಟಿತವಾಗಿ, ಒತ್ತಾಯಪೂರ್ವಕವಾಗಿ ನಡೆಯುವ ಮತಾಂತರ ಅಭಿಯಾನಗಳು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಸೆಕ್ಷನ್ 113 ಹಾಗೂ ಯುಎಪಿಎ ಕಾಯ್ದೆಯ ಸೆಕ್ಷನ್ 15 ಅಡಿಯಲ್ಲಿ, 'ಭಯೋತ್ಪಾದಕ ಕೃತ್ಯ'ಗಳ ವ್ಯಾಪ್ತಿಗೆ ಬರುತ್ತವೆ. ವಿದೇಶಿ ಶಕ್ತಿಗಳ ನೆರವಿನಿಂದ ನಡೆಯುವ ಈ ಸಂಚುಗಳು ದೇಶದ ಜನಸಾಂಖ್ಯಿಕ ಸಮತೋಲನವೇ ಬದಲಿಸುವ ಉದ್ದೇಶ ಹೊಂದಿದ್ದು, ಏಕತೆ ಮತ್ತು ಭದ್ರತೆಗೆ ಗಂಭೀರ ಧಕ್ಕೆ ಉಂಟುಮಾಡುತ್ತವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

» ಉಗ್ರ ಕೃತ್ಯವೆಂದೇ ಪರಿಗಣಿಸಲು ಮನವಿ

ಇದಲ್ಲದೆ, ಧಾರ್ಮಿಕ ಮತಾಂತರ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ಹಾಗೂ ಇಂತಹ ಪ್ರಕರಣಗಳಲ್ಲಿ ಶಿಕ್ಷೆಯನ್ನು ಸತತ ಶಿಕ್ಷೆ ರೂಪದಲ್ಲಿ ವಿಧಿಸುವಂತೆ ಕೋರ್ಟ್‌ಗೆ ಮನವಿ ಮಾಡಲಾಗಿದೆ.

ಹಾಗೆಯೇ 'ಧರ್ಮ ಸ್ವಾತಂತ್ರ್ಯ ಎಂದರೆ ಬಲವಂತ, ಮೋಸ ಅಥವಾ ಒತ್ತಾಯದ ಮೂಲಕ ಮತಾಂತರಗೊಳಿಸುವ ಹಕ್ಕು ಅಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. ಸಂವಿಧಾನದ 25ನೇ ವಿಧಿ ನೀಡಿರುವ ಧರ್ಮಾಚರಣೆಯ ಹಕ್ಕು ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಗಳಿಗೆ ಒಳಪಟ್ಟಿದ್ದು, ಅದು ನಿರ್ಬಂಧರಹಿತವಲ್ಲ ಎಂದು ವಾದಿಸಲಾಗಿದೆ.

ದುರುದ್ದೇಶದ ' ಮತಾಂತರ ತಡೆಗೆ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೇಳಿಕೊಂಡಿರುವ ಈ ಅರ್ಜಿ, ಈಗ ಸುಪ್ರೀಂ ಕೋರ್ಟ್‌ನ ಮುಂದೆ ಮಹತ್ವದ ಸಂವಿಧಾನಾತ್ಮಕ ಚರ್ಚೆಗೆ ವೇದಿಕೆ ಸಿದ್ಧಪಡಿಸಿದೆ.

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

ಪುಟ ೩➜ ಭಾಷೆ-1(ಕನ್ನಡ), ಭಾಷೆ-2(ಇಂಗ್ಲಿಷ್) ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಪ್ರತ್ಯೇಕ ಚಟುವಟಿಕೆಗಳ ಪುಸ್ತಕಗಳನ್ನು ವಿನೂತನ ರೀತಿಯಲ್ಲಿ ಹೊರತರಲಾಗಿದೆ. ಈ ಅಭ್ಯಾಸ ಪುಸ್ತಕಗಳು ವಿಭಿನ್ನ ರೀತಿಯ ಕಲಿಕಾ ಅನುಭವಗಳನ್ನು ಮಕ್ಕಳಿಗೆ ಒದಗಿಸುವ ಉದ್ದೇಶದಿಂದ ಹಲವು ಬಗೆಯ ವೈವಿಧ್ಯಮಯ ಚಟುವಟಿಕೆಗಳನ್ನು ಹೊಂದಿದ್ದು, ಸೃಜನಶೀಲ ಆಟ ಅಥವಾ ರಚನಾತ್ಮಕ ಕಲಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ-ಪರಿಹರಿಸುವ ಸಾಮರ್ಥ್ಯಗಳನ್ನು ಬೆಳೆಸುವಂತಿವೆ. ಕಥೆಗಳು, ಪ್ರಾಸಗೀತೆಗಳು, ಹಾಡುಗಳು, ಸುತ್ತಮುತ್ತಲಿನ ವಸ್ತು, ಸಸ್ಯ ಮತ್ತು ಪ್ರಾಣಿಗಳನ್ನು ಗುರುತಿಸುವುದು. ಕಲೆ ಮತ್ತು ಕರಕುಶಲ ಚಟುವಟಿಕೆಗಳು, ಚಿತ್ರ ಬರೆಯುವುದು. ಬಣ್ಣ ತುಂಬುವುದು, ಆಟಿಕೆಗಳ ಬಳಕೆ, ಆಟ ಮತ್ತು ಚಟುವಟಿಕೆ-ಆಧಾರಿತ ಕಲಿಕಾ-ಬೋಧನಾ ವಿಧಾನವನ್ನು ಅಭಿವೃದ್ಧಿಪಡಿಸಲು ಕಾರಣವಾಗುವಂತಿವೆ. ಅಭ್ಯಾಸ ಪುಸ್ತಕಗಳಲ್ಲಿರುವ ಚಟುವಟಿಕೆಗಳು ಶ್ರೇಣೀಕೃತವಾಗಿದೆ. ಜತೆಗೆ ಪ್ರತಿ ಪುಸ್ತಕದ ಪ್ರತಿ ಪುಟಗಳಲ್ಲೂ ಪೋಷಕರ ಹಾಗೂ ಶಿಕ್ಷಕರ ಸಹಿ ಮತ್ತು ದಿನಾಂಕವನ್ನು ಕಡ್ಡಾಯಗೊಳಿಸಲಾಗಿದೆ.

ಪಠ್ಯಪುಸ್ತಕದಲ್ಲಿನ ವಿಶೇಷತೆ

ಪುಟ ೩➜ ಹೀಗೆ ಕಲಿಕೆ ಜತೆಗೆ ಪಠ್ಯೇತರ ಹಾಗೂ ಉತ್ತಮ ಹವ್ಯಾಸಗಳನ್ನು ಪ್ರತಿ ಪುಟದಲ್ಲೂ ಪುಸ್ತಕದ ಅಡಿಭಾಗದಲ್ಲಿ ಸೂಚನೆಯಲ್ಲಿ ತಿಳಿಸಲಾಗಿದೆ.
ಶಿಕ್ಷಕರಿಗೆ ವಿಶೇಷ ತರಬೇತಿ: ರಾಜ್ಯದಲ್ಲಿ ದ್ವಿಭಾಷಾ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಈಗಾಗಲೇ ಆರಂಭಿಸಿದೆ. ಶಾಲಾ ಶಿಕ್ಷಕರಿಗೆ ದ್ವಿಭಾಷಾ ಬೋಧನೆ ಬಗ್ಗೆ ತರಬೇತಿ ನಡೆಸುತ್ತಿದ್ದು, ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಶಿಕ್ಷಕರಿಗೆ ದ್ವಿಭಾಷಾ ಬೋಧನೆಯ ಬಗ್ಗೆ ತರಬೇತಿ ನಡೆಯುತ್ತಿದೆ.

ರಾಜ್ಯಗಳಿಗಿಲ್ಲ ತಾರತಮ್ಯ

ಪುಟ ೩➜ ''ಈ ಸದನದಿಂದ ನಾನು ಬಹಳ ಜವಾಬ್ದಾರಿಯಿಂದ ಹೇಳಲು ಬಯಸುತ್ತೇನೆ- ದಕ್ಷಿಣವಾಗಲಿ, ಉತ್ತರವಾಗಲಿ, ಪೂರ್ವವಾಗಲಿ, ಪಶ್ಚಿಮವಾಗಲಿ, ಸಣ್ಣ ರಾಜ್ಯಗಳಾಗಲಿ ದೊಡ್ಡ ರಾಜ್ಯಗಳಾಗಲಿ- ಈ ನಿರ್ಧಾರ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯದ ವಿರುದ್ಧ ಭೇದಭಾವ ನಡೆಯುವುದಿಲ್ಲ ಎಂದು ಅವರು ಹೇಳಿದರು. ಲೋಕಸಭೆಯ ಸ್ಥಾನಗಳ ಪ್ರಮಾಣದಲ್ಲಿ ಯಾವುದೇ ರಾಜ್ಯಕ್ಕೂ ಕಡಿತವಾಗುವುದಿಲ್ಲ, ಆ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ, ಹೆಚ್ಚಳವೂ ಅದೇ ಪ್ರಮಾಣದಲ್ಲಿ ಆಗುತ್ತದೆ ಎಂದು ಅವರು ಹೇಳಿದರು. ಮಹಿಳಾ ಮೀಸಲಾತಿ ಎಂದರೆ ಮಹಿಳೆಯರಿಗೆ ನೀಡಲಾಗುತ್ತಿರುವ ದಾನವಲ್ಲ, ಅದು ಅವರ ಹಕ್ಕು ಎಂದರು.

ಶ್ರೇಯಸ್ಸನ್ನು ವಿಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ: ಮೀಸಲಾತಿ ಕಾಯ್ದೆಯನ್ನು 2029ರಲ್ಲಿ ಜಾರಿಗೆ ತರಲು ಯೋಜಿಸಲಾಗಿದೆ. ಸಮಯದ ಅಭಾವದಿಂದಾಗಿ 2024ರ ವೇಳೆಗೆ ಈ ಸುಧಾರಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ, ಆದರೆ, ಇನ್ನು ಮುಂದೆ ವಿಳಂಬ ಮಾಡಬಾರದು ಎಂದು ಪ್ರಧಾನಿ ಒತ್ತಿ ಹೇಳಿದರು. ಆಡಳಿತ ಪಕ್ಷ ಯಾವುದೇ ಸ್ವಹಿತಕ್ಕೆ ಈ ಕಾಯ್ದೆ ಜಾರಿ ಮಾಡುತ್ತಿಲ್ಲ, ರಾಷ್ಟ್ರೀಯ ಹಿತಾಸಕ್ತಿಯ ಈ ಸುಧಾರಣೆಯ ಶ್ರೇಯಸ್ಸನ್ನು ವಿರೋಧ ಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ ಎಂದರು.

ಇಂದು ಸಂಜೆ 4 ಗಂಟೆಗೆ ಮತಕ್ಕೆ

ಪುಟ ೩➜ ಈ ಕ್ರಮಗಳನ್ನು ಜಾರಿಗೆ ತರಲು 131ನೇ ಸಂವಿಧಾನ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಆಯೋಗ ಸ್ಥಾಪನೆಗೆ ಸಂಬಂಧಿಸಿದ ಈ ಮಸೂದೆಗಳ ಮೇಲೆ ಶುಕ್ರವಾರ ಸಂಜೆ 4 ಗಂಟೆಗೆ ಲೋಕಸಭೆಯಲ್ಲಿ ಮತದಾನ ನಡೆಯಲಿದೆ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.

ಒಕ್ಕೂಟ ವ್ಯವಸ್ಥೆ ಮೇಲೆ ದಾಳಿ: ವಿಪಕ್ಷ

ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು(ಡಿಎಂಕೆ) ಮತ್ತು ಕೇರಳದ ನಾಯಕರು, ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆಯು ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವನ್ನು ಕುಗ್ಗಿಸುತ್ತದೆ ಮತ್ತು ಉತ್ತರದ ರಾಜ್ಯಗಳಿಗೆ ಹೆಚ್ಚಿನ ಲಾಭ ಮಾಡಿಕೊಡುತ್ತದೆ ಎಂದು ದೂರಿದ್ದಾರೆ. ಇದನ್ನು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ ಎಂದು ಕೆ.ಸಿ. ವೇಣುಗೋಪಾಲ್ ಬಣ್ಣಿಸಿದ್ದಾರೆ. ವಿರೋಧ ಪಕ್ಷಗಳು ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಮರುವಿಂಗಡಣೆಯೊಂದಿಗೆ ಜೋಡಿಸುವುದನ್ನು ವಿರೋಧಿಸಿವೆ. ಮಹಿಳಾ ಮೀಸಲಾತಿಯನ್ನು ಈಗಿರುವ 543 ಲೋಕಸಭಾ ಸ್ಥಾನಗಳಲ್ಲೇ ತಕ್ಷಣವೇ ಜಾರಿಗೆ ತರಬೇಕು ಎಂಬುದು ವಿರೋಧ ಪಕ್ಷಗಳ ಮುಖ್ಯ ಬೇಡಿಕೆಯಾಗಿದೆ.

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

ಪುಟ ೩➜ ಅಲ್ಲದೇ, ಕಲಬುರಗಿ ಜಿಲ್ಲೆ ಹಾಗರಗಾ ಗ್ರಾಮದ ಸರ್ವೇ ನಂ. 215ರಲ್ಲಿ ಲಭ್ಯವಿರುವ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2 ಎಕರೆ ಸಿ.ಎ. ನಿವೇಶನವನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಸೇವಾ ಭವನವನ್ನು ನಿರ್ಮಿಸಲು ಮಂಜೂರು ಮಾಡಲು ಒಪ್ಪಿಗೆ ನೀಡಿದೆ ಎಂದರು. ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 25 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದರು.

ಜೆಜೆಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಪುಟ ೩➜ ಸಂಜೀವಿ-ಕೆಎಸ್‌ಆರ್‌ಎಲ್‌ಪಿಎಸ್ ಅಭಿಯಾನದಲ್ಲಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ (ಜಿಪಿಎಲ್‌ಎಫ್) ಡಿಜಿಟಲ್ ಕಾರ್ಯವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ಆಲ್ ಇನ್ ವನ್ ಡೆಸ್ಕ್‌ಟಾಪ್ ಮಲ್ಟಿಫಂಕ್ಷನ್ ಪ್ರಿಂಟರ್ಸ್ ಮತ್ತು ಯುಪಿಎಸ್‌ಗಳನ್ನು 25 ಕೋಟಿ ರೂ. ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ ಉಗ್ರ ಹಮ್ಜಾಗೆ ಗುಂಡು

ಪುಟ ೩➜ ದಾಳಿ ನಡೆಸಿದವರು ಬಹಳ ಸಮೀಪದಿಂದ ಗುಂಡಿನ ದಾಳಿ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾರೆ. ಗಾಯಗೊಂಡ ಹಮ್ಜಾನನ್ನು ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನಡೆಯುತ್ತಿದೆ. ಇದಕ್ಕೂ ಮುನ್ನ ಕಳೆದ ವರ್ಷದ ಮೇ ತಿಂಗಳಲ್ಲಿ ಲಾಹೋರಿನಲ್ಲಿರುವ ಅವರ ನಿವಾಸದ ಹೊರಗೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದರು. ಆ ದಾಳಿಯಿಂದ ಬದುಕುಳಿದಿದ್ದ, ನಂತರ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ವರದಿಯಾಗಿದ್ದರೂ, ಅಧಿಕಾರಿಗಳು ಯಾವುದೇ ಅಧಿಕೃತ ಹೇಳಿಕೆ ನೀಡಿರಲಿಲ್ಲ. 1959ರ ಮೇ 10ರಂದು ಪಾಕ್‌ನ ಪಂಜಾಬ್ ಪ್ರಾಂತ್ಯದ ಗುಜ್ರಾನ್‌ವಾಲಾದಲ್ಲಿ ಜನಿಸಿದ್ದ ಹಮ್ಜಾ, ಅಫ್ಘಾನ್ ಜಿಹಾದ್ ಸೇರಿಕೊಂಡಿದ್ದ. ಅಲ್ಲಿಂದ 1985-86ರ ಅವಧಿಯಲ್ಲಿ ಹಾಫಿಜ್ ಸಯೀದ್ ಜತೆಗೂಡಿ ಲಷ್ಕರೆ ಉಗ್ರ ಸಂಘಟನೆ ಸ್ಥಾಪಿಸಿದ್ದ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳಿಗೆ ನಮ್ಮ ಸರಕಾರ ಆಪರೇಷನ್ ಸಿಂಧೂರ ಮಾಡಿದೆ.ಆದರೆ ಕಾಂಗ್ರೆಸ್ ಪಾಕಿಸ್ತಾನದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ - ಮೋದಿ
- ಅವರದು ತಾಳ, ಇವರದು ಮೇಳ. ಈ ತಾಳ ಮೇಳವನ್ನು ತಡೆಯದೆ ಹೋದರೆ ಮುಂದೆ ದೇಶದ ಪರಿಸ್ಥಿತಿ ಅಲ್ಲೋಲ ಕಲ್ಲೋಲ!

ದಿನ ಭವಿಷ್ಯ

ಮೇಷ
ಮನೆಯಲ್ಲಿ ಶಾಂತ, ಸೌಹಾರ್ದ ವಾತಾವರಣ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ. ವೃತ್ತಿಯಲ್ಲಿ ಸ್ವಲ್ಪ ಸಮಸ್ಯೆ ಕಾಣಿಸಿಕೊಳ್ಳಬಹುದು.

ವೃಷಭ
ನಿಮ್ಮ ವ್ಯವಹಾರ ವಿಸ್ತರಿಸುವುದು ನಿಮ್ಮ ಮುಖ್ಯ ಗುರಿ. ಅದೃಷ್ಟ ನಿಮ್ಮ ಜತೆಗಿದೆ. ಉದ್ಯೋಗ ಬದಲಾವಣೆಗೆ ಕಾಲ ಪಕ್ವವಾಗಿದೆ. ಧನಪ್ರಾಪ್ತಿ.

ಮಿಥುನ
ಪ್ರಗತಿಗೆ ಪೂರಕ ವಾತಾವರಣ. ಕೆಲಸದಲ್ಲಿ ಅತ್ಯುತ್ಸಾಹ ತೋರುವಿರಿ. ಮನೆಯಲ್ಲಿ ಹಿರಿಯರ ಆರೋಗ್ಯ ಸಮಸ್ಯೆ. ಕಾಳಜಿ ವಹಿಸಿರಿ.

ಕಟಕ
ಇಂದು ಹಣದ ವಿಚಾರದಲ್ಲಿ ಪ್ರಗತಿ ಕಾಣದು. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಸುಧಾರಣೆ. ಕೌಟುಂಬಿಕ ಒತ್ತಡ ಶಮನ.

ಸಿಂಹ
ಬಾಕಿ ಇರುವ ಕಾರ್ಯ ಮುಗಿಸಲು ಗಮನ ಕೊಡಿ. ವೃತ್ತಿಯಲ್ಲಿ ಒತ್ತಡ ಹೆಚ್ಚು. ಕೆಲವರ ಅವಕೃಪೆಗೆ ತುತ್ತಾಗುವಿರಿ.

ಕನ್ಯಾ
ಒತ್ತಡದ ಬದುಕಿಂದ ದೂರವಾಗಿ ಪ್ರವಾಸ ಹೊರಡಲು ಸಕಾಲ. ಮನೆಯವರ ಇಚ್ಛೆ ಅರಿತು ವ್ಯವಹರಿಸಿ.

ತುಲಾ
ಹೆಚ್ಚು ಭಾವುಕರಾಗಿ ವರ್ತಿಸುವಿರಿ. ಇತರರ ಜತೆಗಿನ ವ್ಯವಹಾರದಲ್ಲಿ ಅದು ಪ್ರತಿಫಲಿಸಲಿದೆ. ಅನಾರೋಗ್ಯದ ಸಂಕೇತ ಕಂಡರೆ ವೈದ್ಯರನ್ನು ಕಾಣಿ.

ವೃಶ್ಚಿಕ
ಮಹತ್ತರ ತೀರ್ಮಾನ ಇಂದು ತಾಳದಿರಿ. ಅದು ಸೂಕ್ತ ಫಲ ನೀಡದು. ಆಪ್ತರೇ ವಿರೋಧ ಸೂಚಿಸುವರು. ಹೊಂದಾಣಿಕೆ ಒಳಿತು.

ಧನು
ಆರ್ಥಿಕವಾಗಿ ನಿಮಗೆ ಮಹತ್ವದ ದಿನ. ಧನಲಾಭ. ಅನ್ಯರ ಜತೆ ಹೊಂದಿಕೊಳ್ಳಲು ಕಲಿಯಿರಿ. ಹಠಮಾರಿ ಧೋರಣೆ ಬಿಟ್ಟುಬಿಡಿ.

ಮಕರ
ಇತರರ ನೆರವು ಬೇಡವೆಂಬ ಮನಸ್ಥಿತಿ ನಿಮ್ಮದು. ಆದರೆ ಎಲ್ಲರನ್ನು ದೂರ ಮಾಡಬೇಡಿ. ನಿಮ್ಮ ತಪ್ಪು ಒಪ್ಪಿಕೊಳ್ಳಲು ಮುಜುಗರ ಬೇಕಾಗಿಲ್ಲ.

ಕುಂಭ
ಕುಟುಂಬ ಸದಸ್ಯರ ಜತೆ ಹೊಂದಾಣಿಕೆ ಇರಲಿ. ಜಗಳಕ್ಕೆ ಆಸ್ಪದ ನೀಡಬೇಡಿ. ಪ್ರಯಾಣ ಸಾಧ್ಯತೆಯಿದೆ. ಖರ್ಚು ಇಂದು ಹೆಚ್ಚಲಿದೆ.

ಮೀನ
ಮನೆಯಲ್ಲಿ ಸಂಬಂಧ ಕೆಡಲು ಆಸ್ಪದ ಕೊಡಬೇಡಿ. ಹೊಟ್ಟೆ ಕೆಡುವ ಸಾಧ್ಯತೆ. ಸಾತ್ವಿಕ ಆಹಾರ ಸೇವಿಸಿ. ಆರ್ಥಿಕ ಪರಿಸ್ಥಿತಿ ಉತ್ತಮ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 3,8,2,7

ಹೈಕಮಾಂಡ್ ಭೇಟಿಯಾದ ಹಿರಿಯ ಶಾಸಕರ ನಿಯೋಗ

ಪುಟ ೩➜ ಸಚಿವ ಸಂಪುಟ ಪುನರ್ ರಚನೆಯಾಗಬೇಕು. ತಮಗೆ ಅವಕಾಶ ನೀಡಬೇಕು ಎಂಬುದು ಈ ಶಾಸಕರ ಬೇಡಿಕೆಯಾಗಿದೆ. ಅದೇ ಸಮಯದಲ್ಲಿ ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯಲ್ಲಿನ ಗೊಂದಲಗಳನ್ನು ಬಗೆಹರಿಸುವಂತೆ ಹಿರಿಯ ಶಾಸಕರು ಮನವಿ ಮಾಡಿದ್ದಾರೆ. ಕಳೆದ ಭಾನುವಾರದಿಂದಲೂ ದಿಲ್ಲಿಯಲ್ಲೇ ಬೀಡುಬಿಟ್ಟಿರುವ ಶಾಸಕರು ಸೋಮವಾರ ಎಐಸಿಸಿಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಅನಂತರ ರಾಹುಲ್ ಗಾಂಧಿ ಸೇರಿದಂತೆ ಬೇರೆ ಯಾವ ನಾಯಕರೂ 5 ದಿನಗಳಾದರೂ ಲಭ್ಯವಾಗಿರಲಿಲ್ಲ, ಶಾಸಕರ ಒತ್ತಡಕ್ಕೆ ಮಣಿದು ರಣದೀಪ್ ಸಿಂಗ್ ಸುರ್ಜೇವಾಲ ಭೇಟಿಗೆ ಸಮಯ ನೀಡಿತ್ತು. ಕೆ.ಸಿ. ವೇಣುಗೋಪಾಲ್ ಕೇರಳದಿಂದ ದಿಲ್ಲಿಗೆ ಮರಳಿದ್ದರೂ ಕೂಡ ಹಿರಿಯ ಶಾಸಕರ ನಿಯೋಗಕ್ಕೆ ಸಮಯ ನೀಡಲು ಹಿಂದೇಟು ಹಾಕಿದ್ದರು.

ಸಂಪುಟ ಪುನಾರಚನೆ ಸಿಎಂ ಪರಮಾಧಿಕಾರ: ಸಚಿವ ಸ್ಥಾನಕ್ಕಾಗಿ ಶಾಸಕರು ದಿಲ್ಲಿಗೆ ಭೇಟಿ ನೀಡುವ ಅಗತ್ಯ ಇಲ್ಲ, ಹೀಗಾಗಿ ಎಲ್ಲರೂ ವಾಪಸ್ ತೆರಳಿ ಎಂದು ವರಿಷ್ಠರು ಸಂದೇಶ ರವಾನಿಸಿದ್ದಾರೆ. ಸಂಸತ್‌ನಲ್ಲಿ ಮಹಿಳಾ ಮೀಸಲಾತಿಯ ಮಸೂದೆ ಮಂಡನೆಯಾಗುತ್ತಿದೆ. ಅತೀ ಮುಖ್ಯವಾದ ಈ ಮಸೂದೆ ಮೇಲಿನ ಚರ್ಚೆಗೆ ಕಾಂಗ್ರೆಸ್ ಹಿರಿಯ ನಾಯಕರು ತಯಾರಿ ನಡೆಸುತ್ತಿದ್ದಾರೆ. ಹೀಗಾಗಿ ಕರ್ನಾಟಕದ ನಿಯೋಗಕ್ಕೆ ಭೇಟಿ ಮಾಡಲು ಸಮಯ ನೀಡುತ್ತಿಲ್ಲ ಎಂದು ಹೇಳಲಾಗಿದೆ. ಅಲ್ಲದೇ, ಸಚಿವ ಸಂಪುಟ ವಿಸ್ತರಣೆ ಸಿಎಂ ಅವರ ಪರಮಾಧಿಕಾರ ಹೀಗಿರುವಾಗ ಹೈಕಮಾಂಡ್ ಮಧ್ಯಪ್ರವೇಶ ಸಾಧ್ಯವಿಲ್ಲ ಎಂದು ಸಮಪಷ್ಟಪಡಿಸಿದೆ ಎನ್ನಲಾಗಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಿಬಿಐ ಮನವಿ

ಜೀವಾವಧಿ ಶಿಕ್ಷೆ ನೀಡಿ

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಅಪರಾಧಿಗಳಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿ ಆರೋಪಿಗಳಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸುವಂತೆ ಬೆಂಗಳೂರಿನ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಸಿಬಿಐ ಮನವಿ ಮಾಡಿತು.

ಪ್ರಕರಣದಲ್ಲಿ 16 ಮಂದಿಯನ್ನು ಕೊಲೆ ಪ್ರಕರಣದಲ್ಲಿ ದೋಷಿಗಳು ಎಂದು ನಿರ್ಧರಿಸಿದ್ದು, ಗುರುವಾರ ಶಿಕ್ಷೆಯ ಪ್ರಮಾಣ ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಖುದ್ದು ಅಪರಾಧಿಗಳು ಮತ್ತು ಅವರ ಪರ ವಕೀಲರ ವಾದವನ್ನು ನ್ಯಾಯಾಧೀಶ ರಾದ ಸಂತೋಷ್ ಗಜಾನನ್ ಭಟ್ ಅವರು ಸುದೀರ್ಘವಾಗಿ ಆಲಿಸಿ, ಶುಕ್ರವಾರ ತೀರ್ಪು ಪ್ರಕಟಿಸುವುದಾಗಿ ಹೇಳಿದರು.

ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಕೋರುವುದಿಲ್ಲ, ಬದಲಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ಸಂತ್ರಸ್ತನಾದ ಯೋಗೀಶ್ ಗೌಡನ ಕಣ್ಣಿಗೆ ಖಾರದಪುಡಿ ಎರಚಿ, ತಪ್ಪಿಸಿಕೊಳ್ಳಲು ಅವಕಾಶ ನೀಡದೇ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಇದೊಂದು ವಿರಳಾತಿ ವಿರಳ ಪ್ರಕರಣವಾಗಿದ್ದು, ಸಿಬಿಐ ತನಿಖೆ ಆರಂಭಿಸಿದ ಬಳಿಕ ಪಿತೂರಿ ಬಯಲಾಗಿದೆ. ಪೊಲೀಸ್ ಅಧಿಕಾರಿಗಳು ಮತ್ತು ಇಡೀ ವ್ಯವಸ್ಥೆಯನ್ನು ದುರ್ಬಳಕೆ ಮಾಡಲಾಗಿದೆ. ನ್ಯಾಯಾಂಗಕ್ಕೆ ವಂಚಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ ಗರಿಷ್ಠ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ವಿನಯ್ ಕುಲ ಕರ್ಣಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಎಂ.ಎಸ್. ಶ್ಯಾಮ್ ಸುಂದರ್ ಅವರು ವಿನಯ್ ಕುಲಕರ್ಣಿ ಜನರ ವಿಶ್ವಾಸಗಳಿಸಿ ಗೆದ್ದಿದ್ದಾರೆ. ಮೂವರು ಮಕ್ಕಳಿದ್ದು, 3,500ಕ್ಕೂ ಅಧಿಕ ಆಕಳು, ಎಮ್ಮೆ ಸಾಕಿದ್ದು ಅವುಗಳನ್ನು ನೋಡಿಕೊಳ್ಳಬೇಕಿದೆ. ರಾಜಕೀಯ ಕಾರಣಕ್ಕಾಗಿ ಅವರನ್ನು ಕೃತ್ಯದಲ್ಲಿ ಸಿಲುಕಿಸಲಾಗಿದೆ. ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಕೋರಿದರು.

ನ್ಯಾಯಾಲಯದ ಸೂಚನೆಯಂತೆ ಪೀಠದ ಮುಂದೆ ಹಾಜರಾದ ವಿನಯ್ ಕುಲಕರ್ಣಿ 27 ವರ್ಷದಿಂದ ರಾಜಕೀಯದಲ್ಲಿದ್ದೇನೆ. ನನ್ನ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡಿಲ್ಲ, ರಾಜಕೀಯ ಪ್ರತೀಕಾರಕ್ಕಾಗಿ ಈ ಕೆಲಸ ಮಾಡಿದ್ದಾರೆ. ಮೂವರು ಮಕ್ಕಳಿದ್ದು, ಅವರು ಮದುವೆಗೆ ಬಂದಿದ್ದಾರೆ. ಮೂರು ಬಾರಿ ಶಾಸಕನಾಗಿದ್ದೇನೆ. ಎರಡು ಬಾರಿ ಸಂಸತ್ ಚುನಾವಣೆಯಲ್ಲಿ ನಿಂತು ಸೋತಿದ್ದೇನೆ. ಒಮ್ಮೆ ಸಚಿವನಾಗಿದ್ದೇನೆ. ನನಗೆ ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು.

3,500 ಹಸು/ಎಮ್ಮೆ ಇವೆ. ಅವುಗಳನ್ನು ನೋಡಬೇಕಿದೆ. ಈ ಪ್ರಕರಣದಿಂದಾಗಿ ನನ್ನ ಕ್ಷೇತ್ರದ ಜನರಿಗೂ ಅನ್ಯಾಯವಾಗಿದೆ. ಹೀಗಾಗಿ, ವಿನಾಯಿತಿ ತೋರಬೇಕು ಎಂದರು. ಎಲ್ಲಾ ಅಪರಾಧಿಗಳು ನ್ಯಾಯಾಲಯದ ಮುಂದೆ ತಮ್ಮ ಪರಿಸ್ಥಿತಿಗಳನ್ನು ವಿವರಿಸಿ, ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಎಲ್ಲ ಅಪರಾಧಿಗಳಿಗೆ ಶುಕ್ರವಾರ ಮಧ್ಯಾಹ್ನದ ವೇಳೆಗೆ ನ್ಯಾಯಾಧೀಶರು ಪ್ರತಿಯೊಬ್ಬರ ಪಾತ್ರಕ್ಕೆ ಅನುಗುಣವಾಗಿ ಶಿಕ್ಷೆಯನ್ನು ಪ್ರಕಟಿಸಲಿದ್ದಾರೆ.

ಪೀಠದ ಮುಂದೆ ಅಪರಾಧಿಗಳ ಮನವಿ

- ಎ-4, ಎ-14: ಆಟೋ ಮತ್ತು ಕಾರ್ ಚಾಲಕರು; ವಯಸ್ಸಾದ ತಂದೆ-ತಾಯಿಯನ್ನು ಸಾಕುವ ಜವಾಬ್ದಾರಿ ನಮ್ಮ ಮೇಲಿದೆ.
- ಎ-5: ರಿಯಲ್ ಎಸ್ಟೇಟ್ ಉದ್ಯೋಗಿ; ಅನಾರೋಗ್ಯದಿಂದ ಬಳಲುತ್ತಿರುವ ತಂದೆ-ತಾಯಿಯನ್ನು ನೋಡಿಕೊಳ್ಳಬೇಕು.
- ಎ-9, ಎ-10, ಎ-11: ಪೋಷಕರಿಲ್ಲದ ಅನಾಥರು ಅಥವಾ ವಯಸ್ಸಾದ ತಾಯಿ ಮಾತ್ರ ಇರುವವರು; ಸಣ್ಣ ಮಕ್ಕಳ ಭವಿಷ್ಯಕ್ಕಾಗಿ ಶಿಕ್ಷೆ ಕಡಿಮೆ ಮಾಡಿ.
- ಎ-6, ಎ-12, ಎ-18: ಕೃಷಿಕರು, ಟೈಲರ್ ಮತ್ತು ಗುತ್ತಿಗೆದಾರರು; ಇವರಿಗೆ 4 ರಿಂದ 7 ವರ್ಷದ ಪುಟ್ಟ ಮಕ್ಕಳಿದ್ದಾರೆ ಹಾಗೂ ಹೆಣ್ಣು ಮಕ್ಕಳ ಮದುವೆಯ ಜವಾಬ್ದಾರಿಯಿದೆ.
- ಎ-13: ಹೃದಯ ಶಸ್ತ್ರಚಿಕಿತ್ಸೆಯಾಗಿ ಸ್ಟಂಟ್ ಅಳವಡಿಸಲಾಗಿದೆ; ತೀವ್ರ ಅನಾರೋಗ್ಯವಿದೆ.
- ಎ-16: ದಂಪತಿಗಳಿಬ್ಬರೂ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ; ಇತ್ತೀಚೆಗಷ್ಟೇ ಮೊಮ್ಮಗನ ಸಾವಿನ ನೋವಿನಲ್ಲಿದ್ದಾರೆ.
- ಎ-7: ಆಟೋ ಚಾಲಕ; ತೀವ್ರ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.
- ಎ-19 (ಟೆಂಗರಿಕರ್): ಈವರೆಗೆ ಯಾವುದೇ ಕೆಟ್ಟ ದಾಖಲೆಗಳಿಲ್ಲ (ಬ್ಲ್ಯಾಕ್ ಮಾರ್ಕ್); ಈ ಹಿಂದೆ ನಗದು ಪ್ರಶಸ್ತಿ ಕೂಡ ಲಭಿಸಿದೆ.
- ಎ-8: ತಂದೆ-ತಾಯಿ ಯಾರೂ ಇಲ್ಲ, ನಾನೊಬ್ಬನೇ ದುಡಿಯುವವನು.

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

ಪುಟ ೩➜ ಅಲ್ಲದೆ ಲೈಂಗಿಕ ಕಿರುಕುಳದ ವಿರುದ್ಧ ಮಹಿಳಾ ಉದ್ಯೋಗಿಗಳು ನೀಡಿದ್ದ ದೂರುಗಳನ್ನು ಎಚ್‌ಆರ್ ಮತ್ತು ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಶ್) ಸಮಿತಿ ಸದಸ್ಯೆಯಾಗಿದ್ದ ನಿದಾ ಖಾನ್ ಕಡೆಗಣಿಸಿದ್ದು, ಇವುಗಳಿಗೆಲ್ಲಾ ಬೆಂಬಲವಾಗಿ ನಿಂತಿದ್ದಳು. ಟಿಸಿಎಸ್‌ನ ಉನ್ನತ ಅಧಿಕಾರಿಗಳ ಗಮನಕ್ಕೆ ಬರದಂತೆ ನೋಡಿಕೊಂಡಿದ್ದಳು. ನಿದಾ ಖಾನ್, ಡಾ.ಶಾಹೀನ್ ಶಾಹಿದ್ ನಡುವಿನ ನೇರ ಸಂಪರ್ಕದ ಕುರಿತು ಅಧಿಕಾರಿಗಳು ಅಧಿಕೃತ ಹೇಳಿಕೆಗಳನ್ನು ನೀಡಿಲ್ಲ, ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆಯಬೇಕಾದ ಸಿಬ್ಬಂದಿಯೇ ಲೈಂಗಿಕ ದೌರ್ಜನ್ಯ, ಬಲವಂತದ ಮತಾಂತರ ನಡೆಸಲು ಪ್ರೇರೇಪಿಸುತ್ತಿದ್ದಳು ಎಂಬ ಆಘಾತಕಾರಿ ಮಾಹಿತಿ ಮಹಿಳಾ ಪೊಲೀಸರ ಕಾರ್ಯಾಚರಣೆಯಲ್ಲಿ ತಿಳಿದುಬಂದಿತ್ತು.

ಡಾ.ಶಾಹೀನ್ ಯಾರು?: 2025ರ ದಿಲ್ಲಿ(ಕೆಂಪು ಕೋಟೆ) ಆತ್ಮಾಹುತಿ ಬಾಂಬ್ ಸ್ಫೋಟ ಪ್ರಕರಣದಿಂದ ಬೆಳಕಿಗೆ ಬಂದ ವೈಟ್ ಕಾಲರ್ (ವೈದ್ಯಕೀಯ) ಭಯೋತ್ಪಾದನಾ ಜಾಲದ ಪ್ರಮುಖ ಆರೋಪಿಯಾಗಿದ್ದಳು. ಜೈಶ್-ಎ-ಮೊಹಮ್ಮದ್(ಜೆಇಎಂ) ನಂತಹ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿದ್ದ ಡಾ.ಶಾಹೀನ್, ವೈಟ್ ಕಾಲರ್ ಉಗ್ರ ಸಂಚಿನ ಸಂಘಟಕಿಯಾಗಿದ್ದಳು.

ಉತ್ತರಪ್ರದೇಶದ ಗಾಜಿಯಾಬಾದ್‌ನ ಅಲ್-ಫಲಾ ವಿಶ್ವವಿದ್ಯಾಲಯ, ದಿಲ್ಲಿ ಮತ್ತು ಜಮ್ಮು ಕಾಶ್ಮೀರದ ವಿವಿದೆಡೆಯ ವೈದ್ಯಕೀಯ ವೃತ್ತಿಪರರನ್ನು ಸೇರಿಸಿ ತಂಡವನ್ನು ರಚಿಸಿಕೊಂಡಿದ್ದಳು ಎಂದು ದಿಲ್ಲಿ ಪೊಲೀಸ್ ಮತ್ತು ಎನ್‌ಐಎ ತನಿಖೆಯಲ್ಲಿ ತಿಳಿದುಬಂದಿದೆ. ಭಾರತದಲ್ಲಿ ಜೆಇಎಂ ಮಹಿಳಾ ಘಟಕ ಸ್ಥಾಪಿಸುವುದೇ ಈಕೆಯ ಗುರಿಯಾಗಿತ್ತು.

ಕಂಪನಿಗಷ್ಟೇ ಸೀಮಿತವಲ್ಲ?: ಕೆಲವು ಮೂಲಗಳ ಪ್ರಕಾರ, ಇದು ನಾಸಿಕ್‌ನಲ್ಲಿ ಟಿಸಿಎಸ್ ಅಥವಾ ಕಂಪನಿಗಷ್ಟೇ ಸೀಮಿತವಾಗಿರದೆ, ಇನ್ನಷ್ಟು ದೊಡ್ಡ ಸಂಪರ್ಕಜಾಲವೆಂಬ ಮಾಹಿತಿಯಿದೆ. ಕೇವಲ ನಾಸಿಕ್ ಮಾತ್ರವಲ್ಲದೆ, ಹಲವು ನಗರಗಳಲ್ಲಿ ಒಂದು ದೊಡ್ಡ ಸಂಪರ್ಕಜಾಲವಾಗಿ ಸೇರಿಕೊಂಡು ಹಿಂದು ಮಹಿಳೆಯರು ಅಥವಾ ಮಹಿಳಾ ಉದ್ಯೋಗಿಗಳನ್ನು ಇಸ್ಲಾಂಗೆ ಬಲವಂತದ ಮತಾಂತರ ನಡೆಸಲು ದೊಡ್ಡ ಜಾಲ ನಡೆಸುತ್ತಿದ್ದಾರೆಂಬ ಸಂಶಯ ವ್ಯಕ್ತವಾಗಿದೆ.

ನಿದಾ ಎಲ್ಲಿದ್ದಾಳೆ

ಆರೋಪಿ ನಿದಾ ಖಾನ್‌ಗಾಗಿ ಪೊಲೀಸರು ಭಿವಂಡಿ ಸಹಿತ ಹಲವು ಸ್ಥಳಗಳಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ನಿದಾ ಬಂಧಿಸಿದರೆ ಹಲವು ಪ್ರಶ್ನೆಗಳಿಗೆ ಉತ್ತರ ಸಿಗಬಹುದೆಂಬ ನಂಬಿಕೆಯಲ್ಲಿ ಪೊಲೀಸರಿದ್ದಾರೆ.

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

ಪುಟ ೩➜ ಈ ಅವಧಿಯಲ್ಲಿ ಪಕ್ಷದ ವರಿಷ್ಠರ ಭೇಟಿಯಾಗುವ ಸಾಧ್ಯತೆ ಇದೆ. ಸಂಪುಟ ವಿಸ್ತರಣೆ ಮಾಡಬೇಕೆಂದು ಒತ್ತಾಯಿಸುತ್ತಿರುವ ಸಚಿವ ಸ್ಥಾನದ ಆಕಾಂಕ್ಷಿಗಳ ಒತ್ತಡವನ್ನು ಹೈಕಮಾಂಡ್ ಗಮನಿಸಿದ್ದು, ಇತ್ತೀಚೆಗೆ ನಡೆದ ದಾವಣಗೆರೆ ಉಪಚುನಾವಣೆಯಲ್ಲಿ ಉಂಟಾದ ಬಂಡಾಯದ ಬಗ್ಗೆ ವರದಿ ಕೇಳುವ ಸಾಧ್ಯತೆ ಇರುವುದರಿಂದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬಳಿ ವಿವರ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆಂದು ಮಾಹಿತಿ ಇದೆ. ದಾವಣಗೆರೆ ಉಪಚುನಾವಣೆಯಲ್ಲಿ ಹಿನ್ನಡೆಯಾದರೆ ಜಮೀರ್ ತಲೆದಂಡ ಎಂದು ಹೇಳಲಾಗುತ್ತಿದ್ದು, ಚುನಾವಣೆ ಪೂರ್ವ, ಚುನಾವಣೆ ಸಂದರ್ಭದಲ್ಲಿ ಸಚಿವ ಜಮೀರ್ ಅವರ ಕಾರ್ಯವೈಖರಿ ಹೈಕಮಾಂಡ್‌ಗೆ ಅಸಮಾಧಾನ ತಂದಿದೆ.

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!

ಪುಟ ೩➜ ಈಗಲಾದರೂ ಕಾಂಗ್ರೆಸ್ ತನ್ನ ತಪ್ಪು ಸರಿಪಡಿಸಿಕೊಳ್ಳದಿದ್ದರೆ, ಮುಸ್ಲಿಂ ಸಮುದಾಯ ಪಾಠ ಕಲಿಸುವ ಕೆಲಸ ಮಾಡುತ್ತದೆ ಎಂದರು. ಮುಸ್ಲಿಂ ನಾಯಕರಿಗೆ ತೊಂದರೆ ನೀಡಿದರೆ ಸಮುದಾಯದವರು ಕಾಂಗ್ರೆಸ್ಸಿಂದ ದೂರ ಸರಿದು, ಪ್ರಾದೇಶಿಕ ಪಕ್ಷ ಹುಟ್ಟು ಹಾಕುತ್ತೇವೆ. ಮುಸ್ಲಿಂ ಸೇರಿದಂತೆ ಅಹಿಂದ ವರ್ಗದ ಎಲ್ಲಾ ಜಾತಿ, ಸಮುದಾಯ ಒಟ್ಟುಗೂಡಿದರೆ, ಕಾಂಗ್ರೆಸ್, ಬಿಜೆಪಿಯಂತಹ ರಾಷ್ಟ್ರೀಯ ಪಕ್ಷ ಅಥವಾ ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷದಂತಹ ಪರ್ಯಾಯ ಶಕ್ತಿಯ ಉದಯವಾಗಲಿದೆ. ಕಾಂಗ್ರೆಸ್ಸಿನಲ್ಲಿ ಜಮೀರ್ ಅಹಮ್ಮದ್ ತಲೆದಂಡವಾದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೆಲ ಕಚ್ಚಲಿದೆ. ಕೆ.ಅಬ್ದುಲ್‌ಜಬ್ಬಾರ್‌ಗೆ ಏನಾದರೂ ತೊಂದರೆಯಾದರೆ ದಾವಣಗೆರೆ ನಗರ, ಜಿಲ್ಲೆಯಲ್ಲಷ್ಟೇ ಅಲ್ಲ, ಎಲ್ಲಾ ಕಡೆ ಕಾಂಗ್ರೆಸ್ ಸರ್ವನಾಶವಾಗುತ್ತದೆ. ದಾವಣಗೆರೆ ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ವಿರುದ್ಧ ಅಬ್ದುಲ್ ಜಬ್ಬಾರ್ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ತೆಗೆದು ಹಾಕಿದ್ದು ಖಂಡನೀಯ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮುಸ್ಲಿಂ ನಾಯಕರ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡರೆ, ವಿಶ್ವ ಮುಸ್ಲಿಂ ಪರಿಷತ್ತನ್ನು ರಾಜಕೀಯ ಪಕ್ಷವಾಗಿ ಮಾಡುತ್ತೇವೆ. ಜಮೀರ್ ಅಹಮದ್ ಅವರನ್ನೇ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿ, ಲಕ್ಷಾಂತರ ಜನರನ್ನು ಸೇರಿಸಿ ಸಮಾವೇಶ ಮಾಡುತ್ತೇವೆ. ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ಕಡೆಗಣಿಸಿದರೆ, ರಾಜಕೀಯವಾಗಿ ಮುಗಿಸಲು ಹೊರಟರೆ ಕೈಕಟ್ಟಿಕೊಂಡು ಕೂರುವ ಸ್ಥಿತಿ ತಂದುಕೊಳ್ಳುತ್ತದೆ. ಮುಸಲ್ಮಾನರ ಸ್ವಾಭಿಮಾನ ಕೆಣಕಿದ ಕಾಂಗ್ರೆಸ್ ಪಕ್ಷ ದಾವಣಗೆರೆ ದಕ್ಷಿಣದಲ್ಲಿ ನೂರಕ್ಕೆ ನೂರರಷ್ಟು ಸೋಲನುಭವಿಸಲಿದೆ ಎಂದು ಅವರು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನನ್ನ 40 ವರ್ಷದ ಸ್ನೇಹಿತ ಸಾದಿಕ್ ಪೈಲ್ವಾನ್ ಅವರ ನಾಮಪತ್ರ ಭರ್ತಿ ಮಾಡಿ, ಉಮೇದುವಾರಿಕೆ ಹಾಕಿಸಿದ್ದೇ ನಾನು. ಸಾದಿಕ್‌ಗೆ ನಾಮಪತ್ರ ಸಲ್ಲಿಸಲು ಕೆ.ಅಬ್ದುಲ್ ಜಬ್ಬಾರ್, ನಸೀರ್ ಅಹಮ್ಮದ್, ಜಮೀರ್ ಅಹಮ್ಮದ್ ಯಾರೂ ಹೇಳಿಲ್ಲ, ಆದರೂ ಚುನಾವಣೆ ಫಲಿತಾಂಶ ಬರುವ ಮುನ್ನವೇ ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರನ್ನು ಗುರಿಯಾಗಿಸಿಕೊಂಡು, ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ, ಇದರಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೈವಾಡವಿದೆ ಎಂದು ಅವರು ಆರೋಪಿಸಿದರು.

ನನ್ನ ಗೆಳೆಯ ಸಾದಿಕ್ ಪೈಲ್ವಾನ್ ಕಾಂಗ್ರೆಸ್ಸಿನಲ್ಲಿ ದುಡಿದರೂ ತನ್ನನ್ನು ಗುರುತಿಸಲಿಲ್ಲವೆಂದು ಬೇಸರ ತೋಡಿಕೊಂಡಿದ್ದ ಕಾರಣ ನನ್ನದೇ ಹಣದಲ್ಲಿ ಠೇವಣಿ ಕಟ್ಟಿ ನಾಮಪತ್ರ ಸಲ್ಲಿಸಲು ಹೇಳಿದ್ದೆ, ಆದರೆ ಆತ ಇದ್ದಕ್ಕಿದ್ದಂತೆ ಯು ಟರ್ನ್ ಹೊಡೆತ್ತಾನೆಂದು ನಾನಂತೂ ಅಂದುಕೊಂಡಿರಲಿಲ್ಲ, ಚುನಾವಣಾ ಕಣದಲ್ಲಿ ಉಳಿಯುವುದು, ಬಿಡುವುದು ಅವನ ಇಷ್ಟ.

ಸಾದಿಕ್ ಪೈಲ್ವಾನ್‌ಗೆ ನಾಮಪತ್ರ ಸಲ್ಲಿಸಲು, ಹಿಂದಕ್ಕೆ ಪಡೆಯದಂತೆ ಹೇಳಿದ್ದು ನಾನೇ ಹೊರತು ಅಬ್ದುಲ್ ಜಬ್ಬಾರ್, ಜಮೀರ್ ಅಹಮ್ಮದ್, ನಸೀರ್ ಅಹಮ್ಮದ್ ಅಲ್ಲ, ಉಪ ಚುನಾವಣೆಗೆ ಇಡೀ ಕ್ಯಾಬಿನೆಟ್ ದಾವಣಗೆರೆಗೆ ಬಂದು ಠಿಕಾಣಿ ಹೂಡಿತ್ತು. ಇಲ್ಲಿಯೇ ಇದ್ದವರು ಒಂದು ಸಲ ಅಬ್ದುಲ್ ಜಬ್ಬಾರ್ ಮನೆಗೆ ಭೇಟಿ ನೀಡಬೇಕಿತ್ತು. ಸಾದಿಕ್ ಮನೆಯಲ್ಲಿ ಊಟ ಮಾಡಿದ ಸಿಎಂ ಸಿದ್ದರಾಮಯ್ಯ ಕೂಡ ಅಬ್ದುಲ್ ಜಬ್ಬಾರ್ ಮನೆಗೆ ಹೋಗಲಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಪರಿಷತ್ ಮುಖಂಡರಾದ ಪರ್ವೇಜ್, ಮಂಜುನಾಥ, ಅಲ್ಲಾಭಕ್ಷಿ ಸುದ್ದಿಗೋಷ್ಠಿಯಲ್ಲಿದ್ದರು.

ಸಿಎಂ ರೇವಂತ್ ಜಿಡಿಪಿ ಮಾದರಿ ಹಾಸ್ಯಾಸ್ಪದ

ಪುಟ ೧➜ ಸಂವಿಧಾನಾತ್ಮಕ ಕರ್ತವ್ಯವೂ ಆಗಿದೆ' ಎಂದು ಹೇಳಿದರು. ಸರ್ಕಾರ ಮಂಡಿಸಿರುವ ಹೊಸ ಪ್ರಸ್ತಾವನೆಯಿಂದ ಎಲ್ಲಾ ರಾಜ್ಯಗಳಿಗೆ ಹೆಚ್ಚಿನ ಸ್ಥಾನಗಳು ಸಿಗಲಿದ್ದು, 'ಒಂದು ಮತಕ್ಕೆ ಒಂದು ಮೌಲ್ಯ' ಎಂಬ ಮೂಲತತ್ವದ ಆಧಾರದ ಮೇಲೆ ಪ್ರತಿನಿಧಿತ್ವ ಹೆಚ್ಚುತ್ತದೆ ಎಂದು ವಾದಿಸಿದರು.

ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಮೂರು ಪರ್ಯಾಯಗಳನ್ನು ಮುಂದಿಟ್ಟಿದ್ದು ಈಗಿನ 543 ಸ್ಥಾನಗಳನ್ನು ಹಾಗೆಯೇ ಉಳಿಸಿಕೊಳ್ಳುವುದು, ಜನಸಂಖ್ಯೆ ಮತ್ತು ರಾಜ್ಯದ ಜಿಎಸ್‌ಡಿಪಿ ಆಧಾರಿತ ಸಂಯೋಜಿತ ಮಾದರಿ ಹಾಗೂ ಯೂರೋಪಿನ ಮಾದರಿಯ ಅನುಪಾತೀಯ ವಿಧಾನ ಇವುಗಳನ್ನು ಸೂರ್ಯ ತಿರಸ್ಕರಿಸಿದರು.

'ಜಿಎಸ್‌ಡಿಪಿ ಆಧಾರದ ಮೇಲೆ ಮತದ ಮೌಲ್ಯ ನಿರ್ಧರಿಸಿದರೆ ಶ್ರೀಮಂತರಿಗೆ ಹೆಚ್ಚು ಮೌಲ್ಯ ಸಿಗುತ್ತದೆ. ಹಾಗಾದರೆ ಮುಕೇಶ್ ಅಂಬಾನಿ ಅವರಿಗೆ ಲಕ್ಷ ಮತಗಳ ಮೌಲ್ಯ, ಸಾಮಾನ್ಯ ಜನರಿಗೆ ಒಂದೇ ಮತ ಎಂಬ ಪರಿಸ್ಥಿತಿ ಬರಬಹುದು,'' ಎಂದು ವ್ಯಂಗ್ಯವಾಡಿದರು. ಹಾಗೆಯೇ, ಜಿಎಸ್‌ಡಿಪಿ ಏರಿಳಿತದ ಮೇಲೆ ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸುವುದು ಪ್ರಾಯೋಗಿಕವಲ್ಲ ಎಂದು ಅವರು ಹೇಳಿದರು. 'ಒಂದು ವರ್ಷ ಮಳೆ ಚೆನ್ನಾಗಿದ್ದರೆ ಹೆಚ್ಚುವರಿ ಸ್ಥಾನ, ಮುಂದಿನ ವರ್ಷ ಕುಸಿತವಾದರೆ ಕಡಿತ, ಇದು ಸಾಧ್ಯವೇ?' ಎಂದು ಪ್ರಶ್ನಿಸಿದರು. ನಾನು ಹೆಮ್ಮೆಯ ಕನ್ನಡಿಗನಾಗಿ ರೇವಂತ್ ರೆಡ್ಡಿ ಅವರ ಈ ಪ್ರಸ್ತಾಪವನ್ನು ತಿರಸ್ಕರಿಸುತ್ತೇನೆ ಎಂದೂ ಹೇಳಿದರು.

ಈ ಮಸೂದೆಗಳ ಕುರಿತು ಕಾಂಗ್ರೆಸ್ ಸಂಸದರ ಆಕ್ಷೇಪಗಳನ್ನು ತೇಜಸ್ವಿ ಸೂರ್ಯ ತಿರಸ್ಕರಿಸಿದರು. ಹಾಗೆಯೇ, ಆಂಧ್ರ ಪ್ರದೇಶವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಇಬ್ಭಾಗ ಮಾಡಿದ ಕಾಂಗ್ರೆಸ್ ಈಗ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆಗ ಆಂಧ್ರ ಪ್ರದೇಶವನ್ನು ಕಾಂಗ್ರೆಸ್, ಬ್ರಿಟಿಷರು ಭಾರತವನ್ನು ಇಬ್ಭಾಗ ಮಾಡಿದ್ದಕ್ಕಿಂತ ಕೆಟ್ಟದಾಗಿತ್ತು ಎಂದು ಆರೋಪಿಸಿದರು.

ಕಾಂಗ್ರೆಸ್ ತುಕ್ಡೆ ತುಕ್ಡೆ ಗ್ಯಾಂಗ್ ಜತೆಯಲ್ಲಿದ್ದರೆ, ಡಿಎಂಕೆ ಪ್ರತ್ಯೇಕತಾವಾದದ ಬಗ್ಗೆ ಮಾತನಾಡುತ್ತದೆ. ಆದರೆ, ನಾವು ಇದನ್ನು ಬಲವಾಗಿ ತಿರಸ್ಕರಿಸುತ್ತೇವೆ ಎಂದೂ ಹೇಳಿದರು. ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂಬ ಭಯವನ್ನು ತಳ್ಳಿಹಾಕಿದ ಸೂರ್ಯ, 'ಇದು ತಪ್ಪು ಪ್ರಚಾರ. ದಕ್ಷಿಣ ಭಾರತಕ್ಕೆ ಇದಕ್ಕಿಂತ ಉತ್ತಮ ಒಪ್ಪಂದ ಬೇರೊಂದಿಲ್ಲ' ಎಂದು ಸ್ಪಷ್ಟಪಡಿಸಿದರು. ಈ ವೇಳೆ ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ದಕ್ಷಿಣ ರಾಜ್ಯಗಳಿಗೆ ನೀಡಿದ ನೆರವು ಶೇ.250ಕ್ಕೂ ಹೆಚ್ಚಾಗಿದೆ ಎಂದು ಹೇಳಿದ ಅವರು, ವಿರೋಧ ಪಕ್ಷಗಳ ಟೀಕೆಗಳನ್ನು ತಳ್ಳಿಹಾಕಿದರು.

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

ಪುಟ ೩➜ ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್‌ನಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್‌ನಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ. ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚಿಸಿದರು.

ತೊಂದರೆಯಾದರೆ ಡಿಸಿಗಳೇ ಹೊಣೆ: ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಡಿಸಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ, ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಸಿಎಂ ಸೂಚಿಸಿದರು. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡುಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

22 ಕೊಳವೆ ಬಾವಿಗಳು ಬಾಡಿಗೆಗೆ: ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದಾಗಿದೆ ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

ಪ್ರಸ್ತುತ 321.93 ಟಿಎಂಸಿ ನೀರು ಲಭ್ಯ: ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿಎಂಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿಎಂಸಿ ನೀರು ಲಭ್ಯವಿತ್ತು. ಪ್ರಸ್ತುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ. ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿಪಡಿಸಿ ಮಳೆಗಾಲ ವಿಳಂಬವಾಗಿ ಆರಂಭ ವಾಗುವ ಸಾಧ್ಯತೆಯಿರುವುದರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆ ಖಾತ್ರಿಪಡಿಸಬೇಕು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ



ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ರಸಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕು. ಇದಕ್ಕಾಗಿ ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಬಿಗಿಗೊಳಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು. ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು. ಹಾವೇರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದ ರಸಗೊಬ್ಬರ ಮಾರಾಟವಾಗಿದ್ದು, ಇದಕ್ಕೆ ಕಾರಣವೇನು? ರಸಗೊಬ್ಬರ ಮಾರಾಟದ ಮೇಲೆ ನಿರಂತರ ನಿಗಾವಹಿಸಿ, ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ದಕ್ಷಿಣದ ಸ್ಥಾನ 195ಕ್ಕೆ ಏರಿಕೆ

ಪುಟ ೧➜ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಶೇಕಡಾವಾರು ಪ್ರಮಾಣವೂ 23.76ರಿಂದ23.87ಕ್ಕೆ,ಅಂದರೆಸುಮಾರುಶೇ.24ಕ್ಕೆಏರಿಕೆಯಾಗಲಿದೆ ಎಂದು ವಿವರಿಸಿದರು. ರಾಜ್ಯವಾರು ವಿವರಗಳನ್ನು ನೀಡಿದ ಶಾ, ಕರ್ನಾಟಕದಲ್ಲಿ ಲೋಕಸಭೆ ಸ್ಥಾನಗಳು 28ರಿಂದ 42ಕ್ಕೆ, ಆಂಧ್ರ ಪ್ರದೇಶದಲ್ಲಿ 25ರಿಂದ 38ಕ್ಕೆ, ತೆಲಂಗಾಣದಲ್ಲಿ 17ರಿಂದ 26ಕ್ಕೆ, ತ.ನಾಡಿನಲ್ಲಿ 39ರಿಂದ 59ಕ್ಕೆ ಹಾಗೂ ಕೇರಳದಲ್ಲಿ 20ರಿಂದ 30ಕ್ಕೆ ಏರಿಕೆಯಾಗಲಿದೆ ಎಂದರು. ಲೋಕಸಭೆಯ ಒಟ್ಟು ಸ್ಥಾನಗಳನ್ನು ಗರಿಷ್ಠ 850ರವರೆಗೆ ಹೆಚ್ಚಿಸುವ ಅವಕಾಶ ಮಸೂದೆಯಲ್ಲಿ ಉಲ್ಲೇಖವಾಗಿದ್ದರೂ, ವಾಸ್ತವಿಕವಾಗಿ 816 ಸ್ಥಾನಗಳಲ್ಲೇ ನಿಗದಿಯಾಗಲಿದೆ ಎಂದು ಶಾ ಸ್ಪಷ್ಟಪಡಿಸಿದರು.

ಇದು ಇಂದಿನ ಸಂಖ್ಯೆಯಿಗಿಂತ ಶೇ.50ರಷ್ಟು ಹೆಚ್ಚಳವಾಗಿದೆ. ಮಹಿಳಾ ಮೀಸಲಾತಿ ಕುರಿತು ಮಾತನಾಡಿದ ಶಾ, ಶೇ.33 ಮೀಸಲಾತಿ 2029ರ ಲೋಕಸಭೆ ಚುನಾವಣೆಯಿಂದ ಮಾತ್ರ ಜಾರಿಗೆ ಬರುತ್ತದೆ ಎಂದು ಹೇಳಿದರು. ಅದರವರೆಗೆ ನಡೆಯುವ ಎಲ್ಲಾ ಚುನಾವಣೆಗಳು ಇಂದಿನ ವ್ಯವಸ್ಥೆಯಲ್ಲೇ ನಡೆಯಲಿವೆ. 2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯೂ ಇದೇ ವ್ಯವಸ್ಥೆಯಡಿ ನಡೆಯಲಿದೆ ಎಂದರು. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರನ್ನು ಉದ್ದೇಶಿಸಿ ಮಾತನಾಡಿದ ಶಾ, ಉತ್ತರ ಪ್ರದೇಶದಲ್ಲಿ ಗೆಲುವಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ವ್ಯಂಗ್ಯವಾಡಿದರು. ಜಾತಿ ಜನಗಣತಿ ಕುರಿತ ಬೇಡಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಾ, ಸರ್ಕಾರ ಈಗಾಗಲೇ ಜಾತಿಗಣತಿ ನಡೆಸಲು ನಿರ್ಧಾರ ಕೈಗೊಂಡಿದೆ ಎಂದರು.

ಎಚ್‌ಡಿಕೆ ಬೆದರಿಕೆ ಆರೋಪ: ಮಧ್ಯಸ್ಥಿಕೆಗೆ ನ್ಯಾ.ಓಕಾ ನೇಮಕ

• **ಬೆಂಗಳೂರು:** ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಬೆದರಿಕೆ ಹಾಕಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಓಕಾ ಅವರನ್ನು ಹೈಕೋರ್ಟ್ ಗುರುವಾರ ನೇಮಿಸಿದೆ.

ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಆರೋಪದ ಪ್ರಕರಣದಲ್ಲಿ ತಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು. ಕಳೆದ ಬಾರಿ ನಡೆದ ವಿಚಾರಣೆಯಲ್ಲಿ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿದ್ದ ನ್ಯಾ. ಎ.ಎಸ್. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸುವುದಾಗಿ ಹೇಳಲಾಗಿತ್ತು. ಇದಕ್ಕೆ ಉಭಯ ಪಕ್ಷಕಾರರು ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ, ನ್ಯಾ. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸಲಾಗಿದೆ. ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಕಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರೆ ವಿಚಾರಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು ಎಂದು ಪೀಠ ಆದೇಶಿಸಿತು.

ಈ ನಡುವೆ ಕುಮಾರಸ್ವಾಮಿ ಪರ ಹಿರಿಯ ವಕೀಲ ಹಷ್ಮತ್ ಪಾಷಾ ಅವರು ಮಧ್ಯಸ್ಥಿಕೆದಾರರು ಉಭಯ ಪಕ್ಷಕಾರರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ, ಚರ್ಚಿಸಬೇಕು ಎಂದರು. ಇದಕ್ಕೆ ಪೀಠವು ಮಧ್ಯಸ್ಥಿಕೆದಾರರು ಎಲ್ಲವನ್ನೂ ನಿಭಾಯಿಸಲಿದ್ದಾರೆ. ಏತಕ್ಕಾಗಿ ಈ ಪ್ರಕರಣವನ್ನು ಅವರಿಗೆ ಕಳುಹಿಸಲಾಗಿದೆ ಎಂಬುದು ಗೊತ್ತಿರುತ್ತದೆ. ಸ್ಥಳವನ್ನು ಅವರು ನಿಗದಿ ಮಾಡುತ್ತಾರೆ. ಇದು ಮತ್ತೆ ಇಲ್ಲಿಗೆ ಬರುವುದಿಲ್ಲ ಎಂಬ ವಿಶ್ವಾಸ ಹೊಂದೋಣ ಎಂದಿತು.

ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಸಿಎಂ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ತೃತೀಯ ಭಾಷೆಗೆ ಗ್ರೇಡ್: ಹೈ ತಡೆ

• **ಬೆಂಗಳೂರು:** ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ತಡೆ ನೀಡಿದ್ದು, ಅಂಕಗಳನ್ನೇ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮಹತ್ವದ ನಿರ್ದೇಶನ ನೀಡಿದೆ.

ಸರ್ಕಾರದ ಇತ್ತೀಚಿನ ನಿರ್ಧಾರವನ್ನು ಪ್ರಶ್ನಿಸಿ ಸಹನಾ ಆರ್. ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಆದೇಶ ಹೊರಡಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಆರ್.ಪಿ. ನಾಯ್ಕ್, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು 2024-25ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ, ತೃತೀಯ ಭಾಷೆಗಳಿಗೆ 80 ಅಂಕಗಳ ಲಿಖಿತ ಪರೀಕ್ಷೆ ಮತ್ತು 20 ಅಂಕಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ನೀಡಬೇಕು. ಆದರೆ, ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ಸರ್ಕಾರವು ಅಂಕಗಳ ಬದಲಿಗೆ ಗ್ರೇಡ್ ನೀಡಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರಿದು, ಯುಪಿಎಸ್‌ಸಿ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರೇಡ್‌ಗಳನ್ನು ಪರಿಗಣಿಸದೆ ಅಂಕಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಸರ್ಕಾರದ ಈ ಹಠಾತ್ ಬದಲಾವಣೆಯಿಂದಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉದ್ಯೋಗ ಮತ್ತು ಉನ್ನತ ಶಿಕ್ಷಣದ ಸಮಯದಲ್ಲಿ ತೊಂದರೆಯಾಗಲಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಹಳೆಯ ಮಾರ್ಗಸೂಚಿ ಅನುಸರಿಸಿ

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಉತ್ತರಿಸಿ, ಗ್ರೇಡಿಂಗ್ ವ್ಯವಸ್ಥೆಯ ಬಗ್ಗೆ ಸದ್ಯ ಕರಡು ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು. ವಾದ-ಪ್ರತಿವಾದಗಳನ್ನು ಆಲಿಸಿದ ಪೀಠವು, ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಹಳೆಯ ಮಾರ್ಗಸೂಚಿಗಳನ್ನೇ ಅನುಸರಿಸಬೇಕು ಎಂದು ಸ್ಪಷ್ಟಪಡಿಸಿತು.

ಕಿರುಸುದ್ದಿ

ಯೋಗೇಶಗೌಡ ಸಾವಿಗೆ ನ್ಯಾಯ ಸಿಕ್ಕಿದೆ: ಅಕ್ಕಮಹಾದೇವಿ

• **ಹುಬ್ಬಳ್ಳಿ:** ನನ್ನ ಸಹೋದರನ(ಯೋಗೇಶಗೌಡ) ಸಾವಿಗೆ ಕೊನೆಗೂ ನ್ಯಾಯ ಸಿಕ್ಕಿದೆ. ಅವನ ಹತ್ಯೆ ಮಾಡಿದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯಾಗಬೇಕು ಎಂದು ಯೋಗೇಶಗೌಡ ಅವರ ಸಹೋದರಿ ಅಕ್ಕಮಹಾದೇವಿ ತಿಳಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತಾಯಿ ನ್ಯಾಯಾಲಯ ಮೊರೆ ಹೋದರು. ಬಸವರಾಜ ಕೊರವರ ಸೇರಿದಂತೆ ಅನೇಕರು ಸಹಕಾರ ನೀಡಿದ್ದಾರೆ. ಆತನನ್ನು ಮೋಸದಿಂದ ಕೊಲೆ ಮಾಡಿದರು. ಅವಾಗಲೇ ಆತನ ಸಾವಿಗೆ ನ್ಯಾಯ ದೊರೆಯಬೇಕಿತ್ತು ಎಂದರು. ಕೊಲೆ ಮಾಡಿಸಿದ ವ್ಯಕ್ತಿಗೆ ಅಧಿಕಾರವಿದೆ ಎಂಬ ದರ್ಪದಲ್ಲಿದ್ದ. ದೇವರು ಹಾಗೂ ಕಾನೂನು ನಮ್ಮ ಕೈ ಹಿಡಿದಿದೆ. ನ್ಯಾಯ ದೊರಕಿದ್ದು, ಸಂತಸ ತರಿಸಿದೆ. ನಮ್ಮ ಸಹೋದರನ ಆತ್ಮಕ್ಕೆ ಶಾಂತಿ ಸಿಕ್ಕಿದೆ. ಬಸವರಾಜ ಮುತಗಿ ಅವಾಗಲೇ ಸ್ವಲ್ಪ ಮಾಹಿತಿ ನೀಡಿದ್ದರೆ ನನ್ನ ಸಹೋದರ ಸಾಯುತ್ತಿರಲಿಲ್ಲ, ಈಗ ನಮ್ಮ ಕುಟುಂಬ ನೆಮ್ಮದಿಯಿಂದ ಇರುತ್ತಿತ್ತು. ಆದರೆ, ಹಲವು ವರ್ಷಗಳ ಬಳಿಕ ನಮ್ಮ ಸಹೋದರನಿಗೆ ನ್ಯಾಯ ದೊರೆಕಿದೆ ಎಂದು ಹೇಳಿದರು. ನಮಗೆ ಯಾರ ಜೀವ ಬೆದರಿಕೆ ಇಲ್ಲ, ಹಿಂದೆ ನನ್ನ ಸಹೋದರನಿಗೆ ಹಾಗೂ ಕುಟುಂಬಕ್ಕೆ ಜೀವ ಬೆದರಿಕೆ ಇತ್ತು. ಧೈರ್ಯದಿಂದ ಹೋರಾಟ ಮಾಡಿದ್ದರಿಂದ ನ್ಯಾಯ ದೊರೆಕಿದೆ. ನ್ಯಾಯಾಲಯದ ಮೇಲೆ ನಂಬಿಕೆ ಇಟ್ಟಿದ್ದರಿಂದ ನ್ಯಾಯ ಸಿಕ್ಕಿದೆ ಎಂದರು.

ಹೃದಯಘಾತದಿಂದ ನ್ಯಾಯಾಧೀಶೆ ಸಾವು

• **ಮಧುಗಿರಿ:** ತಾಲೂಕಿನ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಕಾಂತಮ್ಮ(43) ಅವರು ಹೃದಯಘಾತದಿಂದ ಗುರುವಾರ ಬೆಳಗಿನ ಜಾವ ವಸತಿ ಗೃಹದಲ್ಲಿ ಮೃತಪಟ್ಟಿದ್ದಾರೆ. ಪಟ್ಟಣದ ಪಿಡಬ್ಲ್ಯುಡಿ ಕ್ವಾಟ್ರಸ್‌ನಲ್ಲಿ ಉಪ ವಿಭಾಗ ಅಧಿಕಾರಿಗಳ ನಿವಾಸದ ಮನೆಯಲ್ಲಿ ವಾಸವಾಗಿದ್ದರು.

ಇವರಿಗೆ ಮೊದಲಿನಿಂದಲೂ ಲೋ ಬಿಪಿ ಮತ್ತು ಆರೋಗ್ಯ ಸಮಸ್ಯೆ ಇತ್ತು ಎಂದು ತಿಳಿದು ಬಂದಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಅಂಚೆದೊಡ್ಡಿ ಗ್ರಾಮದವರು. ಅವಿವಾಹಿತರಾಗಿದ್ದು 2025 ಜೂನ್ ತಿಂಗಳಲ್ಲಿ ಮಧುಗಿರಿ ಪಟ್ಟಣದ ಹೆಚ್ಚುವರಿ ಸಿವಿಲ್ ಜಡ್ಜ್ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರು. ವಸತಿ ಗೃಹಕ್ಕೆ ಮಧುಗಿರಿಯ ನ್ಯಾಯಾಧೀಶರು ಹಾಗೂ ವಕೀಲರ ಸಂಘದ ಅಧ್ಯಕ್ಷ ಪಿ.ಸಿ. ಕೃಷ್ಣಾ ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

ಸಾಕಾನೆ ದಾಳಿ: ಕಾವಾಡಿಗ ರಾಜುಗೆ ಗಾಯ

• **ಹಾಸನ:** ತಾಲೂಕಿನ ಬಿಕ್ಕೋಡಿನಲ್ಲಿರುವ ತಾತ್ಕಾಲಿಕ ಆನೆ ಬಿಡಾರದಲ್ಲಿ ಗುರುವಾರ ಬೆಳಗ್ಗೆ ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಮೇಲೆ ಸಾಕಾನೆ ಸುಗ್ರೀವ ದಾಳಿ ಮಾಡಿದ್ದು ಗಂಭೀರ ಗಾಯಗೊಂಡಿದ್ದಾರೆ. ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಅವರ ಎಡಬದಿಯ ಹೊಟ್ಟೆಗೆ ಏಕಾಏಕಿ ಕೋರೆಯಿಂದ ತಿವಿದು ಇದರಿಂದ ಕರುಳು ಹೊರಕ್ಕೆ ಬಂದಿದ್ದು, ಬೇಲೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಹಾಸನದ ಹಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಗಂಭೀರ ಗಾಯಗೊಂಡಿರುವ ಅವರನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜು ಅವರನ್ನು ಡಿಸಿಎಫ್ ಸೌರಭ್‌ಕುಮಾರ್ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದರು.

ಕಾಡುಗಳ ನಾಶದಿಂದ ಜಾಗತಿಕ ತಾಪಮಾನ ಏರಿಕೆ: ಈಶ್ವರ ಖಂಡ್ರೆ

ಪರಿಸರ ರಕ್ಷಣೆ ಎಲ್ಲರ ಹೊಣೆ

• **ಬೆಂಗಳೂರು:** ಕರ್ನಾಟಕವು ಜಾಗತಿಕ ಜೀವ ವೈವಿಧ್ಯತೆಯ ಅದ್ಭುತ ತಾಣವಾದ ಪಶ್ಚಿಮ ಘಟ್ಟಗಳನ್ನು ಹೊಂದಿದ್ದು, ಹಲವು ಬಗೆಯ ವಿಶಿಷ್ಟ ಸಸ್ಯ ಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಹಾಗೂ ಕೀಟ ಸಂಕುಲಗಳ ತಾಣವಾದ ಈ ಸಮೃದ್ಧ ಕಾನನವನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಆಯೋಜಿಸಿದ್ದ ಜಾಗತಿಕ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಶೃಂಗಸಭೆ 2026ರ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ನಾವಿಂದು, ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮಗಳ ಕಾಲಘಟ್ಟದಲ್ಲಿ ನಿಂತಿದ್ದು, ಈ ಸಂದರ್ಭದಲ್ಲಿ ಸುಸ್ಥಿರ ಅಭಿವೃದ್ಧಿ, ಹವಾಮಾನ ಚೇತರಿಕೆ ಮತ್ತು ಸಮಗ್ರ ಪ್ರಗತಿಯ ಕಾರ್ಯತಂತ್ರಕ್ಕೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಾಲಕ ಶಕ್ತಿಯಾಗಿದೆ ಎಂದರು.

ಹಲವು ಜೀವ ನದಿಗಳ ಮೂಲವೇ ಪಶ್ಚಿಮ ಘಟ್ಟವಾಗಿದ್ದು, ಮಳೆಯ ಮಾರುತಗಳನ್ನು ತಡೆದು ದೇಶಾದ್ಯಂತ ವ್ಯಾಪಕವಾಗಿ ಮಳೆ ಸುರಿಸುವಂತೆ ಮಾಡುವ ಪಶ್ಚಿಮ ಘಟ್ಟಗಳನ್ನು ಉದ್ದಿಮೆದಾರರು ಕೇವಲ ಒಂದು ಸಂಪನ್ಮೂಲವಾಗಿ ನೋಡದೆ, ಭವಿಷ್ಯದ ಪೀಳಿಗೆಯ ಜೀವನಾಡಿಯಾಗಿ ನೋಡಬೇಕು ಎಂದು ಹೇಳಿದರು.

ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು. ಪ್ರಕೃತಿಯೂ ಉಳಿಯಬೇಕು, ಜೀವನವೂ ನಡೆಯಬೇಕು. ಅಭಿವೃದ್ಧಿಯೂ ಆಗಬೇಕು. ಹಸಿರು ಉಳಿಸಿಕೊಂಡು, ಬೆಳೆಸಿಕೊಂಡು ಅಭಿವೃದ್ಧಿ ಸಾಧಿಸುವುದೇ ಸುಸ್ಥಿರತೆಯ ಮಂತ್ರ. ಇದು ಇಂದಿನ ಅಗತ್ಯ ಮತ್ತು ಅನಿವಾರ್ಯ. ಈ ಹಾದಿಯಲ್ಲಿ ನಡೆಯಲು ಸರ್ಕಾರ ಬದ್ಧವಾಗಿದೆ. ಇದಕ್ಕೆ ಉದ್ದಿಮೆಗಳ ಸಹಕಾರ ನೀಡಬೇಕು ಎಂದರು.

ಬೆಂಗಳೂರು ಕಾಂಕ್ರೀಟ್ ಕಾಡು

ಬೆಂಗಳೂರು ನಗರ ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಹವಾ ನಿಯಂತ್ರಿತ ನಗರ ಎಂಬ ಖ್ಯಾತಿ ಪಡೆದಿತ್ತು. ಇಂದು ಬೆಂಗಳೂರು ಕೂಡ ಕಾಂಕ್ರೀಟ್ ಕಾಡಾಗುತ್ತಿದ್ದು, ತಾಪಮಾನದ ಏರಿಕೆಯ ಅನುಭವ ಆಗುತ್ತಿದೆ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಧೂಳು, ಹೊಗೆಯಿಂದಾಗಿ ವಾಯುಗುಣಮಟ್ಟವೂ ಕುಸಿಯುತ್ತಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರ ದೆಹಲಿಯಂತೆ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ತಡೆಯಲು ಈಗಿನಿಂದಲೇ ಕ್ರಮ ವಹಿಸುವುದು ಅತ್ಯಗತ್ಯ ಎಂದು ಸಚಿವ ಖಂಡ್ರೆ ಹೇಳಿದರು.

ಅರಣ್ಯೀಕರಣ, ಕ್ಷೀಣಿಸಿದ ಅರಣ್ಯಗಳ ಮರು ಸ್ಥಾಪನೆ ಮತ್ತು ನಗರ ಹಸಿರು ಹೊದಿಕೆ ಹೆಚ್ಚಳದಂತಹ ಉಪಕ್ರಮಗಳಲ್ಲಿ ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮುಂದಿನ ಪೀಳಿಗೆಗೆ ಶುದ್ಧ ಗಾಳಿಯ, ನಿರ್ಮಲ ಪರಿಸರದ, ಸುಗಮ ಜೀವನವನ್ನು ಖಾತ್ರಿ ಪಡಿಸುತ್ತವೆ. ಸಾರ್ವಜನಿಕರು, ತಮ್ಮ ಮನೆಯ ಸೌಂದರ್ಯಕ್ಕೆ ಅಡ್ಡಿ ಯಾಗುತ್ತದೆ, ಮನೆಯ ಮುಂದೆ ಎಲೆ ಉದುರುತ್ತದೆ ಎಂದು ಮರ, ಗಿಡ ಕಡಿಯದೆ, ಹಸಿರು ಉಳಿಸಬೇಕು. ಇಲ್ಲವಾದರೆ ಮುಂದೆ ಉಸಿರಾಟಕ್ಕೂ ಕಷ್ಟ ಪಡಬೇಕಾಗುತ್ತದೆ ಎಂದು ಹೇಳಿದರು.

ವೇಳೆ ಅರಣ್ಯ ಇಲಾಖೆ 10 ಸಾವಿರ ಸಸಿಗಳನ್ನು ನೀಡುತ್ತಿದ್ದು, ಅವುಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಎಫ್‌ಕೆಸಿಸಿಐ ಸಿಎಸ್‌ಆರ್ ಮತ್ತು ಸುಸ್ಥಿರತೆ ಸಮಿತಿ ಅಧ್ಯಕ್ಷ ಕೆ. ಕೀರ್ತನ್ ಕುಮಾರ್ ತಿಳಿಸಿದರು. ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

ಮಹಿಳೆಯರಿಗೆ ಸಮಾನ ಅವಕಾಶ: ಛಲವಾದಿ

• **ಬೆಂಗಳೂರು:** ಮಹಿಳಾ ಮೀಸಲಾತಿ ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದ್ದು, ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧಪಕ್ಷ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾಧ್ಯಮಗಳ ಜತೆ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು, ಸಮಾನ ಅವಕಾಶ ಸಿಗಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಬಾಬಾಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ ಎಂದರು.

ಈ ಹಿಂದೆ ಮಹಿಳೆಯರಿಗೆ ಅವಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರಲಿಲ್ಲ, ಆದರೆ ಇಂದು ನಾರಿ ಶಕ್ತಿ ಹೆಸರಿನಲ್ಲಿ ಪ್ರಧಾನಿಯವರು ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ. ಇನ್ನು ಮುಂದೆ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಅವಕಾಶಗಳ ದೊರೆಯಲಿವೆ. ನಾರೀಶಕ್ತಿ ಮಸೂದೆ ಮೂಲಕ ಕಾನೂನು ರಚನೆಯಲ್ಲೂ ಮಹಿಳೆಯರಿಗೆ ಸಮಾನ ಅವಕಾಶ ಸಿಗಲಿದೆ ಎಂದರು.

ಸುವರ್ಣಾಕ್ಷರದಲ್ಲಿ ಬರೆದಿಡುವ ದಿನ: ಭಾರತಿ ಶೆಟ್ಟಿ

• **ಬೆಂಗಳೂರು:** ಮಹಿಳಾ ಮೀಸಲಾತಿ ಜಾರಿಯು ನಮಗೆಲ್ಲ ಸಂತಸ ತಂದಿದೆ. ನಾವು ಈ ದಿನವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು ಎಂದು ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ ತಿಳಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನರೇಂದ್ರ ಮೋದಿಜೀ ಅವರ ಪ್ರಯತ್ನದಿಂದ ಮಸೂದೆ ಅನುಮೋದನೆ ಪಡೆದಿದೆ. ಇದು ಅತ್ಯಂತ ಸಂತೋಷ ತಂದಿದೆ. 19 ವರ್ಷದ ಬಳಿಕ ಸಂತಸ, ಖುಷಿ, ನ್ಯಾಯ ಲಭಿಸಿದೆ ಎಂದು ಹೇಳಿದರು. ಮೋದಿಜೀ ಅವರ ಕಾಲದಲ್ಲಿ ಮಹಿಳೆಯರ ಆಡಳಿತಾತ್ಮಕ ಸಬಲೀಕರಣ ನಡೆದಿದೆ. ಅದು ಉತ್ತುಂಗಕ್ಕೆ ಏರಿದೆ. ಬೇಟಿ ಬಚಾವೋ, ಬೇಟಿ ಪಢಾವೋ, ಲಕ್ಪತಿ ಸೇರಿ ಇದೀಗ ಮೀಸಲಾತಿಯ ಅವಕಾಶ ನೀಡಿದ್ದಾರೆ. ಮಹಿಳೆಯರಿಗೆ ರಕ್ಷಣಾ ಕ್ಷೇತ್ರದಲ್ಲೂ ಅವಕಾಶ ಕೊಟ್ಟಿದ್ದಾರೆ ಎಂದು ಪ್ರಶಂಸಿಸಿದರು.

ರಾಯರ ದರ್ಶನಕ್ಕೆ ತೆರಳಿದ್ದ ಭಕ್ತರ ದುರ್ಮರಣ | ಹಲವರಿಗೆ ಗಾಯ

ಭೀಕರ ಅಪಘಾತ: 8 ಮಂದಿ ಸಾವು

• **ರಾಯಚೂರು:** ಬುಲೆರೋ ಹಾಗೂ ಫ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ.

ಈ ಘಟನೆ ಆಂಧ್ರದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚಿಲಕನಡೋಣ ಬಳಿ ಬುಧವಾರ ನಸುಕಿನ ಜಾವ ನಾಲ್ಕು ಗಂಟೆ ಸಮಯದಲ್ಲಿ ಸಂಭವಿಸಿದೆ. ಮೃತರಲ್ಲಿ ಐವರು ಮಹಿಳೆಯರು, ಇಬ್ಬರು ಪುರುಷರು, ಮೂರು ವರ್ಷದ ಒಂದು ಮಗು ಸೇರಿ ಒಟ್ಟು ಎಂಟು ಜನ ಸೇರಿದ್ದಾರೆ. ಮೃತರನ್ನು ಹಾಸನ ಜಿಲ್ಲೆ ಬೇಲೂರು ತಾಲೂಕಿನ ಶೆಟ್ಟಿಗೆರೆಯ ಸುನೀಲ(27), ಲೋಲಾಕ್ಷಿ(38), ಕುಮಾರ್(51), ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕಿನ ಉಡೇವು ಗ್ರಾಮದವರಾದ ಮೀನಾಕ್ಷಮ್ಮ(54), ಪುಟ್ಟಮ್ಮ (60), ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ನೇಹರು ನಗರದ ಎಸ್.ಕೆ.ವೀಣಾ(25) ಇವರ ಮಗಳು ನಿತಿಶಾ(3) ಹಾಗೂ ಜಯಮ್ಮ ಎಂದು ಗುರುತಿಸಲಾಗಿದೆ.

ಗಂಭಿರವಾಗಿ ಗಾಯಗೊಂಡಿರುವ ಒಂಬತ್ತು ಜನರನ್ನು ಕರ್ನೂಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇವರಲ್ಲಿ ನಾಲ್ವರ ಸ್ಥಿತಿ ಗಂಭಿರವಾಗಿದೆ. ಗಾಯಗೊಂಡಿರುವ ಇನ್ನು ನಾಲ್ವರಿಗೆ ಯಮ್ಮಿಗನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಬುಲೆರೋ ವಾಹನದಲ್ಲಿ ಒಂದೇ ಕುಟುಂಬಕ್ಕೆ ಸೇರಿದ 21 ಜನರು ಮಂತ್ರಾಲಯ ಮಠಕ್ಕೆ ಆಗಮಿಸುತ್ತಿದ್ದರು. ಮಂತ್ರಾಲಯ ಇನ್ನೂ 7 ಕಿಮೀ ದೂರದಲ್ಲಿರುವಾಗ ಚಿಲಕನಡೋಣ ಗ್ರಾಮದ ಬಳಿಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಘಟನೆ ಬಳಿಕ ಟ್ಯಾಂಕರ್ ಚಾಲಕನನ್ನ ಮಂತ್ರಾಲಯ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಹಾಗೂ ಆರ್‌ಟಿಓ ಅಧಿಕಾರಿಗಳ ತಂಡ ಭೇಟಿ ತನಿಖೆ ಕೈಗೊಂಡಿದೆ. ಅತೀ ವೇಗದಿಂದ ವಾಹನ ಚಾಲನೆಯಿಂದ ನಿಯಂತ್ರ ತಪ್ಪಿದ ಹಿನ್ನೆಲೆ ಈ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಅಂದಾಜಿಸಿದ್ದಾರೆ. ಮಂತ್ರಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮುಂದಿನ ನಿರ್ಧಾರದ ಬಗ್ಗೆ ಶೀಘ್ರವೇ ಸಭೆ: ಜಮಿಯತ್ ಉಲಮಾ

ಕೈ ವರ್ತನೆಗೆ ಮುಸ್ಲಿಂ ನಾಯಕರ ಬೇಸರ

• **ಬೆಂಗಳೂರು:** ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರದಲ್ಲೇ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಜಮಿಯತ್ ಉಲಮಾ ಎಚ್ಚರಿಕೆ ನೀಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ ಮಾ.20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲಾಗಿತ್ತು. ಅದೇ ದಿನ ರಾತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಶಾಸಕ ರಿಜ್ವಾನ್ ಅರ್ಷದ್ ಅವರ ನಿವಾಸದಲ್ಲಿ ಭೇಟಿಯಾಗಿ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವಂತೆ ಒತ್ತಾಯಿಸಲಾಗಿತ್ತು ಎಂದು ತಿಳಿಸಿದರು.

ಹಿಂದಿನ ಶಾಸಕ ದಿ.ಶಾಮನೂರು ಶಿವಶಂಕರಪ್ಪ ತಮ್ಮ ಕೊನೆಯ ಚುನಾವಣೆಯಾಗಿ ಘೋಷಿಸಿ, ಮುಂದಿನ ಬಾರಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವ ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ, ಈ ಬೇಡಿಕೆ ಇಟ್ಟಿದ್ದೆವು. ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತ ಮತದಾರರ ಪ್ರಮಾಣ ಹೆಚ್ಚಿರುವುದರಿಂದ ಕನಿಷ್ಠ ಒಂದು ಕ್ಷೇತ್ರದಲ್ಲಿ ಅವಕಾಶ ನೀಡುವುದು ನ್ಯಾಯಸಮ್ಮತವಾಗುತ್ತಿತ್ತು. ಆದರೆ, ನಂತರ ಕಾಂಗ್ರೆಸ್ ಪಕ್ಷವು ಶಾಮನೂರು ಕುಟುಂಬದ ಅಭ್ಯರ್ಥಿಯನ್ನು ಘೋಷಿಸಿದ ಹಿನ್ನೆಲೆಯಲ್ಲಿ ಸಮುದಾಯದಲ್ಲಿ ನಿರಾಶೆ ಮತ್ತು ಆಘಾತ ಉಂಟಾಗಿದೆ. ಪದೇಪದೇ ಮನವಿಗಳು ನಿರ್ಲಕ್ಷ್ಯವಾಗುತ್ತಿವೆ ಎಂಬ ಅಭಿಪ್ರಾಯ ಸಮುದಾಯದಲ್ಲಿ ಬಲವಾಗುತ್ತಿದೆ ಎಂದು ಖಾಸ್ಮೀ ವಿವರಿಸಿದರು.

ಕಾಂಗ್ರೆಸ್‌ನಿಂದ ಸಮುದಾಯಕ್ಕೆ ನಕಾರಾತ್ಮಕ ಸಂದೇಶ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಸೀರ್ ಅಹ್ಮದ್ ಅವರನ್ನು ಹುದ್ದೆಯಿಂದ ತೆಗೆದುಹಾಕಿರುವುದು ಮತ್ತು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಅವರ ರಾಜೀನಾಮೆ ಸಮುದಾಯಕ್ಕೆ ನಕಾರಾತ್ಮಕ ಸಂದೇಶ ನೀಡಿದೆ. ಈ ಕ್ರಮಗಳು ಅಲ್ಪಸಂಖ್ಯಾತರ ಮೇಲೆ ನಿರ್ಲಕ್ಷ್ಯವನ್ನು ತೋರಿಸುತ್ತವೆ. ಹಾಗೇ, 2024ರ ಲೋಕಸಭಾ ಚುನಾವಣೆಯಲ್ಲಿ ಬಿ.ವೈ. ರಾಘವೇಂದ್ರ ಅವರಿಗೆ ಬೆಂಬಲ ನೀಡಿದ ಆರೋಪ ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಕಾಂಗ್ರೆಸ್ ನಾಯಕತ್ವವನ್ನು ಪ್ರಶ್ನಿಸಲಾಗಿದೆ. ಕಾಂಗ್ರೆಸ್ ಪಕ್ಷವು ನಮ್ಮ ಬೆಂಬಲವನ್ನು ಲಘುವಾಗಿ ತೆಗೆದುಕೊಳ್ಳುತ್ತಿದೆ ಎಂಬ ಭಾವನೆ ಸಮುದಾಯದಲ್ಲಿ ಹೆಚ್ಚುತ್ತಿದೆ, ಮುಂದುವರೆದರೆ ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ ಎಂದರು.

ಏಪ್ರಿಲ್‌ನಲ್ಲಿ 52, ಮೇನಲ್ಲಿ 62 ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಳ

114 ಗ್ರಾಮಗಳಲ್ಲಿ ನೀರಿನ ಅಭಾವ ಸಾಧ್ಯತೆ

▸ ಜಗದೀಶ ಎಂ.ಗಾಣಿಗೇರ

ದಿಗಂತ ವಿಶೇಷ

• **ಬಾಗಲಕೋಟೆ:** ತ್ರಿವೇಣಿ ನದಿಗಳು ಹರಿದು ಹೋಗಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಲಿದ್ದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 114 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ.

ಕಳೆದ ಒಂದು ವಾರದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಭಾರೀ ಬಿಸಿಲಿನ ತಾಪ ಹೆಚ್ಚಾಗಿದೆ. ನದಿಯಲ್ಲಿ ಅಲ್ಲಲ್ಲಿ ಸಂಗ್ರಹವಾಗಿರುವ ನೀರು ಕೂಡ ಬಿಸಿಲಿನ ಹೊಡೆತಕ್ಕೆ ಆವಿಯಾಗುವಂತಹ ಸ್ಥಿತಿ ಬಂದಿದ್ದು ಅಷ್ಟೊಂದು ಬಿಸಿಲು ಜಿಲ್ಲೆಯಲ್ಲಿದೆ. ಬಿಸಿಲಿನ ತಾಪ ಹೆಚ್ಚು ಒಂದು ಕಡೆಯಾದರೆ ಇನ್ನೊಂದೆಡೆ ಕೆಲವೊಂದು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ.

ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಲ್ಲಿ 52 ಗ್ರಾಮ ಮೇ ತಿಂಗಳಲ್ಲಿ 62 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ. ನೀರಿನ ಸಮಸ್ಯೆಯಾಗುವುದನ್ನು ತಪ್ಪಿಸಲು ಈಗಾಗಲೇ ಜಿಲ್ಲಾಡಳಿತ 111 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿದೆ. ಗುಳೇದಗುಡ್ಡ ತಾಲೂಕಿನ ಚಿಮ್ಮಲಗಿ, ಇಳಕಲ್ ತಾಲೂಕಿನ ಚಿಕ್ಕ ಕೊಡಗಲಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗಿದ್ದು ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ. ಬಾದಾಮಿ ತಾಲೂಕಿನಲ್ಲಿ 12, ಗುಳೇದಗುಡ್ಡ ತಾಲೂಕಿನ 4, ಬಾಗಲಕೋಟೆ 2, ಬೀಳಗಿ 7, ಹುನಗುಂದ 4, ಇಳಕಲ್ 5, ಜಮಖಂಡಿ 6, ಮುಧೋಳ 4, ರಬಕವಿ-ಬನಹಟ್ಟಿ ತಾಲೂಕಿನ 8 ಗ್ರಾಮಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದು ಎಂದು ಜಿಲ್ಲಾಡಳಿತ ಅಂದಾಜಿಸಿದೆ.

ಪ್ರಸಕ್ತ ಸಾಲಿನ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳಿಗೆ ಮುಂಜಾಗ್ರತೆ ಕ್ರಮವಾಗಿ 206 ಕಾಮಗಾರಿಗಳಿಗೆ 611.89 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಜಿಲ್ಲಾಡಳಿತ ತಯಾರಿಸಿದೆ. ಏ.10ರಂದು ಮಲಪ್ರಭಾ ನದಿಗೆ 1 ಟಿಎಂಸಿ ನೀರನ್ನು ಬಿಡುಗಡೆಗೊಳಿಸಲಾಗಿದೆ. ಏ.15ರಂದು ಶಿವಯೋಗ ಮಂದಿರದ ಬ್ಯಾರೇಜ್‌ಗೆ ತಲುಪಿದ್ದು, ಇನ್ನು 15 ಬ್ಯಾರೇಜ್ ದಾಟಿ ಹಡಗಲಿ ಬ್ಯಾರೇಜ್‌ಗೆ ತಲುಪಲು ಬಾಕಿ ಇರುತ್ತದೆ.

ನೀರು ಬಿಡುಗಡೆಯಿಂದ ಎಲ್ಲ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಚಾಲ್ತಿಯಲ್ಲಿರುತ್ತವೆ. ಚಿಕ್ಕಪಡಸಲಗಿ ಬ್ಯಾರೇಜ್ ಅಡಿಯಲ್ಲಿ 3 ಎಂವಿಎಸ್ ಯೋಜನೆಗಳಿದ್ದು, 27 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ, ಸದ್ಯದ ಪರಿಸ್ಥಿತಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್‌ನಿಂದ ಏಪ್ರಿಲ್ ಅಂತ್ಯದವರೆಗೆ ಮಾತ್ರ ನೀರು ಸರಬರಾಜು ಮಾಡಬಹುದಾಗಿದೆ.

> ಬಾಗಲಕೋಟೆ ಜಿಲ್ಲೆಯಲ್ಲಿ 196 ಗ್ರಾಮ ಪಂಚಾಯತಿಗಳಿದ್ದು, 597 ಹಳ್ಳಿ ಹಾಗೂ 1006 ಜನವಸತಿಗಳಿವೆ. 39 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ಒಟ್ಟು 402 ಹಳ್ಳಿಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ.
>
> ■ ಶಶಿಧರ ಕುರೇರ, ಜಿಪಂ ಸಿಇಒ

ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ

• **ಮಡಿಕೇರಿ:** ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬ್ರೆಜಿಲ್‌ನಿಂದ ಕಾಫಿ ಸರಬರಾಜು ಕುಸಿತಗೊಂಡಿರುವುದರಿಂದ ಈ ವಾರದಲ್ಲಿ ಕಾಫಿ ಧಾರಣೆ ಮತ್ತೆ ಏರಿಕೆ ಕಂಡಿದೆ. ಇದು ಭಾರತದ ಕಾಫಿ ಉದ್ಯಮದ ಮೇಲೂ ಪರಿಣಾಮ ಬೀರಿದ್ದು, ದೇಶ ಕಾಫಿ ಮಾರುಕಟ್ಟೆಗಳಲ್ಲೂ ಬೆಲೆ ಏರಿಕೆಯ ಲಕ್ಷಣಗಳು ಗೋಚರಿಸಿದೆ.

ಮಾ. ಕೊನೆಯ ವಾರದಿಂದ ನಿಂತ ನೀರಿನಂತಾಗಿದ್ದ ಕಾಫಿ ಮಾರುಕಟ್ಟೆಯಲ್ಲಿ ಇದೀಗ ಸಂಚಲನ ಸೃಷ್ಟಿಯಾಗಿದ್ದು, ಏ.15ರಿಂದ ಕಾಫಿ ವಹಿವಾಟು ಪುನರಾರಂಭಗೊಂಡಿದೆ. ಪರಿಣಾಮವಾಗಿ 50 ಕೆಜಿ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿ ದರ ಇದೀಗ 23,500ರೂ.ಗಳಿಗೆ ಏರಿಕೆಯಾಗಿದ್ದು, ರೋಬಸ್ಟಾ ಪಾರ್ಚ್‌ಮೆಂಟ್ ದರ 12,400ರೂ.ಗಳಿಗೆಜಿಗಿದಿದೆ. ಅರೇಬಿಕಾ ಚೆರಿ 23,500ರೂ. ಗಳಷ್ಟಿದ್ದು, ರೋಬಸ್ಟಾ ಚೆರಿ 18,100ರೂ.ಗಳಿಗೆ ಮಾರಾಟವಾಗಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.

ಬ್ರೆಜಿಲ್ ರಫ್ತು ಕುಸಿತ: ಬುಧವಾರ ಕಾಫಿ ಬೆಲೆಗಳು ಏರಿಕೆಯಾಗಿದ್ದು, ರೋಬಸ್ಟಾ ಸುಮಾರು ಸುಮಾರು ಒಂದೂವರೆ ವಾರಗಳ ಗರಿಷ್ಠ ಮಟ್ಟ ತಲುಪಿತು. ಬ್ರೆಜಿಲ್‌ನಿಂದ ಸರಬರಾಜು ಕಡಿಮೆಯಾಗುತ್ತಿರುವ ಲಕ್ಷಣಗಳ ನಡುವೆ ಕಾಫಿ ಬೆಲೆಗಳು ಏರಿಕೆಯಾಗಿದ್ದು, ವರದಿಗಳ ಪ್ರಕಾರ ಬ್ರೆಜಿಲ್‌ನ ಮಾರ್ಚ್ ಹಸಿರು ಕಾಫಿ ರಫ್ತು ವರ್ಷದಿಂದ ವರ್ಷಕ್ಕೆ ಶೇ.10ರಷ್ಟು ಕುಸಿದು 2.65 ಮಿಲಿಯನ್ ಬ್ಯಾಗ್‌ಗಳಿಗೆ ಇಳಿದಿವೆ. ಕಳೆದ ಬುಧವಾರ ಬ್ರೆಜಿಲ್ ವಾಣಿಜ್ಯ ಸಚಿವಾಲಯದ ವರದಿ ಪ್ರಕಾರ, ಮಾರ್ಚ್ ಕಾಫಿ ರಫ್ತುಗಳು ಶೇ.31 ರಷ್ಟು ಕುಸಿದು 151,000 ಮೆಟ್ರಿಕ್ ಟನ್‌ಗೆ ಇಳಿದಿವೆ. ರೋಬಸ್ಟಾ ಸಂಗ್ರಹಗಳು 1.25 ವರ್ಷದ ಕನಿಷ್ಠಮಟ್ಟವಾದ 3,891 ಲಾಟ್‌ಗಳಿಗೆ ಇಳಿದಿರುವುದರಿಂದ ಪ್ರಸ್ತುತ ಸರಬರಾಜಿನ ಕೊರತೆಯೂ ರೋಬಸ್ಟಾ ಬೆಲೆ ಏರಿಕೆಗೆ ಕಾರಣ ಎನ್ನಲಾಗಿದೆ.



ಬ್ರೆಜಿಲ್‌ನಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗಿರುವುದರಿಂದ ಕಾಫಿ ಉತ್ಪಾದನೆಗೆ ಹಾನಿಯಾಗುವ ಸಾಧ್ಯತೆ ಇದೆ. ಇದರಿಂದ ಬೆಲೆಗಳು ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಅಲ್ಲಿನ ವರದಿ ಪ್ರಕಾರ, ಬ್ರೆಜಿಲ್‌ನ ಅತಿ ದೊಡ್ಡ ಅರೇಬಿಕಾ ಬೆಳೆ ಪ್ರದೇಶವಾದ ಮಿನಾಸ್ ಜೆರೈಸ್‌ನಲ್ಲಿ ಕಳೆದ ವಾರ ಕೇವಲ 4.2 ಮಿಮೀ ಮಳೆಯಾಗಿದ್ದು, ಇದು ಸಾಮಾನ್ಯ ಸರಾಸರಿಯ ಕೇವಲ ಶೇ.20 ಮಾತ್ರ ಎಂದು ಹೇಳಲಾಗಿದೆ. ಬ್ರೆಜಿಲ್'ನಲ್ಲಿ ಕಾಫಿ ಉತ್ಪಾದನೆ ಹಾಗೂ ಹವಾಮಾನ ವೈಪರೀತ್ಯ ಉಂಟಾದರೆ ಇಡೀ ಜಾಗತಿಕ ಮಟ್ಟದಲ್ಲಿ ಕಾಫಿ ಬೆಲೆಯಲ್ಲಿ ಏರಿಳಿತಗಳಾಗುವುದು ಸಹಜವಾಗಿದ್ದು, ಇದೀಗ ಅಲ್ಲಿನ ಕಾಫಿ ಸರಬರಾಜು ಕುಸಿತವಾಗಿರುವುದರಿಂದ ಭಾರತದ ಅದರಲ್ಲೂ ದಕ್ಷಿಣ ಭಾರತದ ಕರ್ನಾಟಕದ ಬೆಳೆಗಾರರಿಗೆ ಬಂಪರ್ ಬೆಲೆ ಸಿಗುವ ನಿರೀಕ್ಷೆಯಿದೆ.

ಕಿರುಸುದ್ದಿ

20ಕ್ಕೆ ಕಟ್ಟಡ ಲೋಕಾರ್ಪಣೆ

• **ಹರಿಹರ:** ದಿ ಇಂಡಿಯನ್ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ನಿಯಮಿತದ ಸ್ವಂತ ಕಟ್ಟಡ ಇಂಡಿಯನ್ ಸೌಹಾರ್ದ ಸೌಧವನ್ನು ಏ.20ರ ಸೋಮವಾರ ಲೋಕಾರ್ಪಣೆಗೊಳಿಸಲಾಗುವುದು ಎಂದು ಸೊಸೈಟಿ ಅಧ್ಯಕ್ಷ ಹುಲಿಗೇಶ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990 ರಲ್ಲಿ 1424 ಷೇರುದಾರರೊಂದಿಗೆ ಆರಂಭವಾದ ನಮ್ಮ ಸೊಸೈಟಿಯು ಪ್ರಸ್ತುತ 2279 ಷೇರುದಾರರನ್ನು ಒಳಗೊಂಡಿದೆ. ಸೊಸೈಟಿಯ ಆರಂಭದಿಂದಲೂ ಷೇರುದಾರರಿಂದ ಕಟ್ಟಡ ನಿಧಿಯನ್ನು ಅಲ್ಪ ಪ್ರಮಾಣದಲ್ಲಿ ಸಂಗ್ರಹಿಸಿ ಸ್ವಂತಕಟ್ಟಡ ನಿರ್ಮಿಸಲಾಗಿದೆ ಎಂದರು.

ಗುರುಕುಲ ರೆಸಿಡೆನಿಯಲ್ ಶಾಲೆಗೆ ಶೇ 100 ಫಲಿತಾಂಶ

• **ಹೊನ್ನಾಳಿ:** ಪ್ರಸಕ್ತ ಸಾಲಿನಲ್ಲಿ ಹೊನ್ನಾಳಿ ನಗರದ ಹೊರ ವಲಯದ ಸಾಯಿ ಗುರುಕುಲ ರೆಸಿಡೆನ್ಸಿಯಲ್ ಸಿಬಿಎಸ್‌ಇ ಶಾಲೆಗೆ ಈ ಬಾರಿಯೂ ಶೇ 100 ಫಲಿತಾಂಶ ಬಂದಿದೆ ಸಂಸ್ಥೆ ಕಾರ್ಯದರ್ಶಿ ಸೌಮ್ಯ ಪ್ರದೀಪ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ಸತತವಾಗಿ ನಮ್ಮ ಶಾಲೆಗೆ ಶೇ 100 ರಷ್ಟು ಫಲಿತಾಂಶ ಬರುತ್ತಿದೆ, ಈ ಬಾರಿ 57 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಬೃಂದಾ ಕೆ.ಟಿ. ಶೇ 93, ರುತ್ವಿಕ್ ಎನ್. ಗಡದ್ ಶೇ 86.2. ಕುಶಾಲ್ ದೊಡ್ಡಮನಿ 85.2 ಹಾಗೂ ಅನನ್ಯ ಎ.ಎನ್, ಶೇ 84. ರಷ್ಟು ಸಾಧನೆ ಮಾಡಿದ್ದಾರೆ. ಎಂದರು. ಉನ್ನತ ಶ್ರೇಣಿ 3, ಪ್ರಥಮಶ್ರೇಣಿ, 22,ದ್ವಿತೀಯ ಶ್ರೇಣಿ 32 ಸೇರಿ ಒಟ್ಟು 57 ವಿದ್ಯಾರ್ಥಿಗಳು ಉತ್ತಮ್ಮ ಅಂಕ ಪಡದು ಸಾಧನೆ ಮಾಡಿದ್ದಾರೆ ಎಂದರು. ಖಜಾಂಚಿ ಸೋಮಪ್ಪ, ಸದಸ್ಯರಾದ ಪ್ರದೀಪ್‌ಗೌಡ, ಆಡಳಿತಾಧಿಕಾರಿ ಅರುಣ್ ಡಿ.ಎಸ್. ಪ್ರಾಚಾರ್ಯ ಸುರೇಂದ್ರ, ಶಾಲೆಯ ಸಂಯೋಜಕ ಹರೀಶ್‌ಕುಮಾರ್ ಇದ್ದರು.

27ರಿಂದ ಬೇಸಿಗೆ ಶಿಬಿರ

• **ದಾವಣಗೆರೆ:** ನಗರದ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿರುವ ಜಿಲ್ಲಾ ಬಾಲಭವನದಲ್ಲಿ ಏಪ್ರಿಲ್ 27 ರಿಂದ ಮೇ 11 ರವರೆಗೆ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಅರ್ಜಿಯನ್ನು ಜಿಲ್ಲಾ ಬಾಲಭವನ ಸಮಿತಿ, ಜೆ.ಹೆಚ್ ಪಟೇಲ್ ಬಡಾವಣೆ, ನಾಗನೂರು ರಸ್ತೆ ದಾವಣಗೆರೆ ಇಲ್ಲಿ ಏ.16 ರಿಂದ ಪಡೆದು ಏ.24 ರೊಳಗಾಗಿ ನೋಂದಾಯಿಸಿಕೊಳ್ಳಬಹುದು. ಶಿಬಿರದಲ್ಲಿ 5 ರಿಂದ 16 ವರ್ಷದೊಳಗಿನ ಮಕ್ಕಳು ಭಾಗವಹಿಸಬಹುದು. ಚಿತ್ರಕಲೆ, ಕರಕುಶಲ, ಕಲೆ, ಜೇಡಿಮಣ್ಣಿನ ಕಲೆ, ಸಂಗೀತ, ನೃತ್ಯ, ಯೋಗ, ಕರಾಟೆ, ಗ್ರಾಮೀಣ ಕ್ರೀಡೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿಮೊ.ಸಂ:9964496242, 9632887189 ನ್ನು ಸಂಪರ್ಕಿಸಬಹುದು.

ಜಿಲ್ಲಾ ಪಂಚಾಯಿತಿ ಎದುರು ಗ್ರಾಮ ಪಂಚಾಯಿತಿ ನೌಕರರ ಸಂಘ ಪ್ರತಿಭಟನೆ

ವೇತನ ಹೆಚ್ಚಳಕ್ಕೆ ಆಗ್ರಹ

• **ದಾವಣಗೆರೆ:** ವೇತನ ಹೆಚ್ಚಳ, ಇಎಸ್‌ಐ, ಪಿ.ಎಫ್, ಇಡಿಗಂಟು ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಜಿಲ್ಲಾ ಪಂಚಾಯತ್ ಮುಂಭಾಗ ಜಮಾಯಿಸಿದ್ದ ಸಂಘಟನೆ ಮುಖಂಡರು, ಗ್ರಾಮ ಪಂಚಾಯತ್ ನೌಕರರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಪಂ ಸಿಇಒ ಮುಖಾಂತರ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು.

ಇದೇ ವೇಳೆ ಸಂಘಟನೆಯ ಗೌರವಾಧ್ಯಕ್ಷ ಕೆ.ಹೆಚ್. ಆನಂದರಾಜ್ ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರ ಬೇಡಿಕೆಗಳಿಗಾಗಿ ಒತ್ತಾಯಿಸಿ ಕಳೆದ 2025 ಡಿಸೆಂಬರ್ 20ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಧರಣಿ ಸತ್ಯಾಗ್ರಹ ಕೈಗೊಳ್ಳಲಾಗಿತ್ತು. ಹಂತ-ಹಂತವಾಗಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ಸರ್ಕಾರದಿಂದ ಸಿಕ್ಕ ಹಿನ್ನೆಲೆಯಲ್ಲಿ ಹೋರಾಟ ಹಿಂಪಡೆಯಲಾಗಿತ್ತು. ಆದರೆ ಅದಾಗಿ 3 ತಿಂಗಳು ಗತಿಸಿದರೂ, ಈ ಬಗ್ಗೆ 2-3 ಬಾರಿ ಮಾತುಕತೆ ನಡೆಸಿದ್ದರೂ 19 ಬೇಡಿಕೆಗಳಲ್ಲಿ ಸರ್ಕಾರದ ಹಂತದಲ್ಲಿರುವ ಬೇಡಿಕೆ ಹೊರತುಪಡಿಸಿ ಪ್ರಮುಖವಾಗಿರುವ 7 ಬೇಡಿಕೆಗಳನ್ನು ಈವರೆಗೂ ಸಾಕಾರವಾಗಿಲ್ಲ ಎಂದು ಅಸಮಾಧಾನ ಪ್ರತಿಭಟನಾಕಾರರು ವ್ಯಕ್ತಪಡಿಸಿದರು.

ಬೇಡಿಕೆ ಈಡೇರಿಸುವಲ್ಲಿನ ಸರ್ಕಾರದ ವಿಳಂಬ ನೀತಿ ಖಂಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಕಚೇರಿಗಳ ಮುಂದೆ ಹೋರಾಟ ನಡೆಸಲಾಗುತ್ತಿದೆ. ಇದಕ್ಕೆ ಸರ್ಕಾರ ಸ್ಪಂದಿಸದಿದ್ದರೆ ಮುಂದೆ ಬೃಹತ್ ಮಟ್ಟದಲ್ಲಿ ಬೆಂಗಳೂರು ಚಲೋ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಗ್ರಾಮಪಂಚಾಯಿತಿಗಳಲ್ಲಿಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ, ಜವಾನ, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರೆಂದು ಘೋಷಿಸಬೇಕು. ತಾವೇ ಒಪ್ಪಿಕೊಂಡಿರುವ ಪ್ರಕಾರ ಎಲ್ಲ ನೌಕರರಿಗೆ 5,000 ರೂ. ವೇತನ ಹೆಚ್ಚಳ ಮಾಡಿ ಇಲಾಖೆಯಿಂದ ಆದೇಶ ಹೊರಡಿಸಬೇಕು. ನಿವೃತ್ತ ನೌಕರರಿಗೆ 6 ಲಕ್ಷ ರೂ. ಇಡಿಗಂಟು ನೀಡಬೇಕು. ತರಬೇತಿ ಪಡೆದಿರುವ ಎಲ್ಲಾ ಸ್ವಚ್ಛವಾಹಿನಿ ನೌಕರರಿಗೆ ಉದ್ಯೋಗ ಕೊಡಬೇಕು. ಒಡಂಬಡಿಕೆ ಪತ್ರ ಮತ್ತು ಪ್ರತಿ ವರ್ಷದ ನವೀಕರಣ ಪದ್ಧತಿ ರದ್ದುಪಡಿಸಬೇಕು. 15ನೇ ಹಣಕಾಸಿನಲ್ಲಿ ವೇತನ ಪಾವತಿ ಮಾಡಬೇಕು. ಪ್ರತಿಯೊಂದು ಪಂಚಾಯಿತಿಗೆ ಒಬ್ಬರೇ ಚಾಲಕರೆಂದು ಪರಿಗಣಿಸಿ 15,000 ವೇತನ ನೀಡಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಆನಂದಚಾರ್, ಬಸವರಾಜು, ಗುಡಾಳ್ ತಿಪ್ಪೇಸ್ವಾಮಿ, ಕೃಷ್ಣ, ಕರಿಬಸಪ್ಪ, ಮಹಾಂತೇಶ್, ಚಂದ್ರಪ್ಪ, ಭಾನುವಳ್ಳಿ ಗೋವಿಂದ, ರಾಜೇಶ್ವರಿ, ಉಷಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿವೃತ್ತ ನೌಕರರ ಸಂಘ ಪ್ರತಿಭಟನೆ

ಬೇಡಿಕೆ ಈಡೇರಿಸಿ

• **ದಾವಣಗೆರೆ:** ಕೇಂದ್ರ ಸರ್ಕಾರದ ವ್ಯಾಲಿಡಿಟಿ ಆಕ್ಟ್ 2025ನ್ನು ರದ್ದುಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೋರಂ ಆಫ್ ಬಿಎಸ್ಸೆನ್ನೆಲ್ ಮತ್ತು ಎಂಟಿಎನ್ನೆಲ್ ಪಿಂಚಣಿದಾರರ ಒಕ್ಕೂಟದ ರಾಷ್ಟ್ರವ್ಯಾಪಿ ಕರೆಯ ಮೇರೆಗೆ ನಿವೃತ್ತ ನೌಕರರು ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 2025ರ ವ್ಯಾಲಿಡಿಟಿ ಆಕ್ಟ್ ಕಾಯ್ದೆಯು ಮುಂದಿನ ವೇತನ ಆಯೋಗದಲ್ಲಿ ಪಿಂಚಣಿ ಪರಿಷ್ಕರಣೆ ಹಾಗೂ ತುಟ್ಟಿಭತ್ಯೆ ನಿಲ್ಲಿಸುವ ಮುನ್ಸೂಚನೆ ನೀಡಿದೆ. ಈ ಕಾಯ್ದೆಯು ಕೇವಲ ಬಿಎಸ್ಸೆನ್ನೆಲ್ ಮತ್ತು ಎಂಟಿಎನ್ನೆಲ್ ನಿವೃತ್ತ ನೌಕರರಿಗೆ ಮಾತ್ರವಲ್ಲದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ಪಿಂಚಣಿದಾರರಿಗೂ ಮಾರಕವಾಗಿದೆ. ಈ ಹಿನ್ನೆಲೆಯಲ್ಲಿ ನಿವೃತ್ತ ನೌಕರರ ಒಕ್ಕೂಟವು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಕಾನೂನು ಹೋರಾಟದ ಜೊತೆಗೆ ಬೀದಿಗಿಳಿದು ಪ್ರತಿಭಟಿಸಲು ಸಜ್ಜಾಗಿದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಜನವರಿ 1, 2017ರಿಂದ ಬಾಕಿ ಇರುವ ಪಿಂಚಣಿ ಪರಿಷ್ಕರಣೆಯನ್ನು ತಕ್ಷಣ ಜಾರಿಗೊಳಿಸಬೇಕು, 2025ರ ವ್ಯಾಲಿಡಿಟಿ ಆಕ್ಟ್ ಅನ್ನು ಸಂಪೂರ್ಣವಾಗಿ ರದ್ದುಪಡಿಸಬೇಕು, ಜನವರಿ 1, 2026ರ ತುಟ್ಟಿಭತ್ಯೆಯನ್ನು ನೀಡುವ ಜೊತೆಗೆ ಏಪ್ರಿಲ್ 1ರಿಂದಲೇ ಅನ್ವಯವಾಗುವಂತೆ ತುಟ್ಟಿಭತ್ಯೆಯ ಆದೇಶ ಹೊರಡಿಸಬೇಕು. ಸರ್ಕಾರ ಈ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ದೆಹಲಿಯ ಜಂತರ್ ಮಂತರ್ ನಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

ಮುಖಂಡರಾದ ಆರ್.ಟಿ.ಷಣ್ಮುಖಪ್ಪ, ಆರ್.ಆನಂದ, ಎಂ.ವಿ.ಸ್ವಾಮಿ, ಈರಣ್ಣ, ಲಕ್ಷ್ಮಣ ರಾವ್, ಕೆ.ಸಿ.ಚೌಧರಿ, ಜಯದೇವಪ್ಪ, ಹನುಮಂತಪ್ಪ ಬಜರಿ, ಮಲ್ಲಿಕಾರ್ಜುನ ರೆಡ್ಡಿ, ತಿಪ್ಪೇರುದ್ರಪ್ಪ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿಯಲ್ಲಿ ನಾಯಕರು ಇದ್ದಾರೆ | ಲೋಕಿಕೆರೆ ನಾಗರಾಜ್

ವಿನಯ್ ಭ್ರಮೆಯಿಂದ ಹೊರಬರಲಿ

• **ದಾವಣಗೆರೆ:** ಸ್ವಾಭಿಮಾನಿ ಬಳಗದ ಜಿ.ಬಿ.ವಿನಯಕುಮಾರ್ ಇನ್ನೂ ಬಿಜೆಪಿ ಪಕ್ಷಕ್ಕೆ ಸೇರಿಯೇ ಇಲ್ಲ, ಪಕ್ಷದ ಬಾವುಟವನ್ನೂ ಹಿಡಿದಿಲ್ಲ, ಈಗಲೇ ದಾವಣಗೆರೆ ಉತ್ತರ ಅಥವಾ ಹೊನ್ನಾಳಿಯಿಂದ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುವ ಭ್ರಮೆಯಿಂದ ಹೊರಬರಬೇಕು ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಸಲಹೆ ನೀಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷದಲ್ಲಿ ನಾಯಕರಿಗೇನೂ ಕೊರತೆ ಇಲ್ಲ, ಇಲ್ಲಿ ಎಲ್ಲರೂ ಸಮರ್ಥ ಅಭ್ಯರ್ಥಿಗಳಿದ್ದಾರೆ. ಪಕ್ಷದವರೇ ಅಲ್ಲದವರನ್ನು ಕರೆತಂದು ಟಿಕೆಟ್ ಕೊಡುವಂತಹ ಸ್ಥಿತಿ ಬಿಜೆಪಿಗೆ ಬಂದಿಲ್ಲ, ಬರುವುದೂ ಇಲ್ಲ, ಬಿಜೆಪಿ ನಾಯಕತ್ವವು ಎಂದೆಂದಿಗೂ ಪಕ್ಷ ಕಟ್ಟಿ ಬೆಳೆಸಿದವರನ್ನು ಮರೆಯುವುದಿಲ್ಲ, ಮೋಸ ಮಾಡುವುದಿಲ್ಲ, ಒಂದಲ್ಲ ಒಂದು ರೀತಿಯಲ್ಲಿ ಅವಕಾಶ, ಸ್ಥಾನಮಾನ ನೀಡುತ್ತದೆ. ಅದಕ್ಕೆ ಶ್ರೀನಿವಾಸ್ ದಾಸಕರಿಯಪ್ಪಗೆ ದಾವಣಗೆರೆ ದಕ್ಷಿಣದ ಟಿಕೆಟ್ ನೀಡಿದ್ದೇ ಸಾಕ್ಷಿ ಎಂದು ಸಮರ್ಥಿಸಿಕೊಂಡರು.

ಜಿ.ಬಿ.ವಿನಯ್‌ಕುಮಾರ್ ನನ್ನ ಸ್ನೇಹಿತರು. ಆದರೆ ಅವರಿಗೆ ಇನ್ನೂ ರಾಜಕೀಯ ಪ್ರಬುದ್ಧತೆ ಅಷ್ಟಾಗಿ ಇಲ್ಲ ಅನಿಸುತ್ತದೆ. ಹಾಗಾಗಿ ಮೊದಲು ನಾಲ್ಕು ಕ್ಷೇತ್ರ ಎಂದವರು, ಈಗ ಎರಡು ಕ್ಷೇತ್ರಕ್ಕೆ ಬಂದು ನಿಂತಿದ್ದಾರೆ. ಒಮ್ಮೆ ಲೋಕಸಭೆ ಅನ್ನುತ್ತಾರೆ, ಮತ್ತೊಮ್ಮೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಹೇಳುತ್ತಾರೆ. ಮೊದಲು ತಮ್ಮಲ್ಲಿನ ಗೊಂದಲ ಬಗೆಹರಿಸಿಕೊಳ್ಳಲಿ. ಈ ರೀತಿಯ ಹೇಳಿಕೆಗಳ ಮೂಲಕ ಪಕ್ಷದಲ್ಲಿ ಗೊಂದಲ ಮೂಡಿಸುವುದನ್ನು ಬಿಡಲಿ. ಅವರ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಿದೆ. ಅವರು ಯಾರು ಎಂಬ ಪ್ರಶ್ನೆಗೆ ಸ್ವತಃ ಜಿ.ಬಿ.ವಿನಯ್ ಅವರೇ ಹೇಳುವ ಕಾಲ ಉತ್ತರ ನೀಡುತ್ತದೆ ಎಂದರು.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಐತಿಹಾಸಿಕ ಚುನಾವಣೆ ನಡೆದಿದ್ದು, ಶೇ.100 ರಷ್ಟು ಬಿಜೆಪಿ ಜಯಶೀಲವಾಗಲಿದೆ. ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಗೆಲ್ಲುವುದು ಶತಃಸಿದ್ಧ. ಉಪ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಒಟ್ಟಾಗಿ ಹಗಲಿರುಳು ಮಾಡಿರುವ ಪರಿಶ್ರಮಕ್ಕೆ ಮೇ 4ರಂದು ಉತ್ತರ ದೊರೆಯಲಿದೆ ಎಂದು ಅವರು ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಧನಂಜಯ ಕಡ್ಲೇಬಾಳು ಮಾತನಾಡಿ, ಜಿ.ಬಿ.ವಿನಯ್ ಕುಮಾರ್ ತನ್ನ ಹಿಂದೆ ರಾಷ್ಟ್ರೀಯ, ರಾಜ್ಯ ಮುಖಂಡರು ಇದ್ದಾರೆ ಅಂತಾ ಹೇಳಿರುವುದು ಖಂಡನೀಯ. ಜಿಲ್ಲೆಯವರ ಬಗ್ಗೆ ಮಾತನಾಡಲಿ. ರಾಜ್ಯ, ರಾಷ್ಟ್ರೀಯ ನಾಯಕರ ಬಗ್ಗೆ ಮಾತನಾಡುವುದು ಬೇಡ ಎಂದು ತಾಕೀತು ಮಾಡಿದರು.

ಪಕ್ಷದ ಜಿಲ್ಲಾ ವಕ್ತಾರ ಬಿ.ಎಂ.ಸತೀಶ್ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಸೋಲಿನ ಭೀತಿಯಿಂದ ಆಂತರಿಕ ಗೊಂದಲ, ಕಿತ್ತಾಟ ಪ್ರಾರಂಭವಾಗಿದೆ. ಒಂದು ಕಡೆ ಮುಸಲ್ಮಾನರು ಟಿಕೆಟ್ ಕೇಳಿದ್ದೇ ತಪ್ಪು ಎಂಬ ವಾತಾವರಣ ನಿರ್ಮಾಣವಾಗಿದೆ. ಸಿದ್ದರಾಮಯ್ಯನವರ ನಾಯಕತ್ವದ ಕಾರಣದಿಂದ ಮುಸಲ್ಮಾನರು, ಕುರುಬರು, ಹಿಂದುಳಿದವರು ಸೇರಿದಂತೆ ಅಹಿಂದ ಜನರ ಬೆಂಬಲದಿಂದ ಶಾಮನೂರು ಮನೆತನದವರು ಅಧಿಕಾರ, ಸಂಪತ್ತು ಗಳಿಸಿದ್ದಾರೆ. ಅಹಿಂದ ಜನರ ಋಣದಲ್ಲಿ ಶಾಮನೂರು ಮನೆತನ ಇದೆಯೇ ವಿನಃ ಅಹಿಂದ ಜನರು ಶಾಮನೂರು ಮನೆತನದವರ ಋಣದಲ್ಲಿ ಇಲ್ಲ, ಒಂದು ಲೋಟ ಟೀ ಕುಡಿದರೂ ಋಣ ಇಟ್ಟುಕೊಂಡು ತೀರಿಸಬೇಕು ಎನ್ನುವ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸ್ವತಃ ಇದನ್ನು ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಪಕ್ಷದ ಮುಖಂಡರಾದ ಹಾಲೇಶ್ ನಾಯಕ್, ತಾರೇಶ್ ನಾಯ್ಕ ಇತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಹೊನ್ನಾಳಿಯಲ್ಲಿ ಬಿಜೆಪಿಗೆ ದುಡಿದವರು ಹಲವರು ಇದ್ದೇವೆ

ರೇಣುಕಾಚಾರ್ಯ ಹೇಳಿಕೆ ಹಾಸ್ಯಾಸ್ಪದ

• **ದಾವಣಗೆರೆ:** ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ತಾನೇ ಬಿಜೆಪಿ ಅಭ್ಯರ್ಥಿ, ತನಗೇ ಟಿಕೆಟ್ ಸಿಗುತ್ತೆಂದು ಮಾಜಿ ಸಚಿವ ರೇಣುಕಾಚಾರ್ಯ ಹೇಳಿಕೊಳ್ಳುವುದು ಹಾಸ್ಯಾಸ್ಪದ. ಈ ರೀತಿ ತಾನೇ ಟಿಕೆಟ್ ನಿರ್ಧರಿಸಿಕೊಂಡು ಓಡಾಡುವುದು ಶಿಸ್ತಿನ ಪಕ್ಷ ಬಿಜೆಪಿಗೆ ಶೋಭೆ ತರುವುದಿಲ್ಲ ಎಂದು ಪಕ್ಷದ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಹೊನ್ನಾಳಿ ಹಿರಿಯ ಮುಖಂಡ ಶಾಂತರಾಜ ಪಾಟೀಲ್ ಟೀಕಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈತನು ಭೂಮಿ ಹದಗೊಳಿಸಿದಂತೆ ಎಂ.ಪಿ.ರೇಣುಕಾಚಾರ್ಯ ಮಾತ್ರವಲ್ಲದೆ, ನಮ್ಮಂತಹ ಹಲವಾರು ಜನ ಪಕ್ಷವನ್ನು ಹದಗೊಳಿಸಿದ್ದಾರೆ. ಕ್ಷೇತ್ರಕ್ಕೆ ರೇಣುಕಾಚಾರ್ಯರಿಗಿಂತ ಪಕ್ಷದಲ್ಲಿ ಹಿರಿಯರಾದ ಶಾಂತರಾಜ ಪಾಟೀಲ, ಎ.ಬಿ.ಹನುಮಂತಪ್ಪ ಅರಕೆರೆ, ಯಕ್ಕನಹಳ್ಳಿ ಜಗದೀಶ, ಕೆ.ವಿ.ಚನ್ನಪ್ಪ, ಎಂ.ಆರ್.ಮಹೇಶ ಸೇರಿದಂತೆ ಅನೇಕರು ಆಕಾಂಕ್ಷಿಗಳಿದ್ದೇವೆ ಎಂಬುದನ್ನು ರೇಣುಕಾಚಾರ್ಯ ಮರೆಯಬಾರದು ಎಂದು ತಿರುಗೇಟು ನೀಡಿದರು.

ಹೊನ್ನಾಳಿಗೆ ಯಾರೂ ಬರುವಂತಿಲ್ಲ, ಹಾಗೆ ಬಂದವರನ್ನು ನೋಡಿಕೊಳ್ಳುತ್ತೇನೆ ಅಂತೆಲ್ಲಾ, ರೇಣುಕಾಚಾರ್ಯ ಹೇಳುವುದು ಸರಿಯಲ್ಲ, ಹೀಗೆ ನೋಡಿಕೊಳ್ಳುತ್ತೇನೆಂದಿದ್ದು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ನಾಯಕರಿಗಾ ಅಥವಾ ಬೇರೆಯವರಿಗಾ? ಹೀಗೆ ಹೇಳಿಕೆ ನೀಡದಂತೆ ಪಕ್ಷದ ವರಿಷ್ಠರು ರೇಣುಕಾಚಾರ್ಯಗೆ ಕಿವಿಮಾತು ಹೇಳಲಿ. ನಮ್ಮದು ಲೀಡರ್ ಬೇಸ್ಡ್ ಪಾರ್ಟಿ ಅಲ್ಲ, ಕೇಡರ್ ಬೇಸ್ಡ್ ಪಾರ್ಟಿ. ನಾವೂ ಚುನಾವಣೆಗೆ ಸ್ಪರ್ಧಿಸಲು ಸರ್ವಶಕ್ತರಾಗಿದ್ದೇವೆ. ನಮ್ಮ ಪಕ್ಷದ ವರಿಷ್ಠರು ಯಾರಿಗೇ ಟಿಕೆಟ್ ನೀಡಿದರೂ ಕೆಲಸ ಮಾಡುತ್ತೇವೆ. ಇಂತಹ ಮಾತುಗಳು ರೇಣುಕಾಚಾರ್ಯರಿಂದ ಕೂಡ ಬರಲಿ ಎಂದು ಅವರು ಸಲಹೆ ನೀಡಿದರು.

ಕೇವಲ ಒಬ್ಬ ವ್ಯಕ್ತಿಯಿಂದ ಪಕ್ಷವಲ್ಲ, ವ್ಯಕ್ತಿಯೊಬ್ಬರೇ ಪಕ್ಷ ಕಟ್ಟಲು ಸಾಧ್ಯವಿಲ್ಲ, ಆದರೆ, ತಾನೇ ಪಕ್ಷ ಕಟ್ಟಿದವರಂತೆ ರೇಣುಕಾಚಾರ್ಯ ಬಿಂಬಿಸಿಕೊಳ್ಳುತ್ತಿದ್ದಾರೆ. ಹೊನ್ನಾಳಿ ಬಿಜೆಪಿ ಕೂಡ ಮನೆಯೊಂದು ಮೂರು ಬಾಗಿಲು ಎಂಬಂತಿದೆ. ಸಂಘದ ಹಿನ್ನೆಲೆಯ ಅನೇಕ ಹಿರಿಯರು ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ಯೋಗಾಯೋಗದಿಂದ 5 ಸಲ ಸ್ಪರ್ಧಿಸಿದ ರೇಣುಕಾಚಾರ್ಯ ಮೂರು ಸಲ ಗೆದ್ದು, ಒಮ್ಮೆ ಸಚಿವರಾಗಿ, ಮತ್ತೊಂದು ಸಲ ಸಿಎಂ ರಾಜಕೀಯ ಕಾರ್ಯದರ್ಶಿಯಾದರು. ಪಕ್ಷ ಬಯಸಿದರೆ ಆಕಾಂಕ್ಷಿಗಳ ಪೈಕಿ ಯಾರಾದರೂ ಸ್ಪರ್ಧಿಸಲು ಸಿದ್ಧರಿದ್ದೇವೆ. ಇದೆಲ್ಲಾ ಗೊತ್ತಿದ್ದರೂ ರೇಣುಕಾಚಾರ್ಯ ತಾನೊಬ್ಬನೇ ಆಕಾಂಕ್ಷಿ ಎಂಬ ಹೇಳಿಕೆ ನೀಡಿದ್ದನ್ನು ತಕ್ಷಣ ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದರು.

ನಾನು ನಾನೆಂದು ತಲೆ ಎತ್ತಿ ಬೆಳೆದ ಸಜ್ಜೆ ದವಸ ಧಾನ್ಯಗಳಿಂದ ಹೊರಗಿತ್ತು. ನಾವು ನಾವೆಂದು ತಲೆ ಬಾಗಿ ಬೆಳೆದ ಭತ್ತ ಮನುಕುಲದ ಉಣ್ಣುವ ಅನ್ನವಾಗಿತ್ತು. ಇದನ್ನು ರೇಣುಕಾಚಾರ್ಯ ಅರ್ಥ ಮಾಡಿಕೊಳ್ಳಬೇಕು. ಮುಂಬರುವ ವಿಧಾನಸಭೆ ಚುನಾವಣೆಗೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯು ಹೊನ್ನಾಳಿ ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ತೀರ್ಮಾನಿಸುತ್ತದೆ. ಅಲ್ಲಿವರೆಗೂ ರೇಣುಕಾಚಾರ್ಯ ತಾಳ್ಮೆಯಿಂದ ಇರುವುದು ಒಳ್ಳೆಯದು ಎಂದು ಅವರು ಸೂಚ್ಯವಾಗಿ ಹೇಳಿದರು.

ಪಕ್ಷದ ಮುಖಂಡರಾದ ಎ.ಬಿ.ಹನುಮಂತಪ್ಪ ಅರಕೆರೆ, ಯಕ್ಕನಗಳ್ಳಿ ಜಗದೀಶ, ನೆಲಹೊನ್ನೆ ದೇವರಾಜ, ಮಾಸಡಿ ಸಿದ್ದೇಶ, ಯಕ್ಕನಹಳ್ಳಿ ಅವಿನಾಶ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

ಕೊಟ್ಟ ಸಾಲ ವಾಪಸ್ ಕೇಳಿದ್ದಕ್ಕೆ ಮಚ್ಚಿನಿಂದ ತಮ್ಮನ ಕೊಲೆ

ಅಕ್ಕ, ಭಾವನಿಗೆ ಜೀವಾವಧಿ ಶಿಕ್ಷೆ

» 50 ಸಾವಿರ ರೂ. ದಂಡ ಸಹಿತ ಜೀವಾವಧಿ ಶಿಕ್ಷೆ ನೀಡಿ ಆದೇಶಿಸಿದ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

• **ಚಿತ್ರದುರ್ಗ:** ಸಾಲ ಕೊಟ್ಟ ಹಣವನ್ನು ಹಿಂದಿರುಗಿಸುವಂತೆ ಕೇಳಿದ ಪರಿಣಾಮ ಭಾವಮೈದುನನ್ನು ಕೊಲೆಗೈದ ಭಾವ ಮತ್ತು ಅಕ್ಕನಿಗೆ ಇಲ್ಲಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಲಾ 50 ಸಾವಿರ ರೂ. ದಂಡ ಸಹಿತ ಜೀವಾವಧಿ ಶಿಕ್ಷೆ ನೀಡಿ ಆದೇಶಿಸಿದೆ. ಹಿರಿಯೂರು ತಾಲ್ಲೂಕಿನ ಪಿಲಾಲಿ ಗ್ರಾಮದ ತಿಮ್ಮರಾಜು ಹಾಗೂ ಆತನ ಪತ್ನಿ ರಾಧಮ್ಮ ಶಿಕ್ಷೆಗೆ ಗುರಿಯಾದವರು. ರಾಧಮ್ಮ ಅವರ ಸಹೋದರ ಬಸವರಾಜ ಕೊಲೆಯಾದ ದುರ್ದೈವಿ.

ಆರೋಪಿತರು ಹೊಳಲ್ಕೆರೆ ತಾಲ್ಲೂಕಿನ ಶಿವಗಂಗ ಗ್ರಾಮದ ಮೃತ ಬಸವರಾಜ ಅವರ ಬಳಿ 40 ಸಾವಿರ ರೂ. ಹಣ ಸಾಲ ಪಡೆದಿದ್ದರು. 2020 ನೇ ಇಸವಿಯಲ್ಲಿ ಬಸವರಾಜನ ಹೆಂಡತಿ ದಿವ್ಯಾ ಚೊಚ್ಚಲ ಹೆರಿಗೆಗೆಂದು ತವರು ಮನೆಗೆ ಹೋಗಿದ್ದರು. ಕೋವಿಡ್ ಸಾಂಕ್ರಾಮಿಕ ರೋಗದಿಂದ ದೇಶದಾದ್ಯಂತ ಸಂಪೂರ್ಣ ಲಾಕ್‌ಡೌನ್ ಇದ್ದ ಕಾರಣ ಬಸವರಾಜ ತನ್ನ ಅಕ್ಕ ರಾಧಮ್ಮ ಮತ್ತು ಮಕ್ಕಳನ್ನು ಶಿವಗಂಗಾ ಗ್ರಾಮಕ್ಕೆ ಕರೆತಂದು ತನಗೆ ಅಡುಗೆ ಹಾಗೂ ತನ್ನ ಮನೆ ಕೆಲಸ ಮಾಡಲು ಇಟ್ಟುಕೊಂಡಿದ್ದರು.

ಕ್ರಮೇಣ ಬಸವರಾಜ ತನ್ನ ಅಕ್ಕ ರಾಧಮ್ಮ ಹಾಗೂ ಅವರ ಮಕ್ಕಳನ್ನು ಹಿರಿಯೂರಿನ ಪಿಲಾಲಿ ಗ್ರಾಮಕ್ಕೆ ಕಳುಹಿಸಿಕೊಡದೆ ಅವರಿಂದ ಸ್ಟುಡಿಯೋ ಹಾಗೂ ಜೆರಾಕ್ಸ್ ಅಂಗಡಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದ. ಈ ವಿಚಾರ ತಿಳಿದ ಭಾವ ತಿಮ್ಮರಾಜು ಶಿವಗಂಗ ಗ್ರಾಮಕ್ಕೆ ಬಂದು ತನ್ನ ಹೆಂಡತಿ ಮಕ್ಕಳನ್ನು ಕಳಿಸಿಕೊಡುವಂತೆ ಬಸವರಾಜ ಅವರನ್ನು ಕೇಳಿದ. ಆಗ ಬಸವರಾಜ, ನಾನು ಕೊಟ್ಟಿರುವ ದುಡ್ಡು ಅದರ ಬಡ್ಡಿ ಹಾಗೂ ನಿನ್ನ ಹೆಂಡತಿ, ಮಕ್ಕಳನ್ನು 2 ವರ್ಷದಿಂದ ಸಾಕಿದ್ದಕ್ಕೆ ಎಲ್ಲಾ ಸೇರಿ ಒಟ್ಟು 5 ಲಕ್ಷ ರೂ.ಗಳನ್ನು ಕೊಡು. ಇಲ್ಲದಿದ್ದರೆ ಕಳಿಸುವುದಿಲ್ಲ ಎಂದು ಷರತ್ತು ವಿಧಿಸಿದ.

ಇದರಿಂದ ಕೆರಳಿದ ತಿಮ್ಮರಾಜು ಹಾಗೂ ಪತ್ನಿ ರಾಧಮ್ಮ ಮಲಗಿ ನಿದ್ದೆ ಮಾಡುತ್ತಿದ್ದ ಬಸವರಾಜನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದರು. ಅಲ್ಲದೇ ಕೊಲೆಯ ಸುಳಿವು ಸಿಗಬಾರದೆಂದು ರಕ್ತಸಿಕ್ತ ಬಟ್ಟೆ ಹಾಗೂ ಮೊಬೈಲನ್ನು ಸುಟ್ಟು ಹಾಕಿದ್ದರು. ಈ ಕುರಿತು ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ ತನಿಖೆ ನಡೆಸಿದಾಗ ಕೊಲೆ ಪ್ರಕರಣ ಬೆಳಕಿಗೆ ಬಂದಿತ್ತು. ತನಿಖೆ ಪೂರೈಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾಪಟ್ಟಿ ಸಲ್ಲಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿದ್ದು, ಕೊಲೆ ಆರೋಪ ಸಾಬೀತಾದ ಪರಿಣಾಮ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ವೀರಣ್ಣ ಸೋಮಶೇಖರ್‌ರವರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ ನೀಡಿ ತಲಾ 50,000 ರೂ. ದಂಡ ವಿಧಿಸಿ ಆದೇಶಿಸಿದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಶಂಷೀರ್ ಅಲಿಖಾನ್ ವಾದ ಮಂಡಿಸಿದ್ದರು.

ಇಂದಿನಿಂದ ನಾಟಕೋತ್ಸವ

• **ದಾವಣಗೆರೆ:** ಅನ್ವೇಷಕರು ಆರ್ಟ್ಸ್ ಫೌಂಡೇಶನ್ ದಶಮಾನೋತ್ಸವ ಅಂಗವಾಗಿ ರಾಷ್ಟ್ರೀಯ ಬಹುಭಾಷಾ ನಾಟಕೋತ್ಸವವನ್ನು ಏಪ್ರಿಲ್ 17ರಿಂದ 27ರವರೆಗೆ ನಗರದ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಎಂದು ರಂಗಕರ್ಮಿ ಎಸ್.ಎಸ್.ಸಿದ್ದರಾಜು ಮಾತನಾಡಿ, ಏಪ್ರಿಲ್ 17ರಂದು ಸಂಜೆ 6.30ಕ್ಕೆ ನಾಟಕೋತ್ಸವವನ್ನು ಕಿರುವಾಡಿ ಗಿರಿಜಮ್ಮ ಉದ್ಘಾಟಿಸುವರು. ಜಸ್ಟಿನ್ ಡಿಸೋಜ ಅಧ್ಯಕ್ಷತೆ ವಹಿಸುವರು. ರಂಗಕರ್ಮಿ ಕಿರಣ್ ರತ್ನಾಕರ ನಾಯ್ಕ, ಬಿ.ಟಿ.ಜಾಹ್ನವಿ, ಛಾಯಾ ಶ್ರೀಧರ್, ಲತಿಕಾ ಶೆಟ್ಟಿ ಇತರರು ಭಾಗವಹಿಸುವರು ಎಂದು ಹೇಳಿದರು. ಉದ್ಘಾಟನೆ ನಂತರ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ರವರ ಎದೆಯ ಹಣತೆಯ ಸಂಕಲನದಿಂದ ಆಯ್ದ ಒಮ್ಮೆ ಹೆಣ್ಣಾಗು ನಾಟಕ ಪ್ರದರ್ಶನ ಇರುತ್ತದೆ. ಒಟ್ಟು 10 ದಿನಗಳ ಕಾಲ ಶನಿವಾರ ಮತ್ತು ಭಾನುವಾರ ಸಂಜೆ 6.30ಕ್ಕೆ 11 ನಾಟಕಗಳ ಪ್ರದರ್ಶನ ನಡೆಯಲಿದೆ. ಏ.18ಕ್ಕೆ ಕುವೆಂಪು ರಚಿಸಿದ ನನ್ನ ಗೋಪಾಲ ಹಾಗೂ ಹಕ್ಕಿ ಹಾಡು, 25ಕ್ಕೆ ಸಂಕಂಪನಿ ಹಾಸ್ಯ ನಾಟಕ, ಮೇ 2ಕ್ಕೆ ಅಣ್ಣನ ನೆನಪು, 3ಕ್ಕೆ ವರ್ಣ ಪಲ್ಲಟ, 9ಕ್ಕೆ ಅಂಗೈ ರೇಖೆ, 10ಕ್ಕೆ ಹ್ಯಾಂಗ್ ಆನ್, 15ಕ್ಕೆ ಕಿಂದನ್ ಚರಿತಿರಂ, 16ಕ್ಕೆ ಚಿಲ್ಲರ ಸಮರಮ್ ಹಾಗೂ 17ಕ್ಕೆ ಜತೆಗಿರುವನು ಚಂದಿರ ನಾಟಕ ಪ್ರದರ್ಶನ ಜರುಗಲಿದೆ ಎಂದರು. ಎನ್.ಟಿ.ಮಂಜುನಾಥ್, ಡಿ.ಎಸ್.ಚಂದನ್, ನಾಗರಾಜ್ ಸಿರಿಗೆರೆ, ಕೆ.ಎಂ.ಉಮಾಶಂಕರ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

[illegible]

[illegible]

[illegible] ದಿನಾಂಕ: 24.04.2026 [illegible] https://egold.auctiontiger.net ದಿನಾಂಕ: 05.05.2026 [illegible] 3.00 [illegible]

[illegible] - 1062402831, 1062500033, 1062500073, 1062500091, 1062500117, 1062500154, 1062500170, 11062302585, 11062302618, 11062400074, 11062400125, 11062402820, 21062203118, 21062203247, 21062203256, 21062203286, 21062300684, 21062300685, 21062400011, 41062302374, [illegible] - 1152500036, 11152400014, [illegible] - 1162401972, 1162401991, 1162402006, 1162402023, 1162402035, 1162402093, 1162500011, 1162500026, 1162500078, 1162500081, 1162500082, 1162500112, 1162500114, 11162300816, 11162400034, 11162400039, 11162400154, 21162300832, [illegible] - 1172401174, 1172500012, 1172500078, 11172300598, 31172401217.

[illegible] (04.05.2026) [illegible]

[illegible] ದಿನಾಂಕ: 16.04.2026

ಕರ್ನಾಟಕ ಸರ್ಕಾರ
(ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ)

ನಿರ್ದೇಶಕರ ಕಾರ್ಯಾಲಯ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ

ನಂ. ಕೆಎಂಸಿಆರ್‌ಐ/ನಿ.ಕಾ/ಟೆಂಡರ/2026-27/ ದಿನಾಂಕ: 15-04-2026

'ಇ' – ಟೆಂಡರ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಪಿಡಬ್ಲ್ಯುಡಿ) ಯಲ್ಲಿ ಸೂಕ್ತ ದರ್ಜೆಯಲ್ಲಿ ಗುತ್ತಿಗೆದಾರರೆಂದು ನೋಂದಾಯಿಸಿದ ಗುತ್ತಿಗೆದಾರರಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗೆ "ಇ ಪ್ರೊಕ್ಯೂರಮೆಂಟ್" ಮುಖಾಂತರ ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರಗೆ ಇಟ್ಟ ಅಂದಾಜು ಮೊತ್ತ ರೂ.	ಟೆಂಡರ ಫಾರಂ ಬೆಲೆ ರೂ.	ಮುಂಗಡ ಠೇವಣಿ ಹಣ ರೂ.	ಕಾಲಮಿತಿ (ಮಳೆಗಾಲ ಸಹಿತ)	ಅರ್ಹ ಗುತ್ತಿಗೆದಾರರ ದರ್ಜೆ	ವರ್ಗ (Category)
1	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಮುಖ್ಯ ಆಸ್ಪತ್ರೆ ಕಟ್ಟಡದ ಎರಡನೇ ಮಹಡಿ (201-205) ಮತ್ತು ಮೂರನೇ ಮಹಡಿ (301-305) ವಾರ್ಡಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ.	72,60,000.00	ಇ ಪೋರ್ಟಲ್ ಪ್ರಕಾರ	72,600.00	6 ತಿಂಗಳು	3ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ
2	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಮುಖ್ಯ ಕಾಲೇಜ ಕಟ್ಟಡದ ಹಿಂದೆ ಪೆವರ್ಸಗಳನ್ನು ಒದಗಿಸಿ, ಅಳವಡಿಸುವ ಕಾಮಗಾರಿ.	16,95,000.00	ಇ ಪೋರ್ಟಲ್ ಪ್ರಕಾರ	42,375.00	3 ತಿಂಗಳು	4ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ

ಗುತ್ತೇದಾರರು ಕರ್ನಾಟಕ ಸರ್ಕಾರದ "ಇ-ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಲ್ಲಿ ಲಾಗಿನ್ ಆಗಿ ದಿನಾಂಕ: 16-04-2026 ರಿಂದ ಡೌನಲೋಡ್ ಮಾಡಿಕೊಳ್ಳಬಹುದು. ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ ಜಾರಿಯಾಗುವುದು.

ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೈಬ್‌ಸೈಟ್ನಲ್ಲಿ ನಿಗದಿ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್ ಲೈನ್ ಪೇಮೆಂಟ್ ಮಾತ್ರ) "ಇ ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಲ್ಲಿ https://kppp.karnataka.gov.in ಲಾಗಿನ್ ಆಗಿ ದಿನಾಂಕ: 24-04-2026 ಸಾಯಂಕಾಲ 5.00 ಗಂಟೆವರೆಗೆ ಸ್ವೀಕರಿಸಲಾಗುವುದು. ಯಾವುದೇ ಟೆಂಡರನ್ನು ಸ್ವೀಕರಿಸುವ, ಇಲ್ಲವೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದರುವ ಹೊಂದಿರುತ್ತಾರೆ.

ಕಾಮಗಾರಿ ಪಡೆಯಲು ಅರ್ಹತೆ ಷರತ್ತುಗಳು ಕಾಮಗಾರಿ ವಿವರ ಇತ್ಯಾದಿಗಳನ್ನು ದಿನಾಂಕ: 16-04-2026 "ಇ ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಿಂದ ಪಡೆಯಬಹುದು. 080-25501216/25501227.

ಸಹಿ/- ನಿರ್ದೇಶಕರು, ಕೆ.ಎಂ.ಸಿ.ಆರ್.ಐ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತಿ. ನರಸೀಪುರ

ತಾಲ್ಲೂಕು-571124 ದೂ.ಸಂ.: 08227-297267, -

Email: cdpotnpur@gmail.com

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿಗೆ ಬಾಹ್ಯಮೂಲದ ಆಧಾರದ ಮೇಲೆ ಡಿ.ಎ. ಆಕ್ಟ್ ಯೋಜನೆಗೆ ಓರ್ವ ಕಂಪ್ಯೂಟರ್ ಆಪರೇಟರ್, ಓರ್ವ ಮೆಸೆಂಜರ್ ರವರ ಸೇವೆ ಪಡೆಯಲು ನಿಯಮಾನುಸಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ದಿ: 02.05.2026ರ ಸಂಜೆ 4.00 ಗಂಟೆಯೊಳಗೆ ಆಸಕ್ತಿ ಇರುವ ಸಂಸ್ಥೆ/ವ್ಯಕ್ತಿ ಇವರು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಇ-ಪ್ರಕ್ಯೂರ್ ಮೆಂಟ್ ವೆಬ್ ಸೈಟ್ (https://kppp.karnataka.gov.in) ಹಾಗೂ ಕಛೇರಿ ವೇಳೆಯಲ್ಲಿ ದೂರವಾಣಿ: 08227-297267, ಮೊ:9731669565ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿ, ತಿ. ನರಸೀಪುರ.

DIPR/DDMYS/61/KSMCA/46/2026-27

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ-21

KARNATAKA MEDICAL COLLEGE AND RESEARCH INSTITUTE HUBBALLI - 21

Email: directorkimshubli@gmail.com Phone No: 0836-2373348

ಸಂ: ಕೆಎಂಸಿಆರ್‌ಐ/ಹೂಪಿ(6)/42/2026-27 ದಿನಾಂಕ: 16/04/2026

ಇ-ಟೆಂಡರ್ ಪ್ರಕಟಣೆ

(ಮಾನವ ಸಂಪನ್ಮೂಲ ಸೇವೆಗಳ ಟೆಂಡರ್)

I) ಇಂಡೆಂಟ್ ನಂ: DME/2026-27/SE0718

2026-27 ನೇ ಸಾಲಿಗಾಗಿ ಕೆಎಂಸಿಆರ್‌ಐ ಹುಬ್ಬಳ್ಳಿಯಲ್ಲಿರುವ ಆಸ್ಪತ್ರೆ ಮತ್ತು ವಿವಿಧ ವಿಭಾಗಗಳಿಗೆ ಅಗತ್ಯವಿರುವ ವಿವಿಧ ತಂತ್ರಜ್ಞರ ಸೇವೆಗಳನ್ನು ಮಾನವ ಸಂಪನ್ಮೂಲ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಪ್ಯಾಕೇಜ್-10ರ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪ್ರತ್ಯೇಕ ಇ.ಎಂ.ಡಿ ಮೊತ್ತದೊಂದಿಗೆ ಈ ಟೆಂಡರ್ ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು, ಟೆಂಡರ್ ಶುಲ್ಕ ಮತ್ತು ಇತ್ಯಾದಿ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ನಿರ್ದೇಶಕರು,
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಗೌರವಾನ್ವಿತ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯದಲ್ಲಿ

ಸಿ.ಆರ್.ಮಿಸ್.ನಂ : 50/2026

ಅರ್ಜಿದಾರರು: 1) ಶ್ರೀ ಗಂಗಾನಾಯ್ಕ ಬಿನ್ ಬಿನ್ ತೋಳಿನಾಯ್ಕ, ವಯಸ್ಸು 68 ವರ್ಷ, 2)ಸಾವಿತ್ರಿಬಾಯಿ ಕೋಂ ಗಂಗಾನಾಯ್ಕ, ವಯಸ್ಸು ಸುಮಾರು 60 ವರ್ಷ, 3)ವಾಣಿ ಬಾಯಿ ಬಿನ್ ಗಂಗಾನಾಯ್ಕ, ವಯಸ್ಸು 34 ವರ್ಷ, 4)ಪ್ರಶಾಂತ್‌ಕುಮಾರ್.ಜಿ. ಬಿನ್ ಗಂಗಾನಾಯ್ಕ, ವಯಸ್ಸು 32 ವರ್ಷ, ಎಲ್ಲರೂ ವ್ಯವಸಾಯ ಕೆಲಸ, ವಾಸ: ಹೊಳಲ್ಕೆರೆ ಲಂಬಾಣಿಹಟ್ಟಿ, ಕಸಬಾ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

ವಿರುದ್ಧ

ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು/ಮಾನ್ಯ ತಹಶೀಲ್ದಾರ್ ರವರು, ತಾಲ್ಲೂಕು ಕಛೇರಿ, ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ಮತ್ತು 2ನೇ ಅರ್ಜಿದಾರರ ಮಗ ಮತ್ತು 3 ಮತ್ತು 4ನೇ ಅರ್ಜಿದಾರರ ಸಹೋದರರಾದ **ಶ್ರೀ ಅರುಣ್‌ನಾಯ್ಕ.ಜಿ ಬಿನ್ ಗಂಗಾನಾಯ್ಕ** ರವರು ಹೊಳಲ್ಕೆರೆ ತಾಲ್ಲೂಕು, ಕಸಬಾ ಹೋಬಳಿ, ಹೊಳಲ್ಕೆರೆ ಲಂಬಾಣಿಹಟ್ಟಿಯಲ್ಲಿ **ದಿನಾಂಕ:25-07-2024** ರಂದು ಮರಣ ಹೊಂದಿರುತ್ತಾರೆ ಎಂದು ಮರಣಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ **ಶ್ರೀಅರುಣ್‌ನಾಯ್ಕ.ಜಿ ಬಿನ್ ಗಂಗಾನಾಯ್ಕ** ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ **ದಿನಾಂಕ :16-05-2026 ಬೆಳಗ್ಗೆ 11-00 ಗಂಟೆಗೆ** ಮುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮುದ್ರೆ ನನ್ನ ಸಹಿಯೊಂದಿಗೆ ದಿನಾಂಕ:16/4/2026ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಆದೇಶದ ಮೇರೆಗೆ
ಶ್ರೀ ಡಿ.ಜಯಣ್ಣ,	ಸಹಿ/-ಶಿರಸ್ತೇದಾರರು,
ವಕೀಲರು, ಹೊಳಲ್ಕೆರೆ	ಹಿರಿಯ ಸಿವಿಲ್ ನ್ಯಾಯಾಧೀಶರು
ದಿನಾಂಕ:16-04-2026	ಮತ್ತು ಜೆ.ಎಂ.ಎಫ್.ಸಿ. ಹೊಳಲ್ಕೆರೆ

CHANGE OF NAME

I, **SHAMSHUDDIN DAVEGIRI** (Old Name) Resident of 4th Main 11th Cross, J C Badavane, Harihar 577601 (address), have changed my name as **SHAMSHUDDIN** (New Name) henceforth I will be called and recognized by new name for all future purposes, dated: 16/04/2026.

ನಿಮ್ಮ ಮನೆಗೆ ದಿನಪತ್ರಿಕೆ ಹಾಕುವ ಹುಡುಗರಲ್ಲಿ ಹಾಗೂ ದಿನ ಪತ್ರಿಕೆಗಳನ್ನು ಮಾರುವ ನಿಮ್ಮ ಏರಿಯಾದ ಅಂಗಡಿಗಳಲ್ಲಿ

ಹೊಸ ದಿಗಂತ

ಲಭ್ಯ, ಕೇಳಿ ಪಡೆಯಿರಿ...

88612 09077
9964391692

ಹೊಸ ದಿಗಂತ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ವಿಭಾಗ, ಹುಬ್ಬಳ್ಳಿ

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 — ದಿನಾಂಕ: 15-04-2026

ಅಲ್ಪಾವಧಿ/ಇ-ಟೆಂಡರ್ ಅಧಿಸೂಚನೆ

ಜಾಹಿರಾತು ನಂ:- ದಿನಾಂಕ:- ಉಲ್ಲೇಖ: ಜಾಹಿರಾತು ನಂ:- 1370 ದಿನಾಂಕ:- 17-03-2026,

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ ವಾರ್ಡ ವಾರು ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ:-

1) ಇಂಡೆಂಟ್ ನಂ- 57401 ರೂ. 49.10ಲಕ್ಷ 2) ಇಂಡೆಂಟ್ ನಂ- 57402 ರೂ. 9.56ಲಕ್ಷ 3) ಇಂಡೆಂಟ್ ನಂ- 57205 ರೂ. 12.63ಲಕ್ಷ 4) ಇಂಡೆಂಟ್ ನಂ- DMA/2026-27/Auction6473 ಟೆಂ.ಮೊ.ರೂ. 200000/- ಇಎಂಡಿ ಮೊತ್ತ 100000/-

ಮರು ಕರೆ ಕಾಮಗಾರಿಗಳು:-

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ:-

5) ಇಂಡೆಂಟ್ ನಂ- 53039 ರೂ. 24.00ಲಕ್ಷ (4ನೇ ಕರೆ) 6) ಇಂಡೆಂಟ್ ನಂ- 44230 ರೂ. 8.95ಲಕ್ಷ (6ನೇ ಕರೆ) 7) ಇಂಡೆಂಟ್ ನಂ- 46141 ರೂ. 5.00ಲಕ್ಷ (8ನೇ ಕರೆ) 8) ಇಂಡೆಂಟ್ ನಂ- 37838 ರೂ. 4.00ಲಕ್ಷ (8ನೇ ಕರೆ) 9) ಇಂಡೆಂಟ್ ನಂ- 44536 ರೂ. 6.45ಲಕ್ಷ (8ನೇ ಕರೆ) 10) ಇಂಡೆಂಟ್ ನಂ- 46020 ರೂ. 18.00ಲಕ್ಷ (8ನೇ ಕರೆ) 11) ಇಂಡೆಂಟ್ ನಂ- 45514 ರೂ. 8.20ಲಕ್ಷ (8ನೇ ಕರೆ) 12) ಇಂಡೆಂಟ್ ನಂ- 44209 ರೂ. 3.75ಲಕ್ಷ (8ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836-2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **17-04-2026** ಪಡೆಯಬಹುದಾಗಿದೆ.

ಕ್ರ. ಸಂ **01** ರಿಂದ **03** ಹಾಗೂ **05** ರಿಂದ **12**ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **27-04-2026** ರಂದು ಸಾಯಂಕಾಲ **4.00** ಗಂಟೆಯವರೆಗೆ. ಕ್ರಸಂ **01** ರಿಂದ **03** ಹಾಗೂ **05** ರಿಂದ **12**ರ ಟೆಂಡರ್ ತೆರೆಯುವ ದಿನಾಂಕ: **28-04-2026** ಸಾಯಂಕಾಲ **4.30** ಗಂಟೆಯ ನಂತರ ತೆರೆಯಲಾಗುವುದು.

ಕ್ರಸಂ **04**ರ ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ (e-Auction) ಯಾವುದಾದರು ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP) ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ನಿಯಮಗಳನ್ನು ಒಳಗೊಂಡಿರುವ ಟೆಂಡರ್ ದಾಸ್ತಾವೇಜನ್ನು ಅಂತರ್ ಜಾಲ ವಿಳಾಸ **kppp.karnataka.gov.in** ರಲ್ಲಿ ದಿನಾಂಕ: **17-04-2026** ರಿಂದ ಪಡೆಯಬಹುದಾಗಿದೆ ಹೆಚ್ಚಿನ ಮಾಹಿತಿ ಕುರಿತು ಸರಬರಾಜುದಾರರು (Bidders) ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಹು-ಧಾ, ಮಹಾನಗರ ಪಾಲಿಕೆ ರವರ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

- ಡೌನಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 20-04-2026 ರಂದು 17.30:00 ಗಂಟೆಯವರೆಗೆ**
- ಇ-ಹರಾಜು ಪಾಲ್ಗೊಳ್ಳಲು ಕೊನೆಯ **ದಿನಾಂಕ: 23-04-2026 ರಂದು 17.30:00 ಗಂಟೆಯವರೆಗೆ**
- ಇ-ಹರಾಜು ಜರುಗುವ **ದಿನಾಂಕ: 27-04-2026 ರಂದು ಮುಂಜಾನೆ 10.00 ಗಂಟೆಯಿಂದ ಸಾಯಂಕಾಲ 5:30 ಘಂಟೆಯವರೆಗೆ**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ./ಧಾರವಾಡ/64/2026-27/ಟೇಕಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗದಗ, ಇವರ ಕಾರ್ಯಾಲಯ

ದೂರವಾಣಿ : 08372-250758 ಇ-ಮೇಲ್ : dcpogadag@gmail.com

ಸಂ:ಜಿಮರಅ/ಜಿಮರಘ/ಗ/ಪ್ರ.ಕು/2026-27/41 ದಿನಾಂಕ : 15.04.2026

ಗಂಡು ಮಗುವಿನ ಪತ್ತೆ

ದಿನಾಂಕ:06-09-2022 ರಂದು ಕುರ್ತಕೋಟಿ ಗ್ರಾಮದ ಸಾರ್ವಜನಿಕ ಹಿತಾಸಕ್ತಿ ಹೊಂದಿದ ವ್ಯಕ್ತಿಗಳು ಬಾಲಕ ಶ್ರೀಧರ ನಾಗೇಶ ಹರ್ಜಿ ಇವನನ್ನು ರಕ್ಷಿಸಿ ರಕ್ಷಣೆ-ಪೋಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿ ಗದಗ ಇಲ್ಲಿಗೆ ಹಾಜರುಪಡಿಸಿದ್ದು, ಅದರಂತೆ ಬಾಲಕನ ರಕ್ಷಣೆ-ಪೋಷಣೆಗಾಗಿ ಮಾನ್ಯ ಅಧ್ಯಕ್ಷರು ಮಕ್ಕಳ ಕಲ್ಯಾಣ ಸಮಿತಿಯವರ ಆದೇಶದಂತೆ ಬಾಲಕರ ಸರಕಾರಿ ಬಾಲಮಂದಿರದಲ್ಲಿ ದಾಖಲಿಸಿಕೊಳ್ಳಲಾಯಿತು. ಬಾಲಕನ ತಾಯಿ ತೀರಿಕೊಂಡಿದ್ದು, ತಂದೆಯು ಇನ್ನೊಬ್ಬ ಮಹಿಳೆಯೊಂದಿಗೆ ಮದುವೆಯಾಗಿ ಬಾಲಕನನ್ನು ಕುರ್ತಕೋಟಿ ಗ್ರಾಮದಲ್ಲಿ ರಾತ್ರೋ ರಾತ್ರಿ ಬಿಟ್ಟು ಹೋಗಿರುತ್ತಾರೆ. ಬಾಲಕನ ಪುನರ್ವಸತಿ ಕಲ್ಪಿಸುವುದು ಅವಶ್ಯಕವಾಗಿದ್ದರಿಂದ ಇವರು ಬಾಲಕನ ಪಾಲಕರ/ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲು ಹಾಗೂ ಮಗುವನ್ನು

ಕಾನೂನು ಬದ್ಧ ದತ್ತು ಪ್ರಕ್ರಿಯೆಗೆ ಒಳಪಡಿಸಲು ಈ ಮೂಲಕ ಮಗುವನ್ನು ಕುಟುಂಬ ವ್ಯವಸ್ಥೆಯಲ್ಲಿ ಪುನರ್ವಸತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಜೈವಿಕ ಪಾಲಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಬಾಲಕನಿಗೆ ಸಂಬಂಧಿಸಿದವರು ಸೂಕ್ತ ದಾಖಲೆಗಳೊಂದಿಗೆ 30 ದಿನಗಳೊಳಗಾಗಿ ಮಕ್ಕಳ ಕಲ್ಯಾಣ ಸಮಿತಿ, ಗದಗ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ ರೂ ನಂ-225 ಜಿಲ್ಲಾಡಳಿತ ಭವನ, ಗದಗ ಈ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.

ವಾಸಾಸಂಇ/ಗದಗ/ಕೆಎಸ್ಎಂಸಿಎ/27/2026-27 ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಗದಗ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ಎಸ್.ಬಿ.ಸಿ ಪಾ.ಕಾ.ಪೋ ವಿಭಾಗ, ಭೀಮರಾಯನಗುಡಿ-585287 ತಾ: ಶಹಾಪೂರಜಿ: ಯಾದಗಿರಿ. email:kbjnleesbc@gmail.com

ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎಸ್.ಡಿ/ಯೋಶಾ/2026-27/21 — ದಿನಾಂಕ:10.04.2026

ಟೆಂಡರ್ ಪ್ರಕಟಣೆ

(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇದರ್ಜೆ ಹಾಗೂ ಮೇಲ್ಪಟ್ಟಗುತ್ತಿಗೆದಾರರಿಂದ "Survey, Investigation, Design, Supply, Erection, Testing and Commissioning of required Number of Vertical Turbine Pumps coupled to HT Motor for providing Irrigation facility to Suffering atchkat 2847 Ha. of Lateral No.27 to 32 of Dy.No.6 of Shahapur Branch Canal from Karnal Nala under Karnal LIS in Shorapur Taluk Yadagir District Viz., Construction of Diversion Weir, Intake Forebay, Jackwell Cum Pump House, Manifold along With Electrical Panel, Soft Starter, Capacitor, 11 KV Power Transformers, HT Bus Bar / Cabling, 11/6.6 KV Sub-Station, Power Line and 11 KV Terminal Bay, MS Rising Main, Valves and Construction of Delivery Chamber, ERM to Lateral 27 & 31 of Dy.No.6 (selected reach) Supply of Spare, Accessories and Tools Including Operation & Maintenance of the entire System for five years from the date of successful Commissioning of Karnal Lift Irrigation Scheme on Turnkey Basis".(Work indent no:KBJNL/2025-26/ LI/ WORK_INDENT2778)"ಎಂಬ ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್‌ಮೂಲಕ ಆಹ್ವಾನಿಸಲಾಗಿದೆ.

1) **ಲಕೋಟೆ ಪದ್ಧತಿ:** ದ್ವಿ-ಲಕೋಟೆ 2) **ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/LI/WORK_INDENT2775)" 3)**ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 14.04.2026 ರಿಂದ 12.05.2026 ಸಂಜೆ 5.00 ಗಂಟೆಯವರೆಗೆ 4) **ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 22.04.2026 ರಂದು ಸಂಜೆ 5.30 ಗಂಟೆಯವರೆಗೆ 5) **ಪ್ರೀ-ಬಿಡ್ ಸಭೆ ಜರುಗುವ ದಿನಾಂಕ:** 23.04.2026 ರಂದು ಬೆಳಗ್ಗೆ 11.30 ಗಂಟೆಗೆ 6) **ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 12.05.2026 ರಂದು ಸಂಜೆ 5.00 ಗಂಟೆಯವರೆಗೆ 7) **ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:** 14.05.2026ರಂದು ಬೆಳಗ್ಗೆ 11.00ಗಂಟೆಗೆ 8) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 18.05.2026 ರಂದು ಬೆಳಗ್ಗೆ 11.30ಗಂಟೆಗೆ (ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ.ಕಾ.ಪೋ.ವಿಭಾಗ
ಭೀಮರಾಯನಗುಡಿ

ವಾ.ಸಾ.ಸಂ.ಇ/ಯಾದಗಿರ/28/ಕೆ.ಎಸ್.ಎಂ.ಸಿ.ಏ/2026-27

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)

E-Mail :- ka.chikkaballapur.dudc@gmail.com, Ph: 08156-277005

ಸಂ:ಜಿನಕೋ/ಚಿಕಿ(1)/ತಾಶಾ/ಅ.ನ-4/09/2026-27 — ದಿನಾಂಕ:09.04.2026

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ಈ ಕೆಳಕಂಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ:** (1) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಶಿಡ್ಲಘಟ್ಟ ನಗರಸಭೆಗೆ ವಿಶೇಷ ಚೇತನರಿಗೆ ವಿದ್ಯುತ್ ಟೈಲರಿಂಗ್ ಮಿಷನ್ ಖರೀದಿಸಿ ನೀಡುವುದು.(DMA/2025-26/IND5722/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 4.99ಲಕ್ಷ. (2) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗೌರಿಬಿದನೂರು ನಗರಸಭೆಗೆ ಪರಿಶಿಷ್ಟ ಜನಾಂಗದವರಿಗೆ ಗ್ಯಾಸ್ ಗೀಸರ್ ವ್ಯವಸ್ಥೆ ಕಲ್ಪಿಸುವುದು. (DMA/2025-26/IND5719/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 20.97 (3) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ಪೌರಕಾರ್ಮಿಕರಿಗೆ ಶುದ್ಧ ಕುಡಿಯುವ ನೀರಿನ ಆರ್.ಓ. ಫಿಲ್ಟರ್‌ಗಳನ್ನು ವಿತರಿಸುವುದು. (DMA/2025-26/IND5720/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 11.97 (4) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ Ear Hearing Aid ಖರೀದಿಸುವುದು (DMA/2025-26/IND5650/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 2.97. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.04.2026ರ ಸಂಜೆ 05.30 ಗಂಟೆಗೆ** (2) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.04.2026 ರ ಪೂರ್ವಾಹ್ನ 11.00 ಗಂಟೆಗೆ.** (3) ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04.05.2026 ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:27/ಕೆಎಸ್ಎಂಸಿಎ/2026-27

ನಗರಸಭಾ ಕಾರ್ಯಾಲಯ, ಹಿರಿಯೂರು-577598

E-Mail:ka.hiriyur.cmc@gmail.com ದೂರವಾಣಿ:08193-263220

ನಂ.ನ.ಸ.ಹಿ/ತಾ.ವಿ/15ನೇಹಣಕಾಸು/ನನಿ/ಟೆಂ.ಸಿಆರ್:01/2026-27
ದಿನಾಂಕ:13/04/2026

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ 15ನೇ ಹಣಕಾಸು ಬಡ್ಡಿ ಅನುದಾನ ಮತ್ತು ನಗರಸಭೆ ನಿಧಿ ಅನುದಾನಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ/ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.

ಕಾಮಗಾರಿಗಳ ಇಂಡೆಂಟ್ ವಿವರ :-

(1) DMA/2026-27/BD/WORK_INDENT57330
ಅಂದಾಜು ಮೊತ್ತ ರೂ: ಲಕ್ಷಗಳಲ್ಲಿ:- 33.00 ಇ.ಎಂ.ಡಿ (ರೂಗಳಲ್ಲಿ):-55,625.00
(2) DMA/2026-27/BD/WORK_INDENT57318
ಅಂದಾಜು ಮೊತ್ತ ರೂ: ಲಕ್ಷಗಳಲ್ಲಿ:- 21.90 ಇ.ಎಂ.ಡಿ (ರೂಗಳಲ್ಲಿ):-50,000.00
ಕೊನೆಯ ದಿನಾಂಕ: (ಸಂಜೆ: 5:00) 23/04/2026
ತೆರೆಯುವ ದಿನಾಂಕ: (ಸಂಜೆ: 05:05ರ ನಂತರ) 24/04/2026
ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

DIPR/CTA/KSMCA/38/2026-27

ಸಹಿ/- ಪೌರಾಯುಕ್ತರು,
ನಗರಸಭೆ, ಹಿರಿಯೂರು.

ಪತ್ರಿಕಾ ಪ್ರಕಟಣೆ

ನನ್ನ ಬಾಬ್ತು, ತೀರ್ಥಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಚಕ್ಕೋಡಬೈಲು ಗ್ರಾಮದ ಸನಂ.99ಲ್ಲಿ ರಚಿಸಿರುವ ನಿವೇಶನಗಳ ಪೈಕಿ, 34, ಹೆಗ್ಗೋಡು ಗ್ರಾಮ ಪಂಚಾಯತಿ ಅಸೆಸ್ಮೆಂಟ್ ಸಂಖ್ಯೆ188/99/34, ಇ-ಸ್ವತ್ತು ಸಂಖ್ಯೆ:152400703600420008 ನಿವೇಶನದ ಅಳತೆ 18.288ಮೀ x 12.192ಮೀ ಒಟ್ಟು 222.97 ಚಮೀ ವಿಸ್ತೀರ್ಣದ ನಿವೇಶನಕ್ಕೆ ಸಂಬಂಧಿಸಿದ ತೀರ್ಥಹಳ್ಳಿ ತಹಶೀಲ್ದಾರ್ ರವರು ಗೋವಿಂದ ಶೆಟ್ಟಿ ಬಿನ್ ನಾಗಪ್ಪ ಶೆಟ್ಟಿ ಇವರಿಗೆ ದಿನಾಂಕ:31/07/1975 ರಂದು ನೀಡಿರುವ ಮೂಲಪತ್ರ ಪತ್ರವನ್ನು ನಾನು ಸಂರಕ್ಷಿಸುವ ಉದ್ದೇಶದಿಂದ ಲ್ಯಾಮಿನೇಷನ್ ಮಾಡಿಸಿರುತ್ತೇನೆ. ನಾನು ಈ ಸ್ವತ್ತನ್ನು ಆಧಾರಮಾಡಿ ಹಣಕಾಸು ನೆರವು ಪಡೆಯಲು ಉದ್ದೇಶಿಸಿರುತ್ತೇನೆ. ಈ ಕ್ರಯಪತ್ರವನ್ನು ಲ್ಯಾಮಿನೇಷನ್ ಮಾಡಿರುವ ಬಗ್ಗೆ ಯಾರಿಗಾದರು ತಕರಾರು ಇದ್ದಲ್ಲಿ 7 ದಿನದೊಳಗೆ ಈ ಕೆಳಕಂಡ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ, ಇಲ್ಲವಾದಲ್ಲಿ ಯಾವುದೆ ತಕರಾರು ಇಲ್ಲವೆಂದು ಭಾವಿಸುತ್ತೇನೆ.

ಶ್ರೀಸಂತೋಷ ಕುಮಾರ ಹೆಚ್.ಎಸ್‌ಬಿನ್ ಸಂಜೀವ ಶೆಟ್ಟಿ
ಚಕ್ಕೋಡಬೈಲು ಗ್ರಾಮ, ಆಗುಂಬೆ ಹೋಬಳಿ
ತೀರ್ಥಹಳ್ಳಿ ತಾಲ್ಲೂಕು

ಮಾನ್ಯ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಚಿಕ್ಕಮಗಳೂರು

ಅಸಲು ದಾವಾ ನಂ 286/2025

ವಾದಿ : **ಶ್ರೀ ಜಲರಿಗೌಡ, ಬಿನ್ ರಂಗೇಗೌಡ**
ಸುಮಾರು 37 ವರ್ಷ, ವಾಸ: ಅರಳಿಮರ ಸರ್ಕಲ್, ದಂಟರಮಕ್ಕಿ, ಜ್ಯೋತಿ ನಗರ ಅಂಚೆ, ಚಿಕ್ಕಮಗಳೂರು.

ವಿರುದ್ಧ

ಪ್ರತಿವಾದಿ : **ಶ್ರೀಮತಿ ಪ್ರೇಮ ಕೋಂ. ಲೇಟ್ ಆರ್. ಮುಂಜೇಶ್**
ಸುಮಾರು 51 ವರ್ಷ, ವಾಸ: ಅರಳಿಮರ ಸರ್ಕಲ್, ದಂಟರಮಕ್ಕಿ, ಜ್ಯೋತಿ ನಗರ ಅಂಚೆ, ಚಿಕ್ಕಮಗಳೂರು.

ಪತ್ರಿಕಾ ಪ್ರಕಟಣೆ ನೋಟಿಸ್

ಈ ಪ್ರಕರಣದ ವಾದಿ ಪ್ರತಿವಾದಿಯ ವಿರುದ್ಧ ಹಣ ವಸೂಲಾತಿಗಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ ಸದರಿ ವಿಳಾಸದಲ್ಲಿ ವಾಸವಿದ್ದರೂ ಸಹ ಈ ನ್ಯಾಯಾಲಯದಿಂದ ಕಳುಹಿಸಿದ ನೋಟೀಸ್ ಪಡೆಯದೆಗಳನ್ನು ನಿರಾಕರಿಸುತ್ತಾರೆ. ಸದರಿ ಪ್ರಕರಣವು ದಿನಾಂಕ **29/04/2026** ರಂದು **11.00** ಗಂಟೆಗೆ ವಿಚಾರಣೆಗೆ ಇರುತ್ತದೆ. ಸದರಿ ದಿನಾಂಕದಂದು ಪ್ರತಿವಾದಿಗಳು ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ ವಾದಿಗಳು ಕೋರಿರುವಂತೆ ಏಕ ಪಕ್ಷೀಯವಾಗಿ ಪರಿಗಣಿಸಲಾಗುವುದು.

ಸಹಿ/- ಬಿ.ಎಸ್. ತೇಜಸ್ವಿ	ನ್ಯಾಯಾಲಯದ ಆದೇಶದ ಮೇರೆಗೆ
ಅರ್ಜಿದಾರರ ಪರ ವಕೀಲರು,	ಸಹಿ/- ಶಿರಸ್ತೇದಾರರು
ಚಿಕ್ಕಮಗಳೂರು	2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ದಿನಾಂಕ : 08.04.2026	ಜೆ.ಎಂ.ಎಫ್.ಸಿ. ನ್ಯಾಯಾಲಯ ಚಿಕ್ಕಮಗಳೂರು

ಕರ್ನಾಟಕ ಗೃಹ ಮಂಡಳಿ

5ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/CE/AEF/S&S/Hoovinahalli-Hassan/ KHB/2026-27/SE0378 Date: 16.04.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿ ಹೂವಿನಹಳ್ಳಿ ಕಾವಲ್ ಮತ್ತು ಹೂವಿನಹಳ್ಳಿ ಗ್ರಾಮದಲ್ಲಿ 494 ಎಕರೆ 14.12 ಗುಂಟೆ ಜಮೀನಿನಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿಗೆ ವಾಸ್ತುಶಿಲ್ಪ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 30.04.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511, website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾತ್ರ/210/ಆರ್‌ಓ/2026-27

ಮಾನ್ಯ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ,ಶಿವಮೊಗ್ಗ

ಸಿ.ಮಿಸ್.ನಂ : 84/2026

ಅರ್ಜಿದಾರರು: 1) ಸಂಜೀವಯ್ಯ ಹೆಚ್. ಬಿನ್ ಲೇಟ್ ಹನುಮಂತಪ್ಪ, ವಯಸ್ಸು ಸುಮಾರು 73 ವರ್ಷ, 2)ರಾಮಾಂಜನೇಯ ಬಿನ್ ಲೇಟ್ ಹನುಮಂತಪ್ಪ, ವಯಸ್ಸು ಸುಮಾರು 72 ವರ್ಷ. ಇಬ್ಬರ ವಾಸ:1ನೇ ಮುಖ್ಯ ರಸ್ತೆ, ಸಿದ್ದೇಶ್ವರ ನಗರ, ಚಿಕ್ಕಲ್,ಶಿವಮೊಗ್ಗ.

ವಿರುದ್ಧ

ಎದುರುದಾರರು : ಆಯುಕ್ತರು, ಮಹಾನಗರಪಾಲಿಕೆ, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರರ ತಾಯಿಯಾದ **ಗಂಗಮ್ಮ ಕೋಂ ಲೇಟ್ ಹನುಮಂತಪ್ಪ** ಇವರು **ದಿನಾಂಕ:05-04-2021** ರಂದು 1ನೇ ಮುಖ್ಯ ರಸ್ತೆ, 4ನೇ ತಿರುವು, ಸಿದ್ದೇಶ್ವರ ನಗರ, ಚಿಕ್ಕಲ್, ಶಿವಮೊಗ್ಗದಲ್ಲಿ ಮರಣ ಹೊಂದಿರುತ್ತಾರೆ. ಆದರೆ ಆ ಸಂಬಂಧ ಅವರ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗಿರುವುದಿಲ್ಲ, ಆದ್ದರಿಂದ ಅರ್ಜಿದಾರರು ಸದರಿ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಆದೇಶಿಸಬೇಕೆಂದು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮರಣ ಸಮರ್ಥನಾ ಪತ್ರ ನೀಡುವಲ್ಲಿ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:06-05-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಲೀ ಅಥವಾ ತಮ್ಮ ಅನುಮತಿ ಪಡೆದ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು ಎಂದು ಈ ಮೂಲಕ ತಿಳಿಯುವುದು.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಜೆ.ಸಿ. ಚಂದ್ರಶೇಖರ್, ವಕೀಲರು	ಸಹಿ/-ಶಿರಸ್ತೇದಾರರು,
ಸ್ಥಳ: ಶಿವಮೊಗ್ಗ	ಮಾನ್ಯ 3ನೇ ಜೆ.ಎಂ.ಎಫ್.ಸಿ.
ದಿನಾಂಕ:15-04-2026	ನ್ಯಾಯಾಲಯ, ಶಿವಮೊಗ್ಗ

ಶಿಕಾರಿಪುರದ ಮಾನ್ಯ ಹಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಆರ್.ಎ.ನಂ : 53/2024

ಮೇಲ್ಮನವಿದಾರರು : ಮೋಸಿನ್ ಅಲಿ @ಬಾಷಾ ಸಾಬ್

ವಿರುದ್ಧ

ಎದುರುದಾರರು : ಶ್ರೀಮತಿ ತಾಹೀರಾಬೀ ಮತ್ತು ಇತರೆ.

RESPONDENTS No. 2(c) Sadiq Basha S/o Rashid sab. **2(e)** Hazarath Manzil Farzana) d/o Rashid sab both. Majors Both are residents of Argara gundi Baikampady Surathkal Mangalore-5750011. **2(h)** Munzira w/o Umar Faruq Wood worker. **2 (i)** Mubashira w/o Athik Both are r/o 1st cross, Tippu nagara Shivamogga.

ತಿಳುವಳಿಕೆ

ಮೇಲ್ಮನವಿದಾರನು ಎದುರುದಾರರಾದ ಶ್ರೀಮತಿ ತಹರಾಬೀ ಮತ್ತು ಇತರೆಯವರ ಮೇಲೆ ಅ.ದಾ.ನಂ.216ನಂ. ದಾವೆಯಲ್ಲಿ ಆದ ಡಿಕ್ರಿ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರೀ ಮೇಲ್ಮನವಿಯಲ್ಲಿ 2ನೇ ಎದುರುದಾರ ರಶೀದ್ ಸಾಬ್ ಇವರು ಮೃತ ಪಟ್ಟಿದ್ದು, ಅವರ ವಾರಸುದಾರರಾದ ಹೆಂಡತಿ ಮತ್ತು ಮಕ್ಕಳನ್ನು ವಾರಸುದಾರರನ್ನಾಗಿ ಪಕ್ಷಗಾರರನ್ನಾಗಿ ಮಾಡಿದ್ದು, ಸದರಿ ಮೇಲ್ಮನವಿಯಲ್ಲಿ ರಶೀದ್ ಸಾಬ್ ಇವರ ಮಕ್ಕಳಲ್ಲಿ 2(ಸಿ) ಸಾದಿಕ್ ಬಾಷಾ 2(ಇ) ಹಜರತ್ ಮಂಜಿಲ್ (ಫರ್ಜಾನಾ ಕೋಂ ರಶೀದ್ ಸಾಬ್, 2(ಹೆಚ್) ಮುನಜೀರ್ ಕೋಂ ಉಮರ್ ಫರೂಕ್ 2(ಐ) ಮುಬಶೀರಾ ಕೋಂ ಆತೀಕ್ ಇವರನ್ನು ಮೇಲ್ಕಂಡ ಮನವಿಯಲ್ಲಿ ನಿಮ್ಮನ್ನು ಅವಶ್ಯ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಲು ಮೇಲ್ಮನವಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ನ್ಯಾಯಾಲಯದ ನೋಟೀಸನ್ನು ತೆಗೆದುಕೊಳ್ಳದೇ ತಪ್ಪಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಮೂಲಕ ಮೇಲ್ಕಂಡ ನಿಮ್ಮಗಳಿಗೆ ತಿಳಿಸುವುದೇನೆಂದರೆ, ಮೇಲ್ಕಂಡ ಮೇಲ್ಮನವಿಯು ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:06-06-2026** ರಂದು ನಿಮ್ಮ ಹಾಜರಾತಿಗೆ ಇದ್ದು, ನೀವುಗಳು ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ **ಬೆಳಗ್ಗೆ 11 ಗಂಟೆಗೆ** ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸುವುದು. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ನಿಮ್ಮ ತಕರಾರು ಏನೂ ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನ ಮಾಡುವುದು ತಿಳಿಯಿರಿ.

ಮೇಲ್ಮನವಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿಕಾರಿಪುರ	ಸಹಿ/-ಶಿರಸ್ತೇದಾರರು,
ದಿನಾಂಕ:15-04-2026	ಮಾನ್ಯ ಹಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯ, ಶಿಕಾರಿಪುರ

ರಕ್ತದಾನ ಮಹಾದಾನ,
ರಕ್ತದಾನ ಮಾಡಿ ಜೀವ ಉಳಿಸಿ

ಶಿಕಾರಿಪುರದ ಮಾನ್ಯ ಹಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ

ಅ.ದಾ.ನಂ : 12/2018

ವಾದಿಯರು : ಸುರೇಶ ಮತ್ತು ಇತರೆ.

ವಿರುದ್ಧ

ಪ್ರತಿವಾದಿಯರು : ಕುಬಾಕ್ಷಂದ್ರ ಮತ್ತು ಇತರರು.

13ನೇ ಪ್ರತಿವಾದಿ : ನಯನ ಕೋಂ ಅಜಿತ್ ಮೇಜರ್ ವೆಂಕಟೇಶ ನಗರ, 2ನೇ ತಿರುವು, ಎ.ಎನ್.ಕೆ.ರಸ್ತೆ, ಶಿವಮೊಗ್ಗ-577201.**14ನೇ ಪ್ರತಿವಾದಿ :** ಶೋಭಾ ಕೋಂ ವಾಸುದೇವ ಮೇಜರ್ ವೆಂಕಟೇಶ ನಗರ, 2ನೇ ತಿರುವು, ಎ.ಎನ್.ಕೆ.ರಸ್ತೆ, ಶಿವಮೊಗ್ಗ-577201.

ನೋಟೀಸು

ಈ ಮೂಲಕ ಮೇಲ್ಕಂಡ 13 ಮತ್ತು 14ನೇ ಪ್ರತಿವಾದಿಗಳಿಗೆ ತಿಳಿಯಪಡಿಸುವುದೇನೆಂದರೆ, ವಾದಿಯರು ನಿಮ್ಮ ವಿರುದ್ಧ ಮೇಲ್ಕಂಡ ನ್ಯಾಯಾಲಯದಲ್ಲಿ ಮೇಲ್ಕಂಡ ನಂಬರಿನ ಕೇಸಿನಲ್ಲಿ ತಮ್ಮ ಹಿಸ್ಸೆ ಮತ್ತು ಸ್ವಾಧೀನಕ್ಕಾಗಿ ಮತ್ತು ಇತರೆ ಪರಿಹಾರ ಕೋರಿ ದಾವೆ ಹೂಡಿದ್ದು, ಸದರೀ ದಾವೆಯು ವಿಚಾರಣೆಯಲ್ಲಿ ನಿಮ್ಮ ಹಾಜರಾತಿಗಾಗಿ ಮಾನ್ಯ ನ್ಯಾಯಾಲಯದವರು **ದಿನಾಂಕ:04-06-2026** ರಂದು ನಿಗದಿಪಡಿಸಿರುತ್ತಾರೆ. ಕಾರಣ ಆ ದಿವಸ ನೀವಾಗಲೀ ಅಥವಾ ನಿಮ್ಮಿಂದ ಅನುಮತಿ ಪಡೆದವರಾಗಲೀ ಮೇಲ್ಕಂಡ ನ್ಯಾಯಾಲಯಕ್ಕೆ ಮೇಲ್ಕಂಡ ದಿನಾಂಕದಂದು ಹಾಜರಾಗಬೇಕು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ನಿಮ್ಮನ್ನು ಏಕಕರ್ಫಿ ಎಂದು ಆದೇಶಿಸಿ ನಿಮ್ಮ ವಿರುದ್ಧ ಏಕತರ್ಫಿಯಾಗಿ ತೀರ್ಮಾನಮಾಡುವರು ತಿಳಿಯಿರಿ.

ಕೆ.ಎಸ್.ವಸಂತ ಮಾಧವ	ನ್ಯಾಯಾಲಯದ ಅಪ್ಪಣೆ ಮೇರೆಗೆ
ಅರ್ಜಿದಾರರ ಪರ ವಕೀಲರು	ಸಹಿ/-ಶಿರಸ್ತೇದಾರರು,
ಶಿಕಾರಿಪುರ	ವ್ಯವಹಾರ ನ್ಯಾಯಾಲಯ, ಹಿರಿಯ
ದಿನಾಂಕ:08-04-2026	ವಿಭಾಗ, ಶಿಕಾರಿಪುರ

ಮಾನ್ಯ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ,ಶಿವಮೊಗ್ಗ

ಸಿ.ಮಿಸ್.ನಂ : 71/2026

ಅರ್ಜಿದಾರರು: 1) ಗಂಗಾಧರ ಬಿನ್ ಚನ್ನಬಸಪ್ಪ, ವಯಸ್ಸು ಸುಮಾರು 55 ವರ್ಷ, 2)ರತ್ನಮ್ಮ ಕೋಂ ಚಂದ್ರಪ್ಪ ಕೆ.ಬಿ. ವಯಸ್ಸು ಸುಮಾರು 68 ವರ್ಷ, 3)ಪಾರ್ವತಮ್ಮ ಕೋಂ ಲೇಟ್ ಸಿದ್ದಪ್ಪ, ವಯಸ್ಸು ಸುಮಾರು 66 ವರ್ಷ, 4)ತೀರ್ಥಮ್ಮ ಕೋಂ ಸಾಂಬಶಿವಪ್ಪ ವಯಸ್ಸು ಸುಮಾರು 67 ವರ್ಷ, 5)ಸರೋಜಮ್ಮ ಕೋಂ ಸುರೇಶಪ್ಪ, ವಯಸ್ಸು ಸುಮಾರು 58 ವರ್ಷ, 6)ಶಾಂತ ಕೋಂ ಶಾಂತರಾಜ್, ವಯಸ್ಸು ಸುಮಾರು 54 ವರ್ಷ. ಎಲ್ಲರ ವಾಸ:2ನೇ ತಿರುವು, ಮಲವಗೊಪ್ಪ, ನಿಧಿಗೆ, ಶಿವಮೊಗ್ಗ.

ವಿರುದ್ಧ

ಎದುರುದಾರರು : ಆಯುಕ್ತರು, ಮಹಾನಗರಪಾಲಿಕೆ, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರರ ತಾಯಿಯಾದ **ಓಂಕಾರಮ್ಮ ಕೋಂ ಲೇಟ್ ಚನ್ನಬಸಪ್ಪ** ಇವರು **ದಿನಾಂಕ:13-07-2013** ರಂದು ಮಲವಗೊಪ್ಪ 2ನೇ ತಿರುವು, ಶಿವಮೊಗ್ಗದಲ್ಲಿ ಮರಣ ಹೊಂದಿರುತ್ತಾರೆ. ಆದರೆ ಆ ಸಂಬಂಧ ಅವರ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗಿರುವುದಿಲ್ಲ, ಆದ್ದರಿಂದ ಅರ್ಜಿದಾರರು ಸದರಿ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಆದೇಶಿಸಬೇಕೆಂದು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮರಣ ಸಮರ್ಥನಾ ಪತ್ರ ನೀಡುವಲ್ಲಿ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:02-05-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಲೀ ಅಥವಾ ತಮ್ಮ ಅನುಮತಿ ಪಡೆದ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು ಎಂದು ಈ ಮೂಲಕ ತಿಳಿಯುವುದು.

ಅರ್ಜಿದಾರರ ಪರ ವಕೀಲರು	ನ್ಯಾಯಾಲಯದ ಅಪ್ಪಣೆ ಮೇರೆಗೆ
ಜೆ.ಸಿ. ಚಂದ್ರಶೇಖರ್, ವಕೀಲರು	ಸಹಿ/-ಶಿರಸ್ತೇದಾರರು,
ಸ್ಥಳ: ಶಿವಮೊಗ್ಗ	ಮಾನ್ಯ 3ನೇ ಜೆ.ಎಂ.ಎಫ್.ಸಿ.
ದಿನಾಂಕ:15-04-2026	ನ್ಯಾಯಾಲಯ, ಶಿವಮೊಗ್ಗ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ-590018, ಕರ್ನಾಟಕ, ಭಾರತ

Ref. VTU/BGM/SAP/CW1/T-728/735/737/2025-26/228 Dtd.15-04-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ್ ದರಪಟ್ಟಿಗಳನ್ನು ಅರ್ಹ ತಯಾರಕರು/ ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ ಸಂ	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ	ಮುಂಗಡ ಠೇವಣಿ
1	T-728: Tender for Set Up the Smart Classes to Govt. Kannada Higher Primary School Santibastwada, Govt. Kannada Primary School at, Valmiki Nagar, Govt. Kannada High School at Theerthkunde and Govt. Marathi Higher Primary School at Koulapur	28,33,400/-	56,700/-
2	T-735: Tender for procurement of equipment for establishment of AICTE Idea Lab at Dept. of Mechanical Engineering, UBDTCE, Davangere	59,84,000/-	90,000/-
3	T-737: Tender for Procurement of NRE Fused Deposition Modeling (FDM) Technology 3D Printer to Dept. of Robotics and Artificial Intelligence, UBDTCE, Davangere under VGST-K-FIST – L2 and VTU Matching Grants	17,00,000/-	42,500/-

ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 23-04-2026** ರ **2.30** ರ ವರೆಗೆ. ಟೆಂಡರ್ ತೆರೆಯುವ **ದಿನಾಂಕ: 24-04-2026** ರ **4.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.

ವಾ.ಸಾ.ಸಂ.ಇ,ಬೆಳಗಾವಿ/08/ದೇಶಪಾಂಡೆಪಬ್ಲಿಸಿಟಿ/2026-27

ಸಹಿ/-
ಕುಲಸಚಿವರು

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಕಿರುಸುದ್ದಿ

ಪ್ರೇರಣಾ ಕೆ.ರಾವ್‌ಗೆ ರಕ್ಷಾ ವಿವಿಯಿಂದ ಚಿನ್ನದ ಪದಕ

• **ಶಿವಮೊಗ್ಗ :** ಅಹಮದಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ರಕ್ಷಾ ವಿವಿಯ 5ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಕಾಶಿ ವಿಶ್ವನಾಥ್ ಹಾಗೂ ಪದ್ಮಿನಿ ವಿಶ್ವನಾಥ್ ಅವರ ಪುತ್ರಿ ಪ್ರೇರಣಾ ಕೆ.ರಾವ್ ಎಂಎಸ್ಸಿ ಸೈಬರ್ ಸೆಕ್ಯುರಿಟಿ ಅಂಡ್ ಡಿಜಿಟಲ್ ಫೋರೆನ್ಸಿಕ್‌ನಲ್ಲಿ ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರಿಂದ ಚಿನ್ನದ ಪದಕ ಸ್ವೀಕರಿಸಿದರು. ಇವಳು ನಗರದ ಗಂಗೋತ್ರಿ ಪಿಯು ಕಾಲೇಜಿನ ಹಳೇ ವಿದ್ಯಾರ್ಥಿನಿಯಾಗಿದ್ದಾಳೆ. ಕಾರ್ಯಕ್ರಮದಲ್ಲಿ ಭಾರತದ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಬಾಯ್ ಪಟೇಲ್, ಗೃಹ ಸಚಿವರಾದ ನಿತ್ಯಾನಂದ ರಾಯ್, ರಾಷ್ಟ್ರೀಯ ರಕ್ಷಾ ವಿ.ವಿ. ಉಪಕುಲಪತಿ ಬಿಮಲ್ ಎನ್.ಪಟೇಲ್ ಉಪಸ್ಥಿತರಿದ್ದರು.

ಇಂದು ಪದವಿ ಸಂಭ್ರಮ ಕಾರ್ಯಕ್ರಮ

• **ಶಿವಮೊಗ್ಗ :** ಸಹ್ಯಾದ್ರಿ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ದಿಂದ ಪದವಿ ಸಂಭ್ರಮ ಕಾರ್ಯಕ್ರಮ ಏ.17ರಂದು ಕಾಲೇಜಿನ ಸಭಾಂಗಣದಲ್ಲಿ ಬೆಳಗ್ಗೆ 10:30ಕ್ಕೆ ನಡೆಯಲಿದೆ. ಕಾರ್ಯಕ್ರಮವನ್ನು ಸರ್ಕಾರಿ ನೌಕರರ ರಾಜ್ಯ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಕುವೆಂಪು ವಿ.ವಿ. ಕುಲಸಚಿವ ಪ್ರೊ. ಆರ್.ತಿಮ್ಮರಾಯಪ್ಪ ಭಾಗವಹಿಸುವರು. ಪ್ರಾಂಶುಪಾಲ ಪ್ರೊ.ಎಸ್.ಸಿರಾಜ್ ಅಹಮದ್ ಅಧ್ಯಕ್ಷತೆ ವಹಿಸಲಿದ್ದು, ಪ್ರೊ.ಎಂ.ಹೆಚ್.ಪ್ರಹ್ಲಾದಪ್ಪ, ಪ್ರೊ.ಪ್ರಸನ್ನಕುಮಾರ್, ರಂಗರಾಜು ಕೆ., ಡಾ.ಮಂಜುನಾಥ್ ಕೆ.ಎನ್, ಡಾ.ಹರೀಶ್, ಕ್ಷೇತ್ರೀ, ಡಾ.ಗಿರಿಜಮ್ಮ, ಸೇರಿದಂತೆ ಪ್ರಾಧ್ಯಾಪಕರು ಉಪಸ್ಥಿತರಿರುವರು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ಇಂದು ವಿಶೇಷ ಕಾರ್ಯಾಗಾರ

• **ಶಿವಮೊಗ್ಗ :** ಕುವೆಂಪು ವಿವಿ, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಭಾರತೀಯ ಸಂವಿಧಾನ ವಿಭಾಗ ಹಾಗೂ ಐಕ್ಯುಎಸಿ ಸಹಯೋಗದಲ್ಲಿ ಏ. 17ರಂದು ಬೆಳಗ್ಗೆ 10.30ಕ್ಕೆ ಕಾಲೇಜು ಸಭಾಂಗಣ ದಲ್ಲಿ ಸಾಂವಿಧಾನಿಕ ಮೌಲ್ಯಗಳು: ಒಂದು ಪ್ರವೇಶಿಕೆ ವಿಶೇಷ ಕಾರ್ಯಾಗಾರ ಏರ್ಪಡಿಸಿದೆ. ಬಿದ್ದಲ್ ಕಟ್ಟೆ ಸರ್ಕಾರಿ ಪದವಿಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಉಪನ್ಯಾಸಕ ರಾಘವೇಂದ್ರ ಕಿಣಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ. ಪ್ರಾಚಾರ್ಯ ಡಾ.ಅವಿನಾಶ್ ಟಿ. ಅಧ್ಯಕ್ಷತೆ ವಹಿಸಲಿದ್ದಾರೆ. ಐಕ್ಯುಎಸಿ ಸಂಚಾಲಕರಾದ ಡಾ. ಸರಳಾ ಕೆ.ಎಸ್, ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ.ಗಿರಿಧರ್, ಭಾರತೀಯ ಸಂವಿಧಾನ ವಿಭಾಗದ ಮುಖ್ಯಸ್ಥ ಬಾಲಸ್ವಾಮಿ, ಸಹನಾ ಬಿ. ಉಪಸ್ಥಿತರಿರುವರು.

ಅಪಘಾತ: ಬೈಕ್ ಸವಾರ ಗಂಭೀರ

• **ತೀರ್ಥಹಳ್ಳಿ:** ರಾಷ್ಟ್ರೀಯ ಹೆದ್ದಾರಿ 169ರ ಕೊಪ್ಪ ತೀರ್ಥಹಳ್ಳಿ ನಡುವಿನ ಮೇಲಿನ ಕುರುವಳ್ಳಿ ಸಮೀಪ ಅಪಘಾತ ಸಂಭವಿಸಿ ಬೈಕ್ ಸವಾರ ಗಂಭೀರ ಗಾಯಗೊಂಡ ಘಟನೆ ಗುರುವಾರ ಬೆಳಗ್ಗೆ ನಡೆದಿದೆ. ತಳುವೆ ಗ್ರಾಮದಲ್ಲಿ ಇತ್ತೀಚೆಗೆ ವಾರದ ಹಿಂದೆ ತಮ್ಮ ತಂದೆ ನಿಧನರಾಗಿದ್ದು ಅವರ ಕಾರ್ಯ ಮಾಡಲು ದಕ್ಷಿಣ ಕನ್ನಡ ಮೂಲದಿಂದ ಬೈಕ್ ಮೂಲಕ ಮೃತರ ಮಗ ಬಂದಿದ್ದರು. ತಂದೆ ಕಾರ್ಯ ಮುಗಿಸಿ ವಾಪಸ್ ಆಗುವಾಗ ಮೇಲಿನ ಕುರುವಳ್ಳಿ ಮಹಾಲಕ್ಷ್ಮಿ ಹೋಟೆಲ್ ಎದುರು ಕೋಳಿ ತುಂಬಿದ ಪಿಕಪ್ ವಾಹನ ಗುದ್ದಿ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಬೈಕ್ ಸವಾರ ಗಂಭೀರ ಗಾಯವಾಗಿದ್ದು ಇನ್ನುಳಿದವರಿಗೆ ಸಣ್ಣಪುಟ್ಟ ಗಾಯ ಗಳಿಂದ ಪಾರಾಗಿದ್ದಾರೆ. ಗಾಯಾಳುಗಳು ಪಟ್ಟಣದ ಜೆಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಲ್ಲಿದ್ದ ಚಿನ್ನಾಭರಣ ಕಳುವು

• **ತೀರ್ಥಹಳ್ಳಿ :** ಕುಟುಂಬಸ್ಥರು ಮದುವೆ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಮನೆಗೆ ನುಗ್ಗಿ ಲಕ್ಷಾಂತರ ರೂ ಮೌಲ್ಯದ ಒಡವೆ ಕಳ್ಳತನ ಮಾಡಿರುವ ಘಟನೆ ಗುತ್ತಿಯಡೇಹಳ್ಳಿ ಗ್ರಾಮದಲ್ಲಿ ನಡೆದಿದೆ. ತೂದೂರು ಸಮೀಪದ ಗುತ್ತಿಯಡೇಹಳ್ಳಿ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಸುಮಾರು 25 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಮನೆಯಲ್ಲಿ ಮದುವೆ ಕಾರ್ಯಕ್ರಮಕ್ಕೆ ಕುಟುಂಬದವರು ತೆರಳಿರುವ ಸಂದರ್ಭವನ್ನು ಗಮನಿಸಿದ ಕಳ್ಳರು ಮನೆಯಲ್ಲಿದ್ದ ಒಡವೆಗಳನ್ನು ಕದ್ದೊಯ್ದಿದ್ದಾರೆ. ಮನೆಯ ಬೀಗ ಮುರಿದು, ಕಪಾಟಿನಲ್ಲಿ ಇಟ್ಟಿದ್ದ ಒಡವೆಗಳನ್ನು ದೋಚಿದ್ದಾರೆ. ಸುಮಾರು 25 ಲಕ್ಷ ರೂ ಮೌಲ್ಯದ ಆಭರಣಗಳು ಕಳ್ಳತನ ಆಗಿದೆ ಎಂದು ಅಂದಾಜಿಸಲಾಗಿದ್ದು ಮಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಧು ಸಂತರ ನೇತೃತ್ವದಲ್ಲಿ ಪ್ರಧಾನಿ ಮೋದಿ ಭೇಟಿಗೆ ನಿರ್ಧಾರ: ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ

ಶರಾವತಿ ಯೋಜನೆ ಜಾರಿಗೊಳಿಸದಂತೆ ಆಗ್ರಹ

• **ಶಿವಮೊಗ್ಗ :** ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು ಎಂದು ಒತ್ತಾಯಿಸಿ ವಿವಿಧ ಸಾಧು ಸಂತರ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಒತ್ತಾಯಿಸಲಾಗುವುದು ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಘೋಷಿಸಿದ್ದಾರೆ.

ರಾಷ್ಟ್ರಭಕ್ತರ ಬಳಗ, ಪರಿಸರಕ್ಕಾಗಿ ನಾವು ಹಾಗೂ ವಿವಿಧ ಪರಿಸರ ಹೋರಾಟ ಸಂಘಟನೆಗಳ ಸಹಯೋಗದೊಂದಿಗೆ ಪ್ರಸ್ತಾವಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ರದ್ದುಗೊಳಿಸುವಂತೆ ಒತ್ತಾಯಿಸಿ ಗುರುವಾರ ಆಯೋಜಿಸಿದ್ದ ಬೃಹತ್ ಸೈಕಲ್, ಮೋಟಾರ್ ಬೈಕ್, ಕಾರುಗಳ ಪ್ರತಿಭಟನಾ ರ‍್ಯಾಲಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಒಂದು ಜನವಿರೋಧಿ ಯೋಜನೆ ವಿರುದ್ಧ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನಾ ರ‍್ಯಾಲಿ ಆಗಿದ್ದು ಶಿವಮೊಗ್ಗದಲ್ಲಿ ಇದೇ ಮೊದಲು. ನಾಗರೀಕರಿಗೆ ಯಾವುದೇ ತೊಂದರೆ ಆಗದ ಹಾಗೆ ಈ ರ‍್ಯಾಲಿ ನಡೆದಿದೆ. ರಾಜ್ಯ ಸರ್ಕಾರ ಈ ಮಾರಕ ಯೋಜನೆಗೆ ಶತಾಯ-ಗತಾಯ ಮುಂದಾಗಿದೆ. ಈ ಯೋಜನೆಯಿಂದ ಅಪಾರ ಪ್ರಮಾಣದಲ್ಲಿ ಪರಿಸರಕ್ಕೆ ಹಾನಿಯಾಗಲಿದೆ. ಈ ಭಾಗದ ಜನ-ಜಾನುವಾರು, ಪ್ರಾಣಿ-ಪಕ್ಷಿಗಳಿಗೆ ಜೀವನವೇ ದುಸ್ತರವಾಗಲಿದೆ. ಯಾವುದೇ ಕಾರಣಕ್ಕೂ ಈ ಯೋಜನೆ ಜಾರಿಯಾಗ ಕೂಡದು ಎಂದು ಒತ್ತಾಯಿಸಿದರು.

ಒಂದು ವೇಳೆ ಈ ಯೋಜನೆ ಜಾರಿಯಾದರೆ ಇನ್ನೂ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು. ಇಂಧನ ಸಚಿವರ ಸಹಿತ ರಾಜ್ಯ ಸರ್ಕಾರದ ಸಚಿವರುಗಳು ಶಿವಮೊಗ್ಗಕ್ಕೆ ಬಂದರೆ ಮುತ್ತಿಗೆ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಮುಂದಿನ ಉಗ್ರ ಹೋರಾಟದ ರೂಪು-ರೇಷೆ ಚರ್ಚಿಸಲು ಏಪ್ರಿಲ್ 22ರಂದು ಪರಿಸರಾಸಕ್ತರ ಸಭೆ ಆಯೋಜಿಸಲಾಗಿದೆ ಎಂದರು.

ಪಶ್ಚಿಮ ಘಟ್ಟದ ಅತೀಸೂಕ್ಷ್ಮ ಪ್ರದೇಶವಾದ ಶರಾವತಿ ಕಣಿವೆಯಲ್ಲಿ ಯಾವುದೇ ಪರಿಸರ ಮಾರಕ ಯೋಜನೆಗಳನ್ನು ಜಾರಿಗೊಳಿಸದೆ ಅನುಮತಿ ನೀಡಬಾರದು ಎಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಆಗ್ರಹಿಸಿದರು.

ಪ್ರಕೃತಿ ಸಂರಕ್ಷಿಸಬೇಕಾಗಿದೆ...

ಪ್ರತಿಭಟನಾ ರ‍್ಯಾಲಿ ಉದ್ಘಾಟಿಸಿದ ಖ್ಯಾತ ನರರೋಗ ತಜ್ಞ ಡಾ.ಶಿವರಾಮಕೃಷ್ಣ ಮಾತನಾಡಿ, ಪರಿಸರ ಮಾರಕ ಯೋಜನೆಗೆ ರಾಜ್ಯ ಸರ್ಕಾರ ಕೈ ಹಾಕಿರುವುದು ತಪ್ಪು. ಪ್ರಕೃತಿ ನಮಗೆ ಗಾಳಿ, ಮಳೆ, ಬೆಳಕನ್ನು ನೀಡಿದೆ. ವೈದ್ಯರಾದ ನಾವು ಕಾಯಿಲೆ ಬರುವುದರೊಳಗೆ ಅವುಗಳನ್ನು ತಡೆಗಟ್ಟಿ ಎಂದು ರೋಗಿಗಳಿಗೆ ಸಲಹೆ ನೀಡುತ್ತೇವೆ. ಇದಕ್ಕೆ ಪೂರಕವಾಗಿ ಪ್ರಕೃತಿ ಇರಬೇಕಾಗಿದೆ. ಅದನ್ನು ನಾವು ಸಂರಕ್ಷಿಸಬೇಕಾಗಿದೆ. ಈ ಯೋಜನೆಯನ್ನು ಕೈಬಿಟ್ಟು ಪರ್ಯಾಯ ಮಾರ್ಗ ಕಂಡುಕೊಳ್ಳಬೇಕು. ಪರಿಸರ ಮೇಲಿನ ದಾಳಿ ತಡೆಯಲು ಎಲ್ಲರೂ ಸಂಘಟಿತರಾಗಬೇಕು ಎಂದರು.

ಪರಿಸರ ಹೋರಾಟಗಾರ ಪ್ರೊ.ಬಿ.ಎಂ. ಕುಮಾರಸ್ವಾಮಿ ಮಾತನಾಡಿ, ಮಳೆಗಾಲ ಬರಲು ಇನ್ನೂ ಮೂರು ತಿಂಗಳು ಇದೆ. ಇಂತಹ ಸಂದರ್ಭದಲ್ಲಿಯೇ ಈಗಾಗಲೇ ನಾವು 38-40 ಡಿಗ್ರಿ ಉಷ್ಣತೆ ಅನುಭವಿಸುತ್ತಿದ್ದೇವೆ. ಭೀಕರ ಬಿಸಿಲು ಹೆಚ್ಚಾಗುತ್ತಿದೆ. ಮಳೆ ಕಡಿಮೆಯಾಗುತ್ತಿದೆ. ಹಾಗಾಗಿ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ 16,000 ಮರಗಳನ್ನು ಕಡಿಯಲಾಗುತ್ತಿದೆ. ಇದು ಮನುಷ್ಯರು ಸಹಿಸಿಕೊಳ್ಳಲು ಸಾಧ್ಯವಾಗದ ಸಂಗತಿ ಎಂದರು.

ಜಿಪಂ ಮಾಜಿ ಸದಸ್ಯ ಕೆ.ಈ. ಕಾಂತೇಶ್ ಮಾತನಾಡಿ, ಸಚಿವ ಜಾರ್ಜ್ ಅವರೇ ಶಿವಮೊಗ್ಗ ಜನ ಬಳೆ ತೊಟ್ಟಿಲ್ಲ, ನೀವು ಹೇಳುವ ಯಾವುದೇ ಯೋಜನೆಯನ್ನು ನಾವು ಒಪ್ಪುವುದಿಲ್ಲ, ನೀವು ಯೋಜನೆ ಜಾರಿಗೊಳಿಸಿದರೆ ಶಿವಮೊಗ್ಗ ಪ್ರವೇಶಕ್ಕೆ ನಿಮಗೆ ಪ್ರವೇಶ ನೀಡುವುದಿಲ್ಲ, ಯಾವುದೇ ಕಾರಣಕ್ಕೂ ಯೋಜನೆಯನ್ನು ಜಾರಿಮಾಡಲು ಅವಕಾಶ ಕೊಡಬೇಡಿ ಎಂದು ಆಗ್ರಹಿಸಿದರು.

ಪ್ರಮುಖರಾದ ಡಾ.ಪಿ. ನಾರಾಯಣ, ಡಾ.ಶ್ರೀಪತಿ ಎಲ್.ಕೆ, ಡಾ.ಶೇಖರ್ ಗೌಳೇರ್, ಈ.ವಿಶ್ವಾಸ್, ಮಹಾಲಿಂಗಯ್ಯ ಶಾಸ್ತ್ರೀ, ಮೋಹನ್ ಜಾಧವ್, ಶ್ರೀಕಾಂತ್, ಜನಾರ್ಧನ್ ಪೈ, ವಿಶ್ವೇಶ್ವರಯ್ಯ, ರಾಮಾಚಾರ್, ವಿನಯ್ ಶಿವಮೊಗ್ಗ, ರಮೇಶ್ ಜಾಧವ್, ಸುವರ್ಣಾ ಶಂಕರ್, ಸೀತಾಲಕ್ಷ್ಮೀ, ಪ್ರಕಾಶ್, ವಿವಿಧ ಸಂಘಟನೆಗಳ ಪ್ರಮುಖರು ಇದ್ದರು.

ಮನೆಹಾಳು ಯೋಜನೆಗೆ ಅನುಮತಿ ಕೇಳಿದ್ದು ಸರಿಯಲ್ಲ

ಪ್ರಧಾನಿ ನರೇಂದ್ರಮೋದಿಯವರು ಆದಿ ಚುಂಚನಗಿರಿ ಮಠದ ಕಾರ್ಯಕ್ರಮಕ್ಕೆ ಆಗಮಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ 18 ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ನೀಡಿದ್ದಾರೆ. ಆ ಮನವಿಯಲ್ಲಿ ಈ ಪರಿಸರ ಮಾರಕ ಯೋಜನೆಯ ಅಂಶವೂ ಇದೆ. ಕೇಂದ್ರ ಪರಿಸರ ಇಲಾಖೆ, ಕೇಂದ್ರ ಹವಾಮಾನ ಇಲಾಖೆ ತಜ್ಞರು ಈ ಯೋಜನೆಯನ್ನು ವಿರೋಧಿಸಿದ್ದಾರೆ. ತುಂಗಾ-ಭದ್ರಾ, ಶರಾವತಿ ನದಿಗಳು ತುಂಬಿ ಹರಿಯಲು ಅರಣ್ಯ ಮುಖ್ಯವಾಗಿದೆ ಎಂಬುದನ್ನು ಮುಖ್ಯಮಂತ್ರಿ ತಿಳಿದುಕೊಂಡಿಲ್ಲ, ಈ ಮನೆಹಾಳು ಯೋಜನೆಗೆ ಅನುಮತಿ ನೀಡಿ ಎಂದಿದ್ದು ಸರಿಯಲ್ಲ ಎಂದು ಪ್ರೊ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕರಿಗೆ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಕೆ.ಎಸ್. ನಟರಾಜ್ ಮನವಿ

ಮಂಗನ ಕಾಯಿಲೆ ಬಗ್ಗೆ ತೀವ್ರ ಜಾಗೃತಿ ವಹಿಸಿ

• **ಶಿವಮೊಗ್ಗ:** ಜಿಲ್ಲೆಯ ಸಾಗರ, ಹೊಸನಗರ ಮತ್ತು ತೀರ್ಥಹಳ್ಳಿ ತಾಲೂಕುಗಳಲ್ಲಿ ಮಂಗನ ಕಾಯಿಲೆ (ಕೆಎಫ್‌ಡಿ)ಪ್ರಕರಣಗಳು ವರದಿಯಾಗುತ್ತಿರುವುದರಿಂದ ಸಾರ್ವಜನಿಕರು ತೀವ್ರ ಜಾಗೃತಿ ವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಟರಾಜ್ ಕೆ.ಎಸ್ ಮನವಿ ಮಾಡಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕಿನ ಅರಳಸುರುಳಿ, ಮೇಗರವಳ್ಳಿ, ಕಟಗಾರು, ಹಾರೋಗುಳಿಗೆ, ಯೋಗಿಮಠ, ಮಾಳೂರು, ಬೆಟ್ಟಬಸವಾನಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿ, ಹೊಸನಗರ ತಾಲ್ಲೂಕಿನ ಸೊನಲೆ, ಹುಂಚ, ರಿಪ್ಪನ್‌ಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿ ಹಾಗೂ ಸಾಗರ ತಾಲ್ಲೂಕಿನ ತಾಳಗುಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದ ತಲವಾಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರೇಮನೆ, ಮಂಜಿನಕಾನು ಗ್ರಾಮಗಳಲ್ಲಿ ಕೆಎಫ್‌ಡಿ ಪ್ರಕರಣಗಳು ವರದಿಯಾಗುತ್ತಿವೆ. ಈ ಭಾಗಗಳಲ್ಲಿ ಈಗಾಗಲೇ ವ್ಯಾಪಕ ಮುಂಜಾಗ್ರತಾ ಕ್ರಮ ವಹಿಸಲು ಜನರಿಗೆ ಆರೋಗ್ಯ ಶಿಕ್ಷಣ ಹಾಗೂ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಮುಖ ಸೂಚನೆಗಳು...

ಜ್ವರ, ಮೈಕೈ ನೋವು, ತಲೆನೋವು ಕಾಣಿಸಿಕೊಂಡ ತಕ್ಷಣ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕಾಡಿಗೆ ಅಥವಾ ತೋಟಕ್ಕೆ ಹೋಗುವವರು ಕಡ್ಡಾಯವಾಗಿ ಮೈಗೆ ಡಿಪಾ ತೈಲ ಹಚ್ಚಿಕೊಳ್ಳಬೇಕು. ಸಾರ್ವಜನಿಕರು ಸದ್ಯದ ಪರಿಸ್ಥಿತಿಯಲ್ಲಿ ಕಾಡಿಗೆ ಹೋಗುವುದನ್ನು ಹಾಗೂ ಕಾಡಿನ ಒಣ ಎಲೆಗಳನ್ನು (ದರಗು) ಸಂಗ್ರಹಿಸುವುದನ್ನು ನಿಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಮಂಗಗಳ ಸಾವು ಸಂಭವಿಸಿದರೆ ಮಾಹಿತಿ ನೀಡಿ: ಕಾಡಿನಲ್ಲಿ ಅಥವಾ ತೋಟಗಳಲ್ಲಿ ಮಂಗಗಳು ಅಸಹಜವಾಗಿ ಮೃತಪಟ್ಟಿರುವುದು ಕಂಡುಬಂದಲ್ಲಿ ತಕ್ಷಣ ಪಶುಸಂಗೋಪನಾ ಇಲಾಖೆ, ಅರಣ್ಯ ಇಲಾಖೆ ಅಥವಾ ಪಂಚಾಯತ್ ರಾಜ್ ಇಲಾಖೆಗೆ ಮಾಹಿತಿ ನೀಡಬೇಕು.

ಖಾಸಗಿ ಆಸ್ಪತ್ರೆಗಳಿಗೆ ಸೂಚನೆ: ಯಾವುದೇ ಖಾಸಗಿ ಆಸ್ಪತ್ರೆ ಅಥವಾ ಕ್ಲಿನಿಕ್‌ಗಳಿಗೆ ಜ್ವರದ ಲಕ್ಷಣವಿರುವ ರೋಗಿಗಳು ಬಂದಲ್ಲಿ, ವೈದ್ಯರು ಅವರಿಗೆ ನೋವು ನಿವಾರಕ ಇಂಜೆಕ್ಷನ್ ಅಥವಾ ಮಾತ್ರೆಗಳನ್ನು ನೀಡಿ ಮನೆಗೆ ಕಳುಹಿಸಬಾರದು. ತಕ್ಷಣವೇ ರೋಗಿಯ ಮೊಬೈಲ್ ಸಂಖ್ಯೆಯೊಂದಿಗೆ ಸರ್ಕಾರಿ ಆಸ್ಪತ್ರೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಿ, ರಕ್ತ ಪರೀಕ್ಷೆಗೆ ಶಿಫಾರಸು ಮಾಡಬೇಕು.

ಉಚಿತ ಚಿಕಿತ್ಸೆ ಲಭ್ಯ :

ಮಂಗನ ಕಾಯಿಲೆಗೆ ಸಂಬಂಧಿಸಿದಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಎಸ್‌ಎಎಸ್‌ಟಿ ಅಡಿಯಲ್ಲಿ ನೋಂದಾಯಿತ ಆಸ್ಪತ್ರೆಗಳಲ್ಲಿ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್ ದಾರರಿಗೆ ಉಚಿತ ಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಿದ್ದಾರೆ.

ಬ್ರಹ್ಮಕುಮಾರಿ ಈಶ್ವರೀಯ ವಿವಿಯ ಸ್ವಾತಿ

ಯೋಗ ಮನುಷ್ಯನ ನಿಜಸಂಪತ್ತು

• **ಶಿವಮೊಗ್ಗ :** ಅಧ್ಯಾತ್ಮ, ಧ್ಯಾನ, ಯೋಗ ಮನುಷ್ಯನ ನಿಜವಾದ ಸಂಪತ್ತು ಎಂದು ನವುಲೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮುಖ್ಯಸ್ಥೆ, ರಾಜಯೋಗಿನಿ, ಬ್ರಹ್ಮಕುಮಾರಿ ಸ್ವಾತಿ ಹೇಳಿದರು.

ನವುಲೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಮಕ್ಕಳಿಗೆ ಆಯೋಜಿಸಿರುವ ವ್ಯಕ್ತಿತ್ವ ವಿಕಸನ ಬೇಸಿಗೆ ಶಿಬಿರದ ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಸಂಸ್ಥೆಯು ಜಗತ್ತಿಗೆ ಶಾಂತಿಯ ಸಂದೇಶ ಸಾರುತ್ತ ಮನುಷ್ಯ ಉತ್ತಮ ಹಾದಿಯಲ್ಲಿ ಬದುಕು ರೂಪಿಸಿಕೊಳ್ಳುವಂತೆ ನೆರವಾಗುತ್ತಿದೆ ಎಂದು ತಿಳಿಸಿದರು.

ಒತ್ತಡ ಮತ್ತು ಅಶಾಂತಿಯ ಜೀವನ ಶೈಲಿಯಲ್ಲಿ ಬದುಕುತ್ತಿರುವ ಜನರಿಗೆ ಅದರಿಂದ ಹೊರಬರಲು ಭಗವಂತನ ಸಂದೇಶ ಮತ್ತು ಶಾಂತಿಯ ಮಹತ್ವದ ಅರಿವು ಮೂಡಿಸಬೇಕಿದೆ. ಮನುಷ್ಯ ಕೆಟ್ಟ ಚಟಗಳಿಗೆ ದಾಸನಾಗಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದು, ಒಳ್ಳೆಯ ಸಂಗತಿಗಳಿಂದ ದೂರ ಉಳಿಯುತ್ತಿದ್ದಾನೆ. ಕೆಟ್ಟ ಹವ್ಯಾಸಗಳಿಗೆ ಬೇಗನೇ ಬಲಿಯಾಗುತ್ತಿದ್ದಾರೆ. ಅದನ್ನು ಬಿಡಲು ಸಾಧ್ಯವಾಗುತ್ತಿಲ್ಲ, ಒಳ್ಳೆಯ ವ್ಯಕ್ತಿಯಾಗಿ ರೂಪಿಸಲು ಪರಿವರ್ತನೆ ತರಬೇಕಿದೆ. ಇದಕ್ಕೆ ಅಧ್ಯಾತ್ಮಿಕ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ವ್ಯಕ್ತಿತ್ವ ವಿಕಸನ ಶಿಬಿರವು ಮಕ್ಕಳ ಉತ್ತಮ ವ್ಯಕ್ತಿತ್ವ ಬೆಳವಣಿಗೆಬೆಳೆಸುವಲ್ಲಿ ನೆರವಾಗುತ್ತದೆ. ಆತ್ಮವಿಶ್ವಾಸ ವೃದ್ಧಿಸುತ್ತದೆ. ಸಂವಹನ ಕೌಶಲ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಗೆ ಶಿಬಿರ ಪೂರಕವಾಗಿದೆ ಎಂದು ತಿಳಿಸಿದರು.

ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಜೆ.ವಿಜಯಕುಮಾರ್ ಮಾತನಾಡಿ, ಮಕ್ಕಳಿಗೆ ಬಾಲ್ಯದಿಂದಲೇ ಸಂಸ್ಕಾರದ ಮಹತ್ವ ಅರಿವು ಮೂಡಿಸಬೇಕು. ಮಕ್ಕಳಲ್ಲಿ ಸಕಾರಾತ್ಮಕ ಚಿಂತನೆ ಬೆಳೆಸುವಲ್ಲಿ ಇಂತಹ ಶಿಬಿರಗಳು ಮಹತ್ತರ ಪಾತ್ರ ವಹಿಸುತ್ತವೆ. ಮಕ್ಕಳು ಸರಿಯಾದ ಹಾದಿಯಲ್ಲಿ ಮುನ್ನಡೆಯಲು ಪೋಷಕರು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.

ಬ್ರಹ್ಮಕುಮಾರಿ ಕಾವ್ಯಾ ಹಾಗೂ ಈಶ್ವರೀಯ ಸಂಸ್ಥೆಯ ಸದಸ್ಯರು ಹಾಜರಿದ್ದರು.

ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ

• **ಭದ್ರಾವತಿ:** ಶ್ರಮ ಜೀವಿಗಳಾದ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು ಪ್ರಾಮಾಣಿಕವಾಗಿ ತಲುಪಬೇಕು. ಈ ನಿಟ್ಟಿನಲ್ಲಿ ಶಾಸಕರು ಹೆಚ್ಚಿನ ಕಾಳಜಿವಹಿಸಿದ್ದು, ಎಲ್ಲಾ ಕಾರ್ಮಿಕ ಸಂಘಟನೆಗಳನ್ನು ಒಗ್ಗೂಡಿಸಿಕೊಂಡು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುತ್ತಿದ್ದಾರೆಂದು ನಗರಸಭೆ ಹಿರಿಯ ಸದಸ್ಯ ಬಿ.ಕೆ ಮೋಹನ್ ಹೇಳಿದರು.

ಅವರು ಗುರುವಾರ ನಗರದ ಬೈಪಾಸ್ ರಸ್ತೆ ಕಾರ್ಮಿಕರ ಸಮುದಾಯ ಭವನದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವಿವಿಧ ವೃತ್ತಿಗಳ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪೂರ್ವ ಕಲಿಕೆಯ ಮಾನ್ಯತೆ(ಆರ್‌ಪಿಎಲ್), ಸುರಕ್ಷತಾ ಕಿಟ್‌ಗಳ ವಿತರಣೆ ಮತ್ತು ಸೇತುಬಂಧ ತರಬೇತಿ ಮುಕ್ತಾಯಗೊಳಿಸಿರುವ ಕಾರ್ಮಿಕರಿಗೆ ಪ್ರಮಾಣ ಪತ್ರ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಕಾರ್ಮಿಕ ಮುಖಂಡ ಸುಂದರ್‌ಬಾಬು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಸ್ತುತ ಕ್ಷೇತ್ರದಲ್ಲಿ ಕಾರ್ಮಿಕರ ಯಾವುದೇ ರೀತಿಯ ಸಮಸ್ಯೆಗಳಿರಲಿ ಶಾಸಕರು ತಕ್ಷಣ ಸ್ಪಂದಿಸುವ ಮೂಲಕ ಬಗೆಹರಿಸುತ್ತಿದ್ದಾರೆ. ಕಾರ್ಮಿಕರ ಮೇಲೆ ಹೆಚ್ಚಿನ ಕಾಳಜಿವಹಿಸಿದ್ದಾರೆ. ಇದರಿಂದಾಗಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಹಕಾರ ಅವರಿಂದ ನಿರೀಕ್ಷಿಸುತ್ತಿದ್ದಾರೆ ಎಂದರು.

ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಬಿ.ಎಸ್ ಗಣೇಶ್, ಬ್ಲಾಕ್ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಎಸ್. ಕುಮಾರ್, ನಗರಸಭೆ ಸದಸ್ಯ ಚನ್ನಪ್ಪ, ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷ ಎಸ್. ಮಣಿಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದು ಮಾತನಾಡಿದರು.

ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಾಸಕ ಬಿ.ಕೆ ಸಂಗಮೇಶ್ವರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾರ್ಮಿಕರು ಸಹ ಎಲ್ಲರಂತೆ ನೆಮ್ಮದಿ ಜೀವನ ನಡೆಸಬೇಕು. ಇದಕ್ಕೆ ಪೂರಕವಾಗಿ ಎಲ್ಲಾ ರೀತಿಯ ಸಹಕಾರ ನೀಡಲು ಬದ್ಧನಾಗಿದ್ದೇನೆ ಎಂದರು.

ಕಾರ್ಮಿಕ ಮುಖಂಡರಾದ ಸಂಜೀವ ಕುಮಾರ್, ತ್ಯಾಗರಾಜ್, ವಿ. ವಿನೋದ್, ರಾಧಾಕೃಷ್ಣ, ಚೆನ್ನಪ್ಪ, ಡಾ. ಚಂದ್ರಶೇಖರ್, ನಗರಸಭೆ ಸದಸ್ಯ ಸಯ್ಯದ್ ರಿಯಾಜ್, ಕಾರ್ಮಿಕ ನಿರೀಕ್ಷಕರಾದ ರಕ್ಷಿತ್ ಮತ್ತು ಸುಪ್ರಿಯಾ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಏ.19ರಂದು ಚಿಗುರು ಸಿರಿಗೌರಿ ಪ್ರಶಸ್ತಿ ಪ್ರದಾನ

• **ಶಿವಮೊಗ್ಗ :** ಸಾಗರ ತಾಲೂಕಿನ ಸಿರಿವಂತೆಯ ಚಿತ್ರಸಿರಿ ವತಿಯಿಂದ ಏ.19ರಂದು ಸಂಜೆ 4 ಗಂಟೆಗೆ ಚಿತ್ರಸಿರಿ ಅಂಗಳದಲ್ಲಿ ಸಿರಿಗೌರಿ ಮತ್ತು ಚಿಗುರು ಸಿರಿಗೌರಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಚಂದ್ರಶೇಖರ ಸಿರಿವಂತೆ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯವಾದಿ ಸರೋಜ ಚಂಗೊಳ್ಳಿಯವರಿಗೆ ಸಿರಿಗೌರಿ ಹಾಗೂ ಸಾಗರ ತಾಲೂಕಿನ ಬಳಸಗೋಡಿನ ರಾಷ್ಟ್ರೀಯ ಯೋಗಪಟು 11 ವರ್ಷದ ನಮನ ಚಿಗುರು ಸಿರಿಗೌರಿ ಪ್ರಶಸ್ತಿ ನೀಡಲಾಗುತ್ತದೆ ಎಂದರು.

ಬಾಳ ಸಂಗಾತಿ ಗೌರಿಯವರು 2022ರ ಫೆಬ್ರವರಿಯಲ್ಲಿ ತೀರಿಕೊಂಡ ಬಳಿಕ ಅವರ ಸ್ಮರಣೆಯಲ್ಲಿ ಜನ್ಮದಿನ ಏ.19ರಂದು 2023 ರಿಂದ ಪ್ರತೀ ವರ್ಷ ಎರಡು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. 45 ವರ್ಷ ದಾಟಿದ ಅಪರೂಪದ ಸಾಧನೆ ಮಾಡಿರುವ ಒಬ್ಬ ಹೆಣ್ಣು ಮಗಳಿಗೆ ಸಿರಿಗೌರಿ ಹಾಗೂ 1 ರಿಂದ ಸ್ನಾತಕೋತ್ತರದವರೆಗೆ ಓದುತ್ತಿರುವ ವಿದ್ಯಾರ್ಥಿನಿಗೆ ಚಿಗುರು ಸಿರಿಗೌರಿ ಪ್ರಶಸ್ತಿ ನೀಡಲಾಗುತ್ತಿದೆ ಎಂದರು.

ಸಿರಿಗೌರಿ ಪ್ರಶಸ್ತಿಯೊಂದಿಗೆ 5000 ರೂ. ನಗದು ಹಾಗೂ ಚಿಗುರು ಸಿರಿಗೌರಿ ಪ್ರಶಸ್ತಿಯೊಂದಿಗೆ 2000 ರೂ. ನಗದು ಜೊತೆಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುತ್ತಿದೆ. ಚಿತ್ರಸಿರಿ ಹಸೆ ಚಿತ್ತಾರ ಸಾಧನೆ ಮಾಡಿದ್ದು, ಇದನ್ನು ಗುರುತಿಸಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜನಮೇಜಿರಾವ್, ಜಗದೀಶ್ ಸಂಪಳ್ಳಿ, ನಟರಾಜ್ ಇದ್ದರು.

ದಟ್ಟವಾದ ಕಾಡಿನ ಗುಡ್ಡ ಅಗೆತ | ಕಣ್ಮುಚ್ಚಿ ಕುಳಿತ ಅರಣ್ಯ-ಗಣಿ ಭೂವಿಜ್ಞಾನ ಇಲಾಖೆ ಮೇಲೆ ಅನುಮಾನ

ಸಾಗರದಲ್ಲಿ ಹೆಚ್ಚುತ್ತಿದೆ ಅಕ್ರಮ ಮಣ್ಣು ಸಾಗಣೆ ದಂಧೆ

▸ **ಜಿ. ನಾಗೇಶ್ ಸಾಗರ**

ದಿಗಂತ ವಿಶೇಷ

• **ಸಾಗರ :** ತಾಲೂಕಿನ ಬೇರೆಬೇರೆ ಭಾಗಗಳಲ್ಲಿ ಕಾಡನ್ನು ಅಕ್ರಮವಾಗಿ ಪ್ರವೇಶ ಮಾಡಿ ಕಾಡಿನ ನಡುವೆ ರಸ್ತೆ ಮಾಡಿಕೊಂಡು ನೆಲ ಬಗೆದು ಮಣ್ಣು ತೆಗೆಯುವ ದೊಡ್ಡ ಜಾಲ ಕೆಲಸ ಮಾಡುತ್ತಿದ್ದು, ನೂರಾರು ಎಕರೆ ಕಾಡು ರಾತ್ರೋರಾತ್ರಿ ಕಡಿತಲೆಯಾಗುತ್ತಿದ್ದು, ಬೆಲೆಬಾಳುವ ಮರದ ಜೊತೆಗೆ ಮಣ್ಣು ಸಹ ಅಕ್ರಮವಾಗಿ ಸಾಗಾಣಿಕೆಯಾಗುತ್ತಿದ್ದರೂ ಅರಣ್ಯ, ಕಂದಾಯ ಮತ್ತು ಗಣಿ ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಮೌನವಾಗಿರುವುದು ಅನೇಕ ಅನುಮಾನಕ್ಕೆ ಕಾರಣವಾಗುತ್ತಿದೆ.

ಕಲ್ಮನೆ ಗ್ರಾಪಂ ವ್ಯಾಪ್ತಿಯಲ್ಲಿ ಅಕ್ರಮ : ಸಾಗರ ನಗರಕ್ಕೆ ಸಮೀಪದ ಗ್ರಾಪಂ ವ್ಯಾಪ್ತಿಗಳಲ್ಲಿರುವ ಬೆಟ್ಟಗುಡ್ಡ ಕಾಡು ಕಡಿದು ಮಣ್ಣು ಸಾಗಾಣಿಕೆ ಮಾಡುವ ದಂಧೆ ಜೋರಾಗಿ ನಡೆಯುತ್ತಿದೆ. ಮಣ್ಣಿನ ಜೊತೆಗೆ ಕಾಡಿನ ನಡುವೆ ಇರುವ ಬೆಲೆಬಾಳುವ ಮರಗಳು ಮಿಲ್‌ಗಳನ್ನು ಸೇರುತ್ತಿದೆ.

ಕಲ್ಮನೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳೇ ಇಕ್ಕೇರಿ ಗ್ರಾಮದ ಕುನ್ನಿಕೊಡ್ಲು ಮಜಿರೆ ಗ್ರಾಮದ ಸರ್ವೆ ನಂ. 40ರಲ್ಲಿ ಸುಮಾರು 210 ಎಕರೆ ಕಾಡು ಇದ್ದು, ಸ್ಥಳೀಯ ಗ್ರಾಮಸ್ಥರು ಅದನ್ನು ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಕಾಡಿನಲ್ಲಿ ಹೊನ್ನೆ ಹೊರಡುಮಡಿಸಿಬೀಟೆ, ಮಾವು, ಹಲಸು ಸೇರಿದಂತೆ ಬೆಲೆಬಾಳುವ ಮರಗಳು ಇದೆ. ಗುಡ್ಡದ ಮೇಲ್ಭಾಗದಲ್ಲಿ ಕಾಡು ಇದ್ದು, ಪರಿಸರ ಸಹ ಉತ್ತಮವಾಗಿದೆ. ಕಳೆದ ಎಂಟತ್ತು ದಿನಗಳಿಂದ ಮಣ್ಣು ಮತ್ತು ಮರಗಳ್ಳರು ಈ ಕಾಡಿಗೆ ಲಗ್ಗೆ ಹಾಕಿದ್ದಾರೆ. ಬೆಲೆಬಾಳುವ ಮರಗಳನ್ನು ಕಡಿದು ನೆಲವನ್ನು ಸಮತಟ್ಟು ಮಾಡಿಕೊಂಡು ದಿನಕ್ಕೆ ಹತ್ತಿಪ್ಪತ್ತು ಟಿಪ್ಪರ್ ಮಣ್ಣನ್ನು ಸಾಗಿಸುತ್ತಿದ್ದಾರೆ. ಮಣ್ಣು ಸಾಗಿಸುವವರು ಅತ್ಯಂತ ಪ್ರಭಾವಿಗಳಾಗಿದ್ದು, ಅಧಿಕಾರಿಗಳ ಬೆಂಬಲ ಸಹ ಹೊಂದಿರುವುದರಿಂದ ಸ್ಥಳೀಯ ಗ್ರಾಮಸ್ಥರು ವಿರೋಧ ಮಾಡಲು ಹಿಂದೇಟು ಹಾಕುತ್ತಿದ್ದಾರೆ.

• **ಶಾಸಕರು ಹೇಳಿದ್ದಾರೆ ? :** ಕಾಡು ಕಡಿದು ಅಕ್ರಮವಾಗಿ ಮಣ್ಣು ಸಾಗಿಸುತ್ತಿರುವ ಕುರಿತು ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಕೇಳಿದರೆ ತೋಟಕ್ಕೆ ಮೂರ‍್ನಾಲ್ಕು ಲೋಡ್ ಮಣ್ಣು ಹೊಡೆಯಲು ಶಾಸಕರೆ ಹೇಳಿದ್ದಾರೆ. ಶಾಸಕರೆ ಸೂಚನೆ ಮೇರೆಗೆ ಅವರು ಮಣ್ಣು ಹೊಡೆಯುತ್ತಿದ್ದಾರೆ. ನಾವು ಸುಮ್ಮನೆ ಇದ್ದೇವೆ ಎಂದು ಹೇಳುತ್ತಾರೆ. ಹಾಗಾದರೆ ಶಾಸಕರ ಹೆಸರು ಹೇಳಿ ಇಂತಹ ಅಕ್ರಮ ನಡೆಯಲು ಅವಕಾಶ ಇದೆಯೂ ಎನ್ನುವುದು ಗ್ರಾಮಸ್ಥರ ಪ್ರಶ್ನೆ.

ವಾಸ್ತವದಲ್ಲಿ ಶಾಸಕರು ಅರಣ್ಯ ಕಡಿತಲೆ ಮಾಡಿ ಮಣ್ಣು ಸಾಗಿಸಿ ಎಂದು ಯಾರಿಗೂ ಹೇಳಿಲ್ಲ, ಆದರೆ ಅರಣ್ಯ ಇಲಾಖೆ ಅಧಿಕಾರಿಗಳು ಲೋಡ್‌ಗೆ ಇಂತಿಷ್ಟು ಎಂದು ಮಾಮೂಲಿ ಪಡೆಯುತ್ತಿದ್ದಾರೆ. ಅವರಿಗೆ ಕಾಡು ನಾಶವಾದರೂ ಚಿಂತೆಯಿಲ್ಲ, ಶಾಸಕರ ಹೆಸರನ್ನು ಕೆಲವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಗ್ರಾಮಸ್ಥರು ಪತ್ರಿಕೆಗೆ ಮಾಹಿತಿ ನೀಡುತ್ತಾರೆ.

ಅಕ್ರಮ ಮಣ್ಣು ಸಾಗಾಣಿಕೆಗೆ ಮಾತ್ರ ಈ ದಂಧೆ ಸೀಮಿತವಾಗದೆ ಅರಣ್ಯದೊಳಗಿನ ಬೆಲೆಬಾಳುವ ಮರಗಳನ್ನು ಸಹ ಮಣ್ಣಿನಡಿ ಸಾಗಿಸಲಾಗುತ್ತಿದೆ. ಅರಣ್ಯ ಇಲಾಖೆ, ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇಂತಹ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎನ್ನುವುದು ಸದ್ಯದ ಪ್ರಶ್ನೆಯಾಗಿದೆ.

ಲೇಔಟ್‌ಗಳಿಗೆ ಮಣ್ಣು

ಸಾಗರ ಪಟ್ಟಣ ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ನಗರಕ್ಕೆ ಸಮೀಪವಿರುವ ಬಹುತೇಕ ಜಮೀನುಗಳು ಲೇಔಟ್ ಆಗಿ ಪರಿವರ್ತನೆಯಾಗುತ್ತಿದೆ. ಲೇಔಟ್ ಅಭಿವೃದ್ಧಿಗೆ ನೂರಾರು ಲೋಡ್ ಮಣ್ಣುಗಳನ್ನು ಹಾಕುತ್ತಿದ್ದು, ಮಣ್ಣಿಗಾಗಿ ಆಯ್ಕೆ ಮಾಡಿಕೊಳ್ಳುತ್ತಿರುವ ಪ್ರದೇಶ ಅಕ್ಕಪಕ್ಕದ ಗ್ರಾಮಗಳ ಮೈದಾನ, ಅರಣ್ಯ ಪ್ರದೇಶ, ಕಂದಾಯ ಇಲಾಖೆಯ ಖಾಲಿ ಜಾಗವಾಗಿದೆ. ಅಧಿಕಾರಿಗಳಿಗೆ ಒಂದಷ್ಟು ಹಣ ಕೊಟ್ಟರೆ ಎಂತಹ ಅಕ್ರಮಗಳಿಗೆ ಬೇಕಾದರೂ ಅವಕಾಶ ಕೊಡುತ್ತಾರೆ ಎನ್ನುವ ಖಾತ್ರಿ ಮೇಲೆಯೆ ಇಂತಹ ಅವ್ಯವಹಾರ ನಡೆಯುತ್ತಿದೆ.

ಬೇಕಾಗಿದ್ದಾರೆ

ಹೊಸ ದಿಗಂತ ಶಿವಮೊಗ್ಗ ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಸೂಕ್ತ ಅಭ್ಯರ್ಥಿ ಬೇಕಾಗಿದ್ದಾರೆ.

ಹುದ್ದೆಯ ಹೆಸರು	ಸಂಖ್ಯೆ
ಆಫೀಸ್ ಅಕೌಂಟೆಂಟ್ (Office Acountent)	01

ವಿದ್ಯಾರ್ಹತೆ : ಬಿ.ಕಾಂ ಪದವಿ,(ಅಕೌಂಟ್ಸ್, ಟ್ಯಾಲಿ)
1 ರಿಂದ 3 ವರ್ಷ ಅಕೌಂಟ್ಸ್‌ನಲ್ಲಿ ಕೆಲಸ ಮಾಡಿರುವ ಅನುಭವವಿರಬೇಕು.
ಆಸಕ್ತರು ಈ ಕೆಳಕಂಡ ಈ ಮೇಲ್ ವಿಳಾಸಕ್ಕೆ ತಮ್ಮ ಸ್ವವಿವರವನ್ನು ಕಳುಹಿಸಬಹುದು.
hr@hosadigantha.in
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕರುಣಾಕರ.ಎಂ
ಶಾಖಾ ವ್ಯವಸ್ಥಾಪಕರು
ಮೊ.ನಂ:8970414580